
# ಅಖಿಲ ಭಾರತ ಪತ್ರಿಕೆ

## ಅಕ್ಟೋಬರ್ 2021

# ಶ್ರೀಮಾತೆ ಮತ್ತು ಪುಷ್ಪ-ವಾತ್ಸಲ್ಯ



ಬೆಲೆ : 15/-



ಮಗುದೊಮ್ಮೆ ಇವಳು ಬುವಿಯ ಮೃಣ್ಮಯದ ಮೇಲೆ ಮಾನವಿಯು ತಾನು
ಆದರೀಗಿದೋ ಅರೆಬಿರಿದ–ಪದ್ಮದೊಲು ಅವಳ ಮೊಗ್ಗು–ಹೃದಯ
ವಿಕಸನದಿ ಇಂದು ಮೃಣ್ಮಯದ ಕಿರಣವನು ಪಡೆದುಕೊಂಡು ಉದಯ;

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 5 ಪುಟ 527)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**ಅಖಿಲ ಭಾರತ ಪತ್ರಿಕೆ**
**ಅಕ್ಟೋಬರ್ 2021**

ಸಂಪುಟ: 31 ಸಂಚಿಕೆ: 10

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಶ್ರೀಮಾತೆ ಮತ್ತು ಪುಷ್ಪ–ವಾತ್ಸಲ್ಯ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಪುಷ್ಪಗಳ ಸಂದೇಶಗಳು** 5

**ಸುಮದಂತೆ ಇರು** 8
ಅನು: ಡಾ॥ ಮಹಾದೇವ ಸಕ್ರಿ

**ಪುಷ್ಪಗಳ ರಹಸ್ಯ** 12
ಅನು: ಪ್ರೊ. ವೀರಭದ್ರಪ್ಪ ಕೆ.

**ಪುಷ್ಪಗಳ ಉಪಾಖ್ಯಾನಗಳು** 20
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ವೇದ ರಹಸ್ಯ'** 33
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 39
ಅನು: ಜಾನ್ವಿ

**ಶ್ರೀ ಅರವಿಂದರ "ಋಗ್ವೇದದ ಪ್ರಥಮ ಋಕ್"** 51
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಕವನ "ಯಾರು"** 58
ಅನು: ಪುಟ್ಟು ಕುಲಕರ್ಣಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು** 59
– ಡಾ॥ ಶಂ.ಬಾ. ಜೋಶಿ

## ಸಂಪಾದಕರ ಟಿಪ್ಪಣಿ

ಪುಷ್ಪಗಳು ಸಸ್ಯಸಾಮ್ರಾಜ್ಯದ ಆತ್ಮಗಳು. ಹೀಗಾಗಿಯೇ ಭಾರತದಲ್ಲಿ ಈ ಪುಷ್ಪಗಳನ್ನು ದೇವರಿಗೆ ಅರ್ಪಿಸುವ ಮೂಲಕ ನಮ್ಮನ್ನು ನಾವೇ ದೇವರಿಗೆ ಸಮರ್ಪಿಸಿಕೊಳ್ಳುತ್ತಿದ್ದೇವೆ. ಇವುಗಳ ವೈದ್ಯಕೀಯ ಗುಣವನ್ನಂತೂ ಆಯುರ್ವೇದ ಮತ್ತು ಹೋಮಿಯೋಪತಿ ಶಾಸ್ತ್ರಗಳು ನಿತ್ಯ ನಿರಂತರವಾಗಿ ಅನುಷ್ಠಾನಿಸಕೊಂಡೇ ಪ್ರಗತಿ ಹೊಂದಿವೆ. ಈ ಪುಷ್ಪಗಳನ್ನೇ ಪ್ರೇಮ, ವಿಶ್ವಾಸ, ಭರವಸೆ, ಸ್ವಾಗತ, ವಿದಾಯ, ತೋಷ, ವಿಜಯದ ಪ್ರತೀಕವಾಗಿ ಮತ್ತು ಇನ್ನೂ ಅನೇಕ ಸಂದರ್ಭಗಳಲ್ಲಿ ನಾವು ಈ ಪುಷ್ಪಗಳನ್ನು ಉಪಯೋಗಿಸುತ್ತಿದ್ದೇವೆ. ಪ್ರತಿಯೊಂದು ಪುಷ್ಪವೂ ತನ್ನದೇ ಆದ ಪ್ರಗಾಢವಾದ ಆಧ್ಯಾತ್ಮಿಕ ಆಯಾಮವನ್ನು ಹೊಂದಿವೆ. ಈ ವಿಷಯವನ್ನೇ ಶ್ರೀಮಾತೆಯವರು ನಮಗೆ ಮನದಟ್ಟು ಮಾಡುತ್ತಿದ್ದಾರೆ. "ಪುಷ್ಪಗಳ ಆತ್ಮ"ವನ್ನು ಅರಿತುಕೊಳ್ಳುವ ಸಲುವಾಗಿಯೇ ಈ ಸಂಚಿಕೆಯನ್ನು ರೂಪಿಸಲಾಗಿದೆ. (ಎಐಎಮ್)

*

## ಸಂಪಾದಕೀಯ

ಆಕಾಶದಲ್ಲಿರುವ ನಕ್ಷತ್ರ ರಾಶಿಯನ್ನು ಭೂಮಿಯು ತನ್ನ ಒಡಲಲ್ಲಿ ಅವತರಿಸಿಕೊಂಡು ಪುಷ್ಪಗಳ ಸ್ವರೂಪದಲ್ಲಿ ಪ್ರಕಟಗೊಳಿಸಿಕೊಂಡು ತನಗೆ ತಾನೇ ಪ್ರಫುಲ್ಲಿತವಾಗಿ ನಗುತ್ತಾಳೆ; ತಾಯಿಯು ತನ್ನದೇ ಮಗುವಿನ ಅಂದ–ಚೆಂದವನ್ನು ಕಂಡು ಸಂತಸ ಪಡುವಂತೆ ಈ ಕ್ರಿಯೆ ಇರುತ್ತದೆ. ಒಂದು ವಿಶ್ವಾಸದ ಪ್ರಕಾರ, ಭೂಮಿಗೆ ಅವಿರತವಾಗಿ ಪ್ರವಹಿಸುತ್ತಿರುವ ನಕ್ಷತ್ರಗಳ ಸೂಕ್ಷ್ಮಾತಿಸೂಕ್ಷ್ಮ ಪ್ರಕಾಶದ ವೈವಿಧ್ಯತೆಯಿಂದಾಗಿ, ಪುಷ್ಪಗಳಲ್ಲಿಯೂ ಅಗಣಿತವಾದ ವೈವಿಧ್ಯತೆ ಸ್ವರೂಪಗೊಂಡಿರುತ್ತದೆ. "ಪತ್ರಂ ಪುಷ್ಪಂ ಫಲಂ ತೋಯಂ" ಎಂದು ದೇವತೆಗಳಿಗೆ ಅರ್ಪಿಸುವ ವಿಧಾನದಲ್ಲಿ ಇದನ್ನು ವಿವರವಾಗಿ ಕಾಣಬಹುದಾಗಿದೆ.

೧೨ನೇ ಶತಮಾನದ ಕವಿ ಹರಿಹರನಂತೂ "ಪುಷ್ಪರಗಳೆ" ಎನ್ನುವ ಕಾವ್ಯವನ್ನೇ ರಚಿಸಿದ್ದಾನೆ. ಅಲ್ಲಿ ಶಿವನ ಶಿರದಿಂದ ಪಾದದವರೆಗೆ ಯಾವ ಯಾವ ಪುಷ್ಪಗಳನ್ನು ಸಮರ್ಪಿಸಬೇಕು ಮತ್ತು ಅವುಗಳ ಆಧ್ಯಾತ್ಮಿಕ ಮಹತ್ವ ಏನು ಎನ್ನುವದನ್ನು ಸುಂದರವಾಗಿ ವರ್ಣಿಸಿದ್ದಾನೆ. ದೈನಂದಿನ ಬದುಕಿನಲ್ಲಿಯೂ ಸಹಿತ

ಪ್ರತಿಯೊಬ್ಬರೂ ದೇವತಾ ಪೂಜೆಗೆ ಪುಷ್ಪಗಳನ್ನು ಸಮರ್ಪಿಸಿಯೇ ಮುಂದಿನ ಹಂತವನ್ನು ಅನುಷ್ಠಾನಿಸುತ್ತಾರೆ. ಪಂಪುಳಿ ವರ್ಣದ ಸಂಪಿಗೆ ಹೂವು, ಕಲ್ಲಿನ ಹೊದರೊಳಗೆ ಮುಳ್ಳಿನ ಪೊದರೊಳಗೆ ಹುಟ್ಟುವ ಸ್ವರ್ಣವರ್ಣದ ಕೇದಗೆ, ಬೆಳ್ಳಿಯ ಎಸಳು ಬಂಗಾರದ ತೊಟ್ಟು ಹೊಂದಿರುವ ಪಾರಿಜಾತ, ಹೀಗೆ ಎಲ್ಲ ವಿಧದ ಪುಷ್ಪಗಳ ಆಧ್ಯಾತ್ಮಿಕ ಮಹತ್ವವನ್ನು, ಹಾಡಿನ ಮೂಲಕವೇ ಕಾಪಾಡಿಕೊಂಡು ಬಂದಿರುವ ಪರಂಪರೆ ಇದೆ. ಅದರಲ್ಲೂ ಪುಷ್ಪದ ಕುರಿತು ಸ್ತ್ರೀ ಸಮುದಾಯ ಹೊಂದಿರುವ ಕಕ್ಕುಲಾತಿ, ಪ್ರೇಮ, ವಾತ್ಸಲ್ಯ, ವಿಶ್ವಾಸ, ಆದರ, ಸಮರ್ಪಣೆಯಿಂದಾಗಿ 'ಪುಷ್ಪಗಳು ಸ್ತ್ರೀ ಸಮುದಾಯದೊಂದಿಗೆ ಮಾತನಾಡುತ್ತವೆ". ಇದರ ಆಧುನಿಕ ಪರಿಭಾಷೆಯಲ್ಲಿಯೂ ಅಭಿವ್ಯಕ್ತಗೊಂಡಿರುವದನ್ನು ಶ್ರೀಮಾತೆಯವರ ಈ "ಪುಷ್ಪ–ವ್ಯಾಖ್ಯಾನ"ದಲ್ಲಿ ಕಾಣಬಹುದಾಗಿದೆ.

ಮಾರ್ದವತೆ ಪುಷ್ಪದ ಸಹಜ ಗುಣ–ಸ್ವಭಾವ. ಪ್ರಕೃತಿಯೂ ಸಹಿತ ಮಾರ್ದವತೆಯಿಂದಲೇ ಸದಾ ವಿಕಸನಕ್ಕೆ ಪಥ ನಿರ್ಮಿಸುತ್ತಾಳೆ. ಅವಳ ವಿಕಸನದ ಗತಿ–ಗಮನವನ್ನು ಪ್ರದರ್ಶಿಸುತ್ತಿರುವದೇ ಪುಷ್ಪ–ಮೇಳ. ಸಂಶೋಧನಾ ಪ್ರವೃತ್ತಿ ಹೊಂದಿರುವ ಪುರುಷ ಸಮಾಜ, ಪುಷ್ಪಗಳನ್ನು ಗಮನಿಸಿದರೂ, ಅವುಗಳ ಆಧ್ಯಾತ್ಮಿಕ ಗುಣದೊಡನೆ ಸ್ಪಂದಿಸಲು ಸುದೀರ್ಘವಾದ ಸಾಧನೆಯನ್ನು ಮಾಡಬೇಕಾಗುತ್ತದೆ. ಈ ರೀತಿಯ ಮಾನವ ಸಮಾಜದ ವಾತಾವರಣದಲ್ಲಿ ಪುಷ್ಪಗಳ ಪಾತ್ರ ಏನು ಎನ್ನುವದರ ಕುರಿತು ಇಷ್ಟೊಂದು ಸವಿವರವಾದ ವಿಷಯಗಳನ್ನು, ಮನಾಕರ್ಷಕವಾಗಿರುವಂತೆಯೇ, ದೈನಂದಿನ ಘಟನೆಗಳ ಮೂಲಕವೇ ರೂಪಿಸಿರುವದು ಶ್ರೀಮಾತೆಯವರು ನಮಗೆ ನೀಡಿರುವ ವಾತ್ಸಲ್ಯಪೂರ್ಣ ಆಶಿರ್ವಾದವಾಗಿದೆ. (ಪಿಪಿಕೆ)



ಪುಷ್ಪವೊಂದು ಆತ್ಮೀಯ ಪ್ರೇಮ ಮತ್ತು ಪ್ರಶಾಂತಮಯ ಮಧುರತೆಯನ್ನು ತನ್ನದೇ ಆದ ಅಸ್ಮಿತೆಯಲ್ಲಿ ಹರಡುತ್ತದೆ. ಇದು ಮೌನವಾಗಿಯೇ ಇದ್ದು, ದುಃಖದಲ್ಲಿ ಹಾಗೂ ಯಾತನೆಯಲ್ಲಿ ಘಾಸಿಗೊಂಡ ಜೀವ ವಿನ್ಯಾಸಕ್ಕೆ ಪ್ರಶಾಂತತೆಯನ್ನು ಕೊಡುತ್ತದೆ. ಇದು ಯಾವಾಗಲೂ ನಿತ್ಯ–ನಿರಂತವಾದ ಸೌಷಮ್ಯವನ್ನು ಅಭಿವ್ಯಕ್ತಗೊಳಿಸುತ್ತಿದ್ದು, ಪ್ರೇಮಮಯ ಅಭಿವ್ಯಕ್ತಿಯನ್ನು ತನ್ನ ಆತ್ಮವನ್ನಾಗಿಸಿಕೊಂಡಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 25, 1961**

# ಪುಷ್ಪಗಳ ಸಂದೇಶಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಸಂಕಟದಿಂದ ಮತ್ತು ವ್ಯಥೆಯಿಂಥ ಛಿದ್ರಗೊಂಡ ಜಗತ್ತಿನಲ್ಲಿ ಒಂದು ಪುಷ್ಪವು ಆಳವಾದ ಪ್ರೇಮವನ್ನು ಮತ್ತು ನೆಮ್ಮದಿಯ ಮಾಧುರ್ಯವನ್ನು, ಒಂದು ವಿಶಿಷ್ಟವಾದ, ಸದ್ದಿಲ್ಲದ ಹಾಗೂ ಉದಾರ ಸಂಕೇತದಿಂದ ಪ್ರಚುರಪಡಿಸುತ್ತವೆ. ಅದು ಕೇವಲ ಪ್ರೇಮವು ಹೊಂದಿದಂಥ ನಿತ್ಯ ಪ್ರಸ್ತುತವಾದ ಒಂದು ಸಮರಸವನ್ನು ಅಭಿವ್ಯಕ್ತಪಡಿಸುತ್ತದೆ.

**ಸಂಕೇತಗಳ ಒಂದು ಹೊಸ ಭಾಷೆ**

ಇದೊಂದು (ಹೂವು) ದೈವಿಕದ ನಿರಂತರ ಸ್ಮರಣೆಯಾಗಿದೆ. ಇದು (ಹೂವು) ಜೀವನದ ಚೈತನ್ಯವಾಗಿದೆ ಹಾಗೂ ಶುದ್ಧೀಕೃತ ಜೀವನದ ಚೈತನ್ಯವಾಗಿದೆ. ಆಮೇಲೆ ವಿಧೇಯತೆ: ವಿಧೇಯತೆಯ ಶಾಂತಿ – ದೈವಕ್ಕೆ ವಿಧೇಯತೆ ಎಂದು ತಿಳಿದುಕೊಂಡ ಸಂಗತಿ! ಇದು ದೈವಿಕದ ಉತ್ಸುಕತೆ; ಇದು ಪರಿವರ್ತನೆಯ ಮಹತ್ವಾಕಾಂಕ್ಷೆ ಮತ್ತು ಪ್ರತಿಕ್ರಿಯೆ: ನೋಡು, ಅದು ಎಷ್ಟೊಂದು ಸುಂದರವಾಗಿದೆ – ಮಖಮಲ್ಲಿನ ಹಾಗೆ! ಅದು ಸಾಕ್ಷಾತ್ಕಾರದ ಭರವಸೆ. ಅಸ್ಪಷ್ಟತೆ ಇಲ್ಲದ ಬೆಳಕು ಇಲ್ಲಿದೆ, ಮತ್ತು ಅಂತಿಮವಾಗಿ ಸಾಕ್ಷಾತ್ಕಾರ....

ಪುಷ್ಪಗಳನ್ನು ಉಪಯೋಗಿಸಿ ನೀನು ಸರಳವಾಗಿ ಒಂದು ಭಾಷಣವನ್ನು ಮಾಡಬಹುದು. ಉದಾಹರಣೆಗಾಗಿ, ನಮಗೆ ಎಂದಿಗೂ ಅರ್ಥವಿಲ್ಲದ ಅಥವಾ ಪ್ರಾಚೀನ ದೀಕ್ಷೆಗಳ ಅಸ್ಪಷ್ಟ ಪದವಿನ್ಯಾಸದ ಪ್ರಾಚೀನ ವೈದಿಕ ರೂಪಗಳನ್ನು ಪರಿಣಾಮಕಾರಿಯಾಗಿ ಪುಷ್ಪಗಳು ಬದಲಿಸಬಹುದು ಎಂಬುದನ್ನು ನಾನು ಗಮನಿಸಿದ್ದೇನೆ. ಸುಮಗಳ ಭಾಷೆಯು ತುಂಬಾ ಒಳ್ಳೆಯದು, ಯಾಕೆಂದರೆ ಅದರಲ್ಲಿ ಬಲವು(ಶಕ್ತಿ) ಅಡಕವಾಗಿದೆ ಮತ್ತು ಅದು ಬಹಳೇ ಮೆದುವಾಗಿದೆ – ಅದು ಶಬ್ದಗಳಲ್ಲಿ ರೂಪಿತಗೊಂಡಿಲ್ಲದಿರುವುದರಿಂದ, ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಾನುಸಾರವಾಗಿ ಅದನ್ನು ಅಣಿಗೊಳಿಸಲು ಮತ್ತು ಸ್ವೀಕರಿಸಲು ಸ್ವತಂತ್ರನಾಗಿದ್ದಾನೆ. ಈ ಕುಸುಮಗಳನ್ನು ಉಪಯೋಗಿಸಿಕೊಂಡು ನೀನು ದೀರ್ಘವಾದ ಭಾಷಣಗಳನ್ನು ಮಾಡಬಹುದು!

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 25, 1961**

## ಪುಷ್ಪಗಳು ಮಾತನಾಡುತ್ತವೆ

ಅಲ್ಲಿರುವ ನನ್ನ ಸ್ನಾನಗೃಹದಲ್ಲಿ ಬೆಳಿಗ್ಗೆ ಒಂದು ಘಂಟೆ ನಾನು ಹೂಗಳನ್ನು ಜೋಡಿಸುತ್ತೇನೆ; ಎಲ್ಲ ಹೂಗಳನ್ನು ಅಲ್ಲಿ ಇಟ್ಟಿದ್ದರಿಂದ ನಾನು ಅವುಗಳನ್ನು ಆಯ್ದುಕೊಳ್ಳುತ್ತೇನೆ (ಪ್ರತಿ ಬೆಳಿಗ್ಗೆ ನಾನು ಅವುಗಳನ್ನು ವಿತರಿಸುತ್ತೇನೆ). ಅದು ಬಹು ಸುಂದರ! ಅದು ಅದ್ಭುತ. ಎಲ್ಲ ಪುಷ್ಪಗಳು ಮಾತನಾಡುತ್ತವೆ, ಹಾಗೆಯೆ ಅವುಗಳು ಜೀವವೊಂದನ್ನು ಪಡೆದುಕೊಂಡಿರುತ್ತವೆ – ಅವು ಅನುಭವಿಸುತ್ತವೆ. ಅವುಗಳನ್ನು ನಾನು ಮುದ್ದಿಸುವುದರಿಂದ ಅವು ಕಂಪಿಸುತ್ತವೆ. ರಾತ್ರಿಯಲ್ಲಿ ಕೆಲವು ಹೂಗಳು ಮುಚ್ಚಿಕೊಂಡಿರುವುದರಿಂದ ನಾನು ಅವುಗಳನ್ನು ತೆಗೆದುಕೊಂಡು ಅವುಗಳನ್ನು ನೋಡುತ್ತೇನೆ, ಅವುಗಳು ಮುದ್ದಾಗಿವೆ ಎಂದು ಅವುಗಳಿಗೆ ಹೇಳುತ್ತೇನೆ – ಅವುಗಳು ತೆರೆದುಕೊಳ್ಳುತ್ತವೆ. ನಿಜವಾಗಿಯೂ ಅದೊಂದು ಹಿತವಾದ ನೋಟ. ಶ್ರೀಮಾತೆಯವರು ಒಂದು ಗುಲಾಬಿಯನ್ನು ಹಿಡಿದು ಇದನ್ನು ನೋಡು ಎಂದು ಹೇಳುತ್ತಾರೆ!

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 10, 1968**

## ಪುಷ್ಪಗಳ ನಡುವಿನ ಪ್ರತಿಕ್ರಿಯೆ

ನಾನು ಹೂವುಗಳನ್ನು ಕಳಿಸಿಕೊಡುವ ಮತ್ತು ಪ್ರತಿಯಾಗಿ ಪ್ರತಿದಿನವೂ ನನಗೆ ಹೂವುಗಳನ್ನು ಕಳಿಸುವಂಥ ಯೋಗವನ್ನು ಶ್ರದ್ಧೆಯಿಂದ ಮಾಡುವ ವ್ಯಕ್ತಿಯೊಬ್ಬನಿದ್ದಾನೆ. ಕೆಲವು ಸುವರ್ಣ ದಾಸವಾಳಗಳನ್ನು ಅವನು ನನಗೆ ಕಳಿಸಿಕೊಡುತ್ತಾನೆ. ಇವುಗಳಲ್ಲಿಯ ಒಂದು ಹೂವಿಗೆ "ನೀನು ಶ್ರೀಮಾತೆಯವರನ್ನು ನೋಡಲು ಹೋಗುತ್ತಿರುವಿ" ಎಂದು ನನಗೆ ಬರೆದಿದ್ದನು; ಆ ಹೂವು ನಕ್ಕಿತು. ಅದು ಅರಳಿತು, ಅದು ಆನಂದವಾಗಿತ್ತು ಹಾಗೂ ನನ್ನನ್ನು ನೋಡಿ ನಕ್ಕಿತು ಎಂದು ಹೇಳಿದ.

ಪ್ರಗತಿ ಹೊಂದುವುದು ನಮ್ಮ ಗ್ರಹಿಕೆಯಾಗಿದೆಯೋ ಅಥವಾ ನಿಜವಾಗಿಯೂ ಶ್ರೀ ಅರವಿಂದರು ಹೇಳಿದಂತೆ, "ಭೂಮಿಯ ಮೇಲೆ ಅತಿಮಾನಸ ಶಕ್ತಿ ಬಂದಾಗ ಎಲ್ಲೆಡೆಯೂ ಪ್ರತಿಕ್ರಿಯೆ ಇರುತ್ತದೆಯೋ" ಎಂದು ನನಗೆ ಗೊತ್ತಿಲ್ಲ. ಅದು ಹಾಗೆ ಇರಬೇಕೆಂದು ನನಗೆ ತೋರುತ್ತದೆ, ಯಾಕೆಂದರೆ ಈ ಹೂವುಗಳು

ರೋಮಾಂಚನಗೊಳಿಸುವಂಥವು, ಪ್ರಾಣದಿಂದ ತುಂಬಿದಂಥವು ಆಗಿವೆ. ಮುಂಜಾನೆ ಅವುಗಳನ್ನು ನಾನು ಯಾವಾಗಲೂ ಹೂದಾನಿಗಳಲ್ಲಿ ಜೋಡಿಸುತ್ತೇನೆ (ಸುಮಾರು ಮುಕ್ಕಾಲು ಘಂಟೆ ತೆಗೆದುಕೊಳ್ಳುವ ಕೆಲಸ ಇದಾಗಿದೆ, ಬೇರೆ ಬೇರೆ ಹೂದಾನಿಗಳಲ್ಲಿರುವ ನೂರಕ್ಕಿಂತ ಹೆಚ್ಚು ಹೂಗಳನ್ನು ನಾನು ಜೋಡಿಸಬೇಕು – ಪ್ರತಿಯೊಬ್ಬರಿಗೂ ಕೊಡಬೇಕಾದ ವಿಶಿಷ್ಟ ಹೂಗಳನ್ನು ನಾನು ಜೋಡಿಸಬೇಕು), ಆಗ ಕೆಲವು ಹೂಗಳು ಹೀಗೆ ಹೇಳುತ್ತವೆ, "ನಾನು." ವಾಸ್ತವವಾಗಿ ನನಗೇನು ಬೇಕೋ, ಅವು ಅದಾಗಿವೆ. "ನಾನು" ಎಂದು ಹೇಳಲು ಅವು ನನ್ನನ್ನು ಕೂಗುತ್ತವೆ!.... ಆದರೆ ಅದು ಹೊಸತೇನಲ್ಲ, ಯಾಕೆಂದರೆ ನಾನು ಜಪಾನಿನಲ್ಲಿದ್ದಾಗ, ಒಂದು ದೊಡ್ಡ ಉದ್ಯಾನದಲ್ಲಿ ಒಂದು ಭಾಗವನ್ನು ತರಕಾರಿಗಳನ್ನು ಬೆಳೆಯಲು ಉಪಯೋಗಿಸುತ್ತಿದ್ದೆ; ಆ ದಿನ ತಿನ್ನಲು ಬೇಕಾದ ತರಕಾರಿಗಳನ್ನು ತರಲೆಂದು ಬೆಳಿಗ್ಗೆ ಉದ್ಯಾನಕ್ಕೆ ಹೋಗುತ್ತಿದ್ದೆ. ಅವುಗಳಲ್ಲಿ ಕೆಲವು ಹೂವುಗಳು (ಶ್ರೀಮಾತೆಯವರು ಸಂಜ್ಞೆ ಮಾಡಿ ಹೇಳುತ್ತಿದ್ದರು) "ನಾನು, ನಾನು, ನಾನು" ಎಂದು ಹೇಳುತ್ತಿತ್ತವು. ಆಗ ನಾನು ಅವುಗಳನ್ನು ಆಯ್ದುಕೊಳ್ಳುತ್ತಿದ್ದೆ. ಅಕ್ಷರಶಃ ಅವು ನನ್ನನ್ನು ಕರೆಯುತ್ತಿದ್ದವು.

ಅದು ಬಹಳ ಸಮಯದ ಹಿಂದೆ, ಹತ್ತೊಂಬತ್ತು ನೂರಾ .... ಅದು ಯಾವಾಗ? ಅದು 1916–17ರಲ್ಲಿ, ಸುಮಾರು ನಲವತ್ತು ವರ್ಷಗಳ ಹಿಂದೆ. ಐವತ್ತು .. ಐವತ್ತು ವರ್ಷಗಳ ಹಿಂದೆ (ಶ್ರೀಮಾತೆಯವರು ನಗುತ್ತಾರೆ).

ಆದರೆ ಇಂದು, ಬೆಳಿಗ್ಗೆ, ನಾನು ಯೋಚನೆ ಮಾಡದೆ, ಸುಮ್ಮನಿರದೆ ನೇರವಾಗಿ ಹೂವುಗಳ ಹತ್ತಿರ ಹೋಗುತ್ತೇನೆ, ಆಗ ಅವುಗಳು "ನಾನು! ನಾನು!..." ಎಂದು ಹೇಳುತ್ತವೆ. ನಾನು ಆಶ್ಚರ್ಯದಿಂದ "ಅದ್ಭುತ, ಇದುವೆ ನನಗೆ ಬೇಕಾಗಿದ್ದು!" ಎಂದು ಹೇಳುತ್ತೇನೆ.

**ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 7, 1968**

# ಸುಮದಂತೆ ಇರು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಸುಮದಂತೆ ಇರು. ನಾವು ಹೂವಿನಂತಾಗಲು ಪ್ರಯತ್ನಿಸಬೇಕು: ಮುಕ್ತ, ಮುಗ್ಧ, ಸಮಾನವಾದ, ಉದಾರ ಮತ್ತು ದಯಾಪರ. ಹಾಗೆಂದರೇನೆಂದು ನಿನಗೆ ಗೊತ್ತೆ?

ಹೂವು, ತನ್ನಿಂದ ಆವರಿಸಲ್ಪಟ್ಟ ಎಲ್ಲದಕ್ಕೂ ಮುಕ್ತವಾಗಿರುತ್ತದೆ: ಪ್ರಕೃತಿ, ಬೆಳಕು, ಸೂರ್ಯನ ಕಿರಣಗಳು, ಗಾಳಿ, ಇತ್ಯಾದಿ. ಅದರ ಸುತ್ತ–ಮುತ್ತಲಿರುವ ಎಲ್ಲದರ ಮೇಲೂ ಸಹಜವಾಗಿ ಪರಿಣಾಮ ಬೀರುತ್ತದೆ. ಅದು ಆನಂದವನ್ನು ಮತ್ತು ಸೌಂದರ್ಯವನ್ನು ಹರಡುತ್ತದೆ.

ಅದು (ಹೂವು) ಮುಗ್ಧವಾಗಿದೆ: ತನ್ನ ಸೌಂದರ್ಯದ ಯಾವುದನ್ನೂ ಅದು ಮರೆಮಾಚುವುದಿಲ್ಲ, ಅದು ತನ್ನಿಂದ ತಾನೇ ನೇರವಾಗಿ ಹರಿಯಲು ಬಿಡುತ್ತದೆ. ಅಂತರಾಳದಲ್ಲಿ ಏನಿದೆಯೊ ಅದನ್ನು ಪ್ರತಿಯೊಬ್ಬರೂ ನೋಡಲೆಂದು ಹರಿಯ ಬಿಡುತ್ತದೆ.

ಅದು ಸಮಾನವಾಗಿದೆ: ಅದು ಆದ್ಯತೆ ಹೊಂದಿಲ್ಲ. ಪೈಪೋಟಿ ಇಲ್ಲದೆ ಪ್ರತಿಯೊಬ್ಬರೂ ಅದರ ಸೌಂದರ್ಯವನ್ನು ಆನಂದಿಸಬಹುದು. ಅದು ಎಲ್ಲರಿಗೂ ಸಮನಾಗಿದೆ ಮತ್ತು ಒಂದೇ ಆಗಿದೆ, ಅಲ್ಲಿ ಯಾವುದೇ ವತ್ಯಾಸವಿಲ್ಲ.

ಉದಾರತೆ: ಪರಿಮಿತಿ ಇಲ್ಲದೆ ಅಥವಾ ನಿರ್ಬಂಧವಿಲ್ಲದೆ ಅದು ರಹಸ್ಯವಾದ ಸೌಂದರ್ಯವನ್ನು ಮತ್ತು ಪ್ರಕೃತಿಯ ಸುಗಂಧವನ್ನು ಯಾವ ರೀತಿ ಕೊಡುತ್ತದೆ. ನಮ್ಮ ತೃಪ್ತಿಗಾಗಿ ಅದು ಸಂಪೂರ್ಣವಾಗಿ ತನ್ನನ್ನು ತಾನು ತ್ಯಾಗ ಮಾಡುತ್ತದೆ. ತನ್ನ ಈ ಸೌಂದರ್ಯವನ್ನು ಮತ್ತು ತನ್ನಲ್ಲಿ ಅಡಕವಾದ ರಹಸ್ಯ ಸಂಗತಿಗಳನ್ನು ವ್ಯಕ್ತಪಡಿಸಲು ತನ್ನ ಜೀವನವನ್ನು ಸಹ ತ್ಯಾಗ ಮಾಡುತ್ತದೆ.

ದಯಾಪರ: ಅದು ಮೃದುತ್ವವನ್ನು ಹೊಂದಿದೆ, ಅದು ಮಧುರವಾಗಿದೆ, ನಮಗೆ ಬಹಳ ಹತ್ತಿರವಾಗಿದೆ, ಸ್ನೇಹಮಯವಾಗಿದೆ. ಅದರ ಉಪಸ್ಥಿತಿಯು ನಮ್ಮನ್ನು ಸಂತೋಷಪಡಿಸುತ್ತದೆ. ಅದು ಯಾವಾಗಲೂ ಹರ್ಷವಾಗಿರುತ್ತದೆ ಮತ್ತು ಸಂತೋಷವಾಗಿರುತ್ತದೆ.

ಯಾವನು ತನ್ನ ಗುಣಗಳನ್ನು ಹೂವಿನ ನಿಜವಾದ ಗುಣಗಳ ಜೊತೆ ವಿನಿಮಯ ಮಾಡಿಕೊಳ್ಳುತ್ತಾನೊ, ಅವನು ಸಂತೋಷವಾಗಿರುತ್ತಾನೆ. ಅವುಗಳ ನಿರ್ಮಲ ಗುಣಗಳನ್ನು ನಿಮ್ಮಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿರಿ.

**– ಶ್ರೀಮಾತೆ**

## ಹೂವಿನ ಮೇಲೊಂದು ಧ್ಯಾನ

ಬೆಳಗಿನ ಜಾವದಲ್ಲಿ ನೀವು ಎಂದಾದರೂ ಉದ್ಯಾನವನಕ್ಕೆ ಹೋಗಿದ್ದೀರಾ? ಹೂವುಗಳು ಸೂರ್ಯನಿಗೆ ಅಭಿಮುಖವಾಗಿರುತ್ತವೆ ಮತ್ತು ಅವನ ಉದಯಕ್ಕೆ ಎದುರು ನೋಡುತ್ತಿರುತ್ತವೆ. ಬರುವ ಬೆಳಕಿಗಾಗಿ ಸುತ್ತಲೆಲ್ಲವೂ ಉಕ್ಕುವ ಶಕ್ತಿಶಾಲಿಯಾದ ಹಂಬಲವನ್ನು ನೀವು ಅನುಭವಿಸಿದ್ದೀರಾ?

ಪೂರ್ಣ ಮುಚ್ಚಿದ ಮೊಗ್ಗು ಹೇಗೆ ನಿಧಾನವಾಗಿ, ಅದ್ಭುತವಾಗಿ ಒಂದೊಂದಾಗಿ ತನ್ನ ದಳಗಳನ್ನು ತೆರೆದುಕೊಳ್ಳುತ್ತದೆ ಎನ್ನುವುದನ್ನು ನೀವು ಗಮನಿಸಿದ್ದೀರಾ? ಈ ಶಕ್ತಿ, ಈ ಚೈತನ್ಯ, ಈ ಮಿಡಿಯುವ ಜೀವನ ಎಲ್ಲಿಂದ ಬಂತು?

ಕೆಲವು ಮಳೆಹನಿಗಳನ್ನು ಪಡೆದುಕೊಂಡ ನಂತರದ ಭೂಮಿಯನ್ನು ನೋಡಿದ್ದೀಯಾ? ಧನ್ಯವಾದ ಸೂಚಿಸುವ ಭಾವದಲ್ಲಿ ಬಹುವರ್ಣದ ಚಿಕ್ಕ ಕೈಗಳು ಭೂಮಿಯಿಂದ ಹೊರಗೆ ಬರುತ್ತವೆ. ಅವುಗಳು, ಶ್ರೀಮಾತೆಯವರಿಂದ ಪ್ರಾರ್ಥನೆ□ಎಂದು ಹೆಸರಿಸಲ್ಪಟ್ಟ ಮುದ್ದಾದ ಲಿಲ್ಲಿ ಹೂಗಳು. ಕೃತಜ್ಞತೆಯ ಕಂಪನವನ್ನು ನಾವು ಖಚಿತವಾಗಿ ಅನುಭವಿಸಬಹುದು ಮತ್ತು ಪ್ರಕೃತಿಯ ಈ ಸಹಜ ಮತ್ತು ಸುಂದರ ಪ್ರಕೃತಿಯತ್ತ ನಾವು ಆನಂದದಲ್ಲಿ ನೋಡುತ್ತೇವೆ. ಕೃಪೆಗೆ ಎಷ್ಟೊಂದು ಮುಕ್ತ! ಒಂದು ವೇಳೆ ನಾವು ಹಾಗೆ ಮಾತ್ರ ಇದ್ದರೆ....

ಒಂದು ಪುಷ್ಪಕ್ಕೆ ಮತ್ತು ಒಂದು ಮಗುವಿಗೆ ಯಾವುದು ಅದರ ಅಂದವನ್ನು, ಅದರ ಮಧುರತೆಯನ್ನು, ಅದರ ಸ್ವ–ಕೊಡುವಿಕೆಯ ಆನಂದದ ಅನುಭವವನ್ನು ಕೊಡುತ್ತದೆ? ಅದು ಪುಷ್ಪಗಳಲ್ಲಿಯ, ಪ್ರಕೃತಿಯಲ್ಲಿಯ ದೈವೀ ಉಪಸ್ಥಿತಿ. ಅದನ್ನು ನಾವು ಚೈತ್ಯನದ ಉಪಸ್ಥಿತಿ□ಎಂದು ಕರೆಯುತ್ತೇವೆ. ಪುಷ್ಪಗಳ ಪ್ರೇಮವು ನಮ್ಮ ಸ್ವಂತ ಚೈತ್ಯ ಪುರುಷನನ್ನು ನಮ್ಮಲ್ಲಿರುವ ದೇವನನ್ನು ಕಂಡುಕೊಳ್ಳಲು ಸಹಾಯ ಮಾಡಬಹುದು.

*

ನಿಸ್ವಾರ್ಥ ಚಲನೆ, ಲೆಕ್ಕಾಚಾರ ಮಾಡದ ಚೈತ್ಯ ಪ್ರಜ್ಞೆಯು ಜಗತ್ತಿನಲ್ಲಿಯೇ ಅತ್ಯಂತ ಸುಂದರ ರೂಪಗಳಲ್ಲಿ ಒಂದಾಗಿದೆ. ಆದರೆ, ಮಾನಸ ಕ್ರಿಯೆಗಳ ಶ್ರೇಣಿಯ ಎತ್ತರಕ್ಕೆ ಬೆಳೆದ ಹಾಗೆ ಅದು ವಿರಳವಾಗುತ್ತದೆ. ಬುದ್ಧಿವಂತಿಕೆಯ ಮುಖಾಂತರ ಎಲ್ಲ ಕೌಶಲ ಮತ್ತು ಜಾಣತನ, ಭ್ರಷ್ಟಾಚಾರ, ಲೆಕ್ಕಾಚಾರ ಬರುತ್ತದೆ. ಉದಾಹರಣೆಗಾಗಿ, ಒಂದು ಹೂವು ಅರಳಿದಾಗ ಅದು ಸಹಜವಾಗಿ ಆಗುತ್ತದೆ, ಸುಂದರವಾಗಿರುವ ಆನಂದಕ್ಕಾಗಿ, ಮಧುರ ಸುವಾಸನೆಗಾಗಿ, ತನ್ನ ಇರುವಿಕೆಯ ಎಲ್ಲ ಆನಂದವನ್ನು

ವ್ಯಕ್ತಪಡಿಸುವುದಕ್ಕಾಗಿ. ಅದು ಲೆಕ್ಕ ಮಾಡುವುದಿಲ್ಲ, ಅದರಿಂದ ಅದಕ್ಕೇನೂ ಆಗಬೇಕಾಗಿಲ್ಲ: ಇರುವ ಮತ್ತು ಜೀವಿಸುವ ಆನಂದದಲ್ಲಿ ಅದು ಸಹಜವಾಗಿ ಅರಳುತ್ತದೆ. ಮನುಷ್ಯರನ್ನು ತೆಗೆದುಕೊಳ್ಳೋಣ (ಕೆಲವರನ್ನು ಹೊರತುಪಡಿಸಿ) ಅವರ ಮನಸ್ಸು ಕ್ರಿಯಾಶೀಲವಾದ ಕ್ಷಣದಿಂದ ತನ್ನ ಸೌಂದರ್ಯದಿಂದ ಮತ್ತು ಜಾಣತನದಿಂದ ಸ್ವಲ್ಪ ಲಾಭವನ್ನು ಪಡೆಯಲು ಪ್ರಯತ್ನಿಸುತ್ತದೆ; ಅವುಗಳು ಅವರಿಗೆ ಏನನ್ನಾದರೂ ತರಬೇಕೆಂದು ಆಶಿಸುತ್ತಾರೆ, ಮೆಚ್ಚುಗೆ ಅಥವಾ ಇನ್ನೂ ಹೆಚ್ಚಿನ ಲಾಭವನ್ನೂ ಸಹ. ಪರಿಣಾಮವಾಗಿ, ಚೈತ್ಯನ ದೃಷ್ಟಿಕೋನದಿಂದ, ಗುಲಾಬಿಯು ಮನುಷ್ಯನಿಗಿಂತ ಉತ್ತಮವೆನಿಸುತ್ತದೆ.

ಒಂದು ವೇಳೆ ಏಣಿಯ ಮೆಟ್ಟಿಲನ್ನು ಏರಿ, ಗುಲಾಬಿಯು ಅ–ಪ್ರಜ್ಞಾ–ಪೂರ್ವಕವಾಗಿ ಮಾಡುವುದನ್ನು ನೀನು ಪ್ರಜ್ಞಾಪೂರ್ವಕವಾಗಿ ಮಾಡಿದರೆ ಅದು ಬಹಳೇ ಸುಂದರ. ಆದರೆ ಅದು ಸುಂದರತೆಯ ಸಹಜವಾದ ಅರಳುವಿಕೆಯಾಗಬೇಕು; ಲೆಕ್ಕಾಚಾರವಿಲ್ಲದ, ಸುಮ್ಮನೆ ಅಸ್ತಿತ್ವದ ಆನಂದಕ್ಕಾಗಿ ಇರಬೇಕು. ಚಿಕ್ಕ ಮಕ್ಕಳಲ್ಲಿ ಕೆಲವೊಮ್ಮೆ ಇದು ಇರುತ್ತದೆ (ಕೆಲವೊಮ್ಮೆ, ಆದರೆ ಯಾವಾಗಲೂ ಅಲ್ಲ). ದುರದೃಷ್ಟವಶಾತ್, ಅವರ ಪೋಷಕರ ಮತ್ತು ವಾತಾವರಣದ ಪ್ರಭಾವದಲ್ಲಿ ಅವರು ಬಹಳೇ ಎಳೆಯವರಿದ್ದಾಗ ಲೆಕ್ಕಾಚಾರ ಮಾಡಲು ಕಲಿಯುತ್ತಾರೆ.

ಒಬ್ಬರ ಹತ್ತಿರವಿರುವ ಅಥವಾ ಒಬ್ಬರು ಮಾಡುವಂಥ ಏನಾದರೊಂದನ್ನು ಲಾಭ ಹೊಂದಲು ಅಪೇಕ್ಷೆ ಮಾಡುವ ಕೆಲಸ ಜಗತ್ತಿನಲ್ಲಿಯೆ ಅಪಾಯಕರ ಸಂಗತಿಗಳಲ್ಲಿ ಒಂದಾಗಿದೆ. ಹಾಗೆಯೆ, ಇದು ಎಷ್ಟೊಂದು ವ್ಯಾಪಕವಾದ ಮತ್ತು ಹಾಸು ಹೊಕ್ಕಾದ ಸಂಗತಿಯಾಗಿದೆ ಎಂದರೆ ಅದು ಮನುಷ್ಯನಲ್ಲಿ ಬಹುತೇಕ ಸ್ವಪ್ರಚೋದಿತವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/240–41**

## ಪುಷ್ಪಗಳು ಮತ್ತು ಮನುಷ್ಯರು

ನಿಮಗೆ ಗೊತ್ತೆ, ಒಂದು ಆಳವಾದ ಪ್ರೀತಿಯನ್ನು ಮತ್ತು ನೆಮ್ಮದಿಯ ಮಾಧುರ್ಯವನ್ನು ಒಂದು ವಿಶಿಷ್ಟವಾದ, ಸದ್ದಿಲ್ಲದ ಹಾಗೂ ಉದಾರ ಸಂಕೇತದಿಂದ ಸುಮಗಳು ಪ್ರಚುರಪಡಿಸುತ್ತದೆ. ಅದು ಹೋಲಿಸಲಾರದ್ದು. ಪ್ರಕೃತಿಯ ಈ ಚಲನೆಯು ಸಂಕಟದಿಂದ ಮತ್ತು ವ್ಯಥೆಯಿಂದ ಛಿದ್ರಗೊಂಡ

ಜಗತ್ತಿನಲ್ಲಿ ಸಮತೋಲನವನ್ನು ತರುತ್ತದೆ. ಮನುಷ್ಯನಿಗೆ ಸಂಬಂಧಿಸಿದಂತೆ ಈ ಚಲನೆಯು ಮತ್ತೊಂದು ದಿಶೆಯಲ್ಲಿರುವಂಥದ್ದು – ಅದು ಭೌತಿಕ ಸ್ತರದಲ್ಲಿ ಬದಲಾಯಿಸಲಾರದ ಸಾಮರಸ್ಯವನ್ನು ವ್ಯಕ್ತಪಡಿಸುತ್ತದೆ. ಇದು ಇನ್ನೊಂದು ಚಲನೆಯನ್ನು ವಿರೋಧಿಸುತ್ತದೆ ಮತ್ತು ಸಮತೋಲನವನ್ನು ತರುತ್ತದೆ ಮತ್ತು ಅಸ್ತಿತ್ವಕ್ಕೆ ಒಂದು ಅರ್ಥವನ್ನು ಕೊಡುತ್ತದೆ; ಒಂದು ಕೊಡುತ್ತಲೇ ಇರುತ್ತದೆ ಹಾಗೂ ಮತ್ತೊಂದು ತೆಗೆದುಕೊಳ್ಳುತ್ತಲೇ ಇರುತ್ತದೆ ಮತ್ತು ಇತರರಿಗೆ ಏನನ್ನೂ ಬಿಡುವುದಿಲ್ಲ. ಹೋಲಿಕೆಯಲ್ಲಿ ಮನುಷ್ಯನು ಬಹಳೇ ಸ್ವಾರ್ಥಪರ ಮತ್ತು ಅಲ್ಪನಾಗಿದ್ದಾನೆ. ಇನ್ನೊಬ್ಬರಿಂದ ಪಡೆದುಕೊಂಡ ಮನುಷ್ಯನು ಎಂದಿಗೂ ತೃಪ್ತಗೊಂಡಿಲ್ಲವೆಂಬುದು ದುರಂತದ ಸಂಗತಿಯಾಗಿದೆ.

ಮನುಷ್ಯನಲ್ಲಿ ಕೃತಜ್ಞತಾ ಭಾವದ ಕೊರತೆ ಇದೆ. ವಿಕಸನದ ಏಣಿಯ ಮೇಲೆ ಉನ್ನತ ಸ್ತರದಲ್ಲಿ ಇದ್ದೇನೆ, ತನಗೆ ಎಲ್ಲದಕ್ಕೂ ಹಕ್ಕಿದೆ ಎಂದು ಭಾವಿಸುತ್ತಾನೆ. ಅದು ಅಸಂಬದ್ಧ! ಅದು ಯಾಕೆಂದರೆ, ಪ್ರಕೃತಿ ಮಾತೆ ತನ್ನನ್ನು ತಾನು ಸಹಜವಾಗಿ ನೀಡುವುದರಿಂದ ಮತ್ತು ಈ ವಿರುದ್ಧವಾದ ಚಲನೆಯನ್ನು ರದ್ದುಗೊಳಿಸುವುದರಿಂದ ಭೂಮಿಯು ಇನ್ನೂ ವಾಸಯೋಗ್ಯವಾಗಿದೆ.

ಮನಸ್ಸಿನೊಂದಿಗೆ ಭಿನ್ನತೆಯ ನಾನು ಎಂಬ ಒಡೆತನದ ಅಹಂಕಾರದ ಭಾವ ಬಂದಿದೆ. ಈ ಭಾವ ಮನುಷ್ಯನನ್ನು ಅತಿ ಕೆಳಗೆ ಎಳೆಯುತ್ತದೆ ಮತ್ತು ಅವನನ್ನು ಅಲ್ಪನನ್ನಾಗಿ ಹಾಗೂ ಕ್ಷುದ್ರನನ್ನಾಗಿ ಮಾಡುತ್ತದೆ. ಅವನ ಶಿಕ್ಷಣ, ಅವನ ಅನ್ವೇಷಣೆಗಳು, ಅವನ ವೈಜ್ಞಾನಿಕ ಸಾಧನೆಗಳು, ತನ್ನಲ್ಲಿರುವ ಎಲ್ಲ ಅನುಕೂಲತೆಗಳೊಂದಿಗೆ ಇವುಗಳು ಅವನನ್ನು ಶ್ರೀಮಂತಗೊಳಿಸಿವೆ, ಆರಾಮದಾಯಕಗೊಳಿಸಿವೆ ಹಾಗೂ ಸುರಕ್ಷತೆಗೊಳಿಸಿವೆ ಮತ್ತು ಅಪಾಯಗಳಿಂದ ಕಾಪಾಡಿವೆಯಾದರೂ ಅವನು ಸೊಕ್ಕಿನವ, ದುರಭಿಮಾನಿ ಮತ್ತು ರೋಗಗ್ರಸ್ತ. ಆದರೂ ಸಹ ಇವುಗಳು ಅವನನ್ನು ನಿಜ ಮಾನವನನ್ನಾಗಿ ಮಾಡಿಲ್ಲ. ಮಾನವನ ಈ ಅವಸ್ಥೆ ಅತ್ಯಂತ ದರಿದ್ರ! ಇದು ಬೇರೆ ರೀತಿಯಾಗಿರಬಹುದೆಂದು ನಾವು ಆಶಯ ಮಾಡಬಹುದು. ಅವನೆಷ್ಟು ವಕ್ರ ಬುದ್ಧಿಯವನೆಂದರೆ, ಇನ್ನೊಬ್ಬರನ್ನು ಮೋಸಗೊಳಿಸುವ ಆನಂದದಲ್ಲಿ ಅವನು ತನ್ನನ್ನು ತಾನು ಮೋಸಗೊಳಿಸಿಕೊಳ್ಳುತ್ತಿದ್ದಾನೆ. ಇದರ ಅರಿವು ಕೂಡ ಅವನಿಗಿಲ್ಲ. ಅದು ಪ್ರಲಾಪಿಸಿದಷ್ಟು ದರಿದ್ರ. ಇದೆಲ್ಲವನ್ನೂ ಅವನು ಯಾವಾಗ ಜಯಿಸುತ್ತಾನೊ?

**Throb of Nature (ಪ್ರಕೃತಿಯ ಮಿಡಿತ) ಪುಟ 143–44**

# ಪುಷ್ಪಗಳ ರಹಸ್ಯ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

## ಪುಷ್ಪಗಳಲ್ಲಿನ ಪ್ರೀತಿ

*ಪುಷ್ಪಗಳು ಪ್ರೀತಿ ಮಾಡುತ್ತವೆಯೋ?*

ಅವುಗಳು ಪ್ರೀತಿಯ ಆಕಾರರೂಪ, ಈ ಅರಳುವಿಕೆ. ಖಚಿತವಾಗಿ, ಯಾವಾಗ ಗುಲಾಬಿಯು ಸೂರ್ಯನೆಡೆಗೆ ಇದು ತನ್ನ ಸೌಂದರ್ಯವನ್ನು ಕೊಡಲು ಬಯಸಿದ ಹಾಗೆ ತೆರೆದುಕೊಳ್ಳುವುದನ್ನು ನೋಡುತ್ತೇವೆ, ನಮಗೆ ಅದು ಹೆಚ್ಚಾಗಿ ಅರ್ಥವಾಗುವುದಿಲ್ಲ, ಅವುಗಳು ಏನು ಮಾಡುತ್ತಿವೆ ಎಂದು ಆಲೋಚಿಸುವುದಿಲ್ಲ. ಮಾನವ ಜೀವಿ ಯಾವಾಗಲೂ ತಾನು ಮಾಡುವ ಕೆಲಸಗಳನ್ನು ತಾನೇ ನೋಡುತ್ತಾ ಮಾಡುವ ಸಾಮರ್ಥ್ಯವನ್ನು ಹೊಂದಿದ್ದಾನೆ, ಏನೆಂದರೆ, ತನ್ನ ಬಗ್ಗೆ ತಾನು ಆಲೋಚನೆ ಮಾಡುತ್ತಾ, ತಾನು ಮಾಡುವುದರ ಬಗ್ಗೆ ಆಲೋಚಿಸುತ್ತಾ, ಮನುಷ್ಯ ತಾನು ಏನು ಮಾಡುತ್ತಿರುವೆನೆಂದು ಗೊತ್ತಿರುತ್ತದೆ. ಪ್ರಾಣಿಗಳು ಆಲೋಚಿಸುವುದಿಲ್ಲ. ಅದೇ ಸ್ವರೂಪದ ಪ್ರೀತಿ ಅಲ್ಲ. ಮತ್ತು ಹೂವುಗಳು ಹೇಳಬೇಕೆಂದರೆ, ಪ್ರಜ್ಞೆಯಿಂದಿರುವುದಿಲ್ಲ:

ಅದೊಂದು ಸಹಜವಾದ ಕ್ರಿಯೆ, ತನ್ನನ್ನು ತಾನು ತಿಳಿದುಕೊಳ್ಳುವಷ್ಟು ಪ್ರಜ್ಞೆ ಇರುವುದಿಲ್ಲ, ಇರುವುದೇ ಇಲ್ಲ. ಆದರೆ ಅವುಗಳ ಮೂಲಕ ಹೆಚ್ಚಿನ ಶಕ್ತಿ ಕೆಲಸ ಮಾಡುತ್ತಿರುತ್ತದೆ ಉನ್ನತವಾದ ವಿಶ್ವಾತ್ಮಕ ಪ್ರಜ್ಞೆ ಮತ್ತು ಉನ್ನತವಾದ ವಿಶ್ವಾತ್ಮಕ ಪ್ರೀತಿಯ ಶಕ್ತಿ ಕೆಲಸ ಮಾಡುತ್ತಿರುತ್ತದೆ ಎಲ್ಲಾ ವಸ್ತುಗಳು ಸೌಂದರ್ಯದಿಂದ ಅರಳುವಂತೆ ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/241**

## ಸೌಂದರ್ಯ ಪ್ರಜ್ಞೆ

*ಸೌಂದರ್ಯ ಪ್ರಜ್ಞೆ ಹೂಗಳಲ್ಲಿ ಇರುತ್ತದೆಯೋ?*

ಜೈವಿಕ ಜೀವನ ಬಂದಕೂಡಲೇ, ಪ್ರಾಣದ ಅಂಶ ಬರುತ್ತದೆ, ಮತ್ತು ಈ ಪ್ರಾಣಿಕ ಅಂಶ ಹೂಗಳಿಗೆ ಸೌಂದರ್ಯದ ಪ್ರಜ್ಞೆ ಕೊಡುತ್ತದೆ. ಅದು ವೈಯಕ್ತೀಕರಣ–ಗೊಂಡಿಲ್ಲವೆಂದು ನಮ್ಮ ಭಾವದಿಂದ ಬಹುಶ: ಹೇಳುತ್ತೇವೆ, ಆದರೆ ಅದು ಪ್ರಭೇದದ ಪ್ರಜ್ಞೆ ಮತ್ತು ಪ್ರಭೇದಗಳು ಯಾವಾಗಲೂ ಅರಿತುಕೊಳ್ಳಲು

ಪ್ರಯತ್ನಿಸುತ್ತವೆ. ನಾನು ಪ್ರಾಥಮಿಕ ಅಂತರಾತ್ಮದ ಮೊದಲ ಸಾನಿಧ್ಯ ಮತ್ತು ಸಸ್ಯ ಜೀವನದ ಕಂಪನ, ಮತ್ತು ನಿಜವಾಗಿ ಹೂವಿನ ಅರಳುವಿಕೆಯನ್ನು "ಅಂತರಾತ್ಮದ ಪ್ರಥಮ ಪ್ರಕಟಣೆ" ಎಂದು ಹೇಳಬಹುದು. ಮನಸ್ಸಿನಲ್ಲಿ ಮಾತ್ರ ಈ ಅಂತರಾತ್ಮ ವೈಯಕ್ತಿಕರಣ ಗೊಂಡಿದೆ, ಆದರೆ ಅದು ಅವನಿಗಿಂತ ಮುಂಚೆಯಿಂದ ಇತ್ತು, ಅದು ಹೆಚ್ಚು ಅಸ್ಥಿರವಾಗಿತ್ತು; ಅದು ಶಕ್ತಿ, ಪ್ರಜ್ಞೆ ತರಹ ವೈಯಕ್ತಿಕ ರೀತಿ ಪ್ರಕಟಗೊಂಡಿಲ್ಲ. ಉದಾಹರಣೆಗೆ ಗುಲಾಬಿಯನ್ನು ತೆಗೆದುಕೊಳ್ಳಿ; ಅದರ ಉನ್ನತವಾದ ಪರಿಪೂರ್ಣ ರೂಪ, ವರ್ಣ, ಪರಿಮಳ ಒಂದು ಅಭಿಪ್ಸೆ ಮತ್ತು ಆತ್ಮಸಮರ್ಪಣೆ ವ್ಯಕ್ತ ಮಾಡುತ್ತದೆ. ಬೆಳಗಿನ ಪ್ರಥಮ ಸೂರ್ಯ ಕಿರಣದ ಸ್ಪರ್ಶದಿಂದ ಅರಳುವುದನ್ನು ನೋಡಿರಿ, ಅದೊಂದು ಅದ್ಭುತವಾದ ಅಭಿಪ್ಸೇಯ ಆತ್ಮ ಸಮರ್ಪಣೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/166**

**ಹೂಗಳು ಮತ್ತು ಅಂತರಾತ್ಮ**

*ಯಾವ ಅಂತರಾತ್ಮದ ಪ್ರಾರ್ಥನೆ ಹೂಗಳನ್ನು ಪ್ರತಿನಿಧಿಸುತ್ತದೆ?*

ಅಂತರಾತ್ಮ, ಯಾವಾಗ ಸಸ್ಯಗಳಲ್ಲಿ ಈ ಅಂತರಾತ್ಮ ಪ್ರಕಟವಾಗುತ್ತದೆ, ಹೂವಿನ ರೂಪದಲ್ಲಿ, ಮೌನವಾದ ಪ್ರಾರ್ಥನೆ ರೂಪದಲ್ಲಿ; ಅದು ದೈವದೆಡೆಗೆ ಇರುವ ಸಸ್ಯದ ಬಯಕೆಯಾಗಿದೆ.

*"ಅಂತರಾತ್ಮವನ್ನು ಕಂಡುಹಿಡಿಯಲು ಮತ್ತು ಅದರೊಂದಿಗೆ ಒಂದಾಗಲು ಹೂಗಳ ಪ್ರೀತಿ ಅಮೂಲ್ಯವಾದ ಸಹಾಯ"ಎಂದು ನೀವು ಬರೆದಿದ್ದೀರಿ. ನೀವು ಇದನ್ನು ಇನ್ನೂ ಹೆಚ್ಚು ವಿವರವಾಗಿ ವಿವರಿಸಿರಿ?*

ಹೂಗಳು ಸಸ್ಯರಾಶಿಯ ರಾಜ್ಯದಲ್ಲಿ ಅಂತರಾತ್ಮನ ಪ್ರಕಟಣೆ, ಹೂಗಳ ಪ್ರೀತಿಯ ಅರ್ಥವೆಂದರೆ ನಮ್ಮನ್ನು ಅಂತರಾತ್ಮದ ಕಂಪನದೆಡೇ ಸೆಳೆಯುವುದು ಮತ್ತು ತತ್ಪರಿಣಾಮವಾಗಿ ನಮ್ಮದೇ ಆದ ಅಂತರಾತ್ಮ ನೆಡೇಗೆ ಕರೆದೊಯ್ಯುವುದು.

ನೀವು ಯಾವಾಗ ಅಂತರಾತ್ಮನ ಕಂಪನಗಳನ್ನು ಗ್ರಹಿಸಲಾರಂಬಿಸುತ್ತಿರೋ, ಅದು ನಿಮ್ಮನ್ನು ಹೆಚ್ಚು ಆತ್ಮೀಯವಾಗಿ ನಿಮ್ಮ ಅಂತರಾತ್ಮದೆಡೆಗೆ ತಂದು ನಿಲ್ಲಿಸುತ್ತದೆ. ಬಹುಶಃ ಹೂಗಳ ಸೌಂದರ್ಯವನ್ನು, ಮನುಷ್ಯ ಜೀವಿಯನ್ನು ಅಂತರಾತ್ಮ ಜೊತೆಗೆ ಸೆಳೆತವನ್ನು ಉಂಟುಮಾಡಲು ಪ್ರಕೃತಿ ಕೂಡ ಉಪಯೋಗಿಸುತ್ತದೆ. ನಾವು ಹೂಗಳ ಮೂಲಕ ಅಂತರಾತ್ಮದ ಸ್ಪರ್ಶಕ್ಕೆ ಪ್ರವೇಶಿಸಬಹುದು. ಯಾರು

ತಮ್ಮದೇ ಆದ ಅಂತರಾತ್ಮದ ಪ್ರಜ್ಞೆಯೊಂದಿಗೆ ಸ್ಪರ್ಶ ದಲ್ಲಿದ್ದಾರೋ ಅಂತಹವರು ಯಾವುದು ಸರ್ವಸೃಷ್ಟಿಯ ಹಿಂದಿದೆಯೋ ಅದರ ಅರಿವಿಗೆ ಬರುತ್ತಾರೆ ಮತ್ತು ಆಗ, ಇದರ ಮೂಲಕ, ಅವರು ಹೂಗಳ ಸ್ಪರ್ಶಕ್ಕೆ ಪ್ರವೇಶಿಸಿ ಮತ್ತು ಅವು ಯಾವ ಅಂತರಾತ್ಮದ ಪ್ರಾರ್ಥನೆಯನ್ನು ಪ್ರತಿನಿಧಿಸುತ್ತವೆ ಎಂದು ತಿಳಿಯುತ್ತಾರೆ.

*

**ಹೂಗಳನ್ನು ಹೆಸರಿಸುವುದು**

ಹೆಚ್ಚಾಗಿ ಹೂಗಳ ಸುಗಂಧದಿಂದ ನಾನು ಅವುಗಳ ಮಹತ್ವವನ್ನು ಗುರುತಿಸಿದೆ...... ಇವುಗಳ ಅಧ್ಯಯನ ಬಹಳ ಆಸಕ್ತಿದಾಯಕ ಎಂದು ನಾನು ಕಂಡುಕೊಂಡೆ; ಅದು ಪ್ರಕೃತಿಯಲ್ಲಿ ನಿಜ ಸ್ವಭಾವಕ್ಕೆ ಹೋಲಿಕೆಯಾಗುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 4, 1961**

*ಶ್ರೀಮಾತೆ, ನಿಮ್ಮಲ್ಲಿ ಹೂಗಳನ್ನು ತಂದಾಗ ಅವುಗಳ ಮಹತ್ವತೆಯನ್ನು ಹೇಗೆ ಕೊಡುವಿರಿ?*

ಹೂಗಳಿಗೆ? ಆದರೆ, ಅದು ಅದೇ ರೀತಿಯಾಗಿ, ಹೂಗಳ ಸ್ವಭಾವದ ಸ್ಪರ್ಶಕ್ಕೆ ನೇರವಾಗಿ ಪ್ರವೇಶದೊಂದಿಗೆ, ಅದು ಅಂತರಂಗದ ಸತ್ಯವಾಗಿದೆ. ಆಮೇಲೆ ನಮಗೆ ಅದು ಏನನ್ನು ಪ್ರತಿನಿಧಿಸುತ್ತದೆ ಎಂದು ಗೊತ್ತಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/230**

**ಪ್ರತಿಯೊಂದು ಹೂ ವಿಶೇಷ ಮಹತ್ವತೆ ಹೊಂದಿದೆ, ಹೌದಲ್ಲವೇ?**

ನಾವು ಮಾನಸಿಕವಾಗಿ ತಿಳಿದುಕೊಂಡಂತೆ ಅಲ್ಲ. ಹೂವಿಗೆ ನಿಖರವಾದ ಅರ್ಥವನ್ನು ಕೊಟ್ಟಾಗ ಅದು ಮಾನಸಿಕ ಮುನ್ನಂದಾಜ(ಕಲ್ಪನೆ) ಆಗಿ ಇರುತ್ತದೆ. ಅದು ಉತ್ತರ ಕೊಡಬಹುದು, ಈ ಅರ್ಥಕ್ಕೆ ಒಪ್ಪಬಹುದು, ಆದರೆ ಹೂವಿನಲ್ಲಿ ಮಾನಸಿಕ ಪ್ರಜ್ಞೆಯ ಸಮನಾದುದು ಇಲ್ಲ. ಸಸ್ಯರಾಶಿಯ ರಾಜ್ಯದಲ್ಲಿ ಅಂತರಾತ್ಮದ ಪ್ರಾರಂಭವಾಗಿದೆ, ಆದರೆ ಅಲ್ಲಿ ಮಾನಸಿಕ ಪ್ರಜ್ಞೆಯ ಪ್ರಾರಂಭವಿಲ್ಲ. ಪ್ರಾಣಿಗಳಲ್ಲಿ ಅದು ಬೇರೆಯದೇ ಆಗಿದೆ; ಮಾನಸಿಕ ಜೀವನ ರೂಪುಗೊಳ್ಳಲು ಪ್ರಾರಂಭವಾಗಿರುತ್ತದೆ ಮತ್ತು ಅವುಗಳಿಗೆ ವಸ್ತುಗಳಲ್ಲಿನ ಅರ್ಥ ಗೊತ್ತಾಗುತ್ತದೆ. ಆದರೆ ಹೂಗಳಲ್ಲಿ ಸಣ್ಣ ಕೂಸಿನ ತರಹ–ಭಾವನೆ ಅಥವಾ ಸಂವೇದನೆ ಇಲ್ಲ, ಆದರೆ ಏನೋ ಒಂದು, ಎರಡೂ

ಕೂಡಿದ್ದು, ಅದು ಸಹಜವಾದ ನಡೆ, ಒಂದು ಬಹಳ ವಿಶೇಷವಾದ ಸಾಂಗತ್ಯವುದೆ. ಆದುದರಿಂದ, ಅವುಗಳ ಜೊತೆ, ಕೂಡಿದ್ದಾಗ, ಭಾವನೆ ಬಂದರೆ, ಅದರ ಛಾಪು ಆಲೋಚನೆಗಳ ಮೂಲಕ ಮಾಡುತ್ತದೆ. ಆದುದರಿಂದ ನಾನು ಹೂ ಮತ್ತು ಸಸ್ಯಗಳಿಗೆ ಅರ್ಥವನ್ನು ಕೊಟ್ಟಿದ್ದೇನೆ–ಒಂದು ರೀತಿಯ ಸಾಂಗತ್ಯದೊಂದಿಗೆ ಗುರುತಿಸಿಕೊಳ್ಳುವುದು. ಅವು ಪ್ರತಿನಿಧಿಸುವ ಗುಣಮಟ್ಟದ ಅರಿವಾಗುವುದು ಮತ್ತು ಸ್ವಲ್ಪ ಸ್ವಲ್ಪವಾಗಿ, ಸರಿ ಸುಮಾರಾದ ಪ್ರೀತಿಯಲ್ಲಿ (ಕೆಲವು ಸಲ ದಿಡೀರನೆ ಬರಬಹುದು, ವಿರಳವಾಗಿ ಸಮಯ ತೆಗೆದುಕೊಳ್ಳಬಹುದು), ಅವುಗಳ ಕಂಪನ ಒಟ್ಟಾಗಿ ಬರಬಹುದು (ಪ್ರಾಣಿಕ–ಭಾವನಾಸ್ಥರ) ಮತ್ತು ಮಾನಸಿಕ ಆಲೋಚನೆ ಕಂಪನ, ಮತ್ತು ಅಲ್ಲಿ ಸಾಕಷ್ಟು ಸಾಮರಸ್ಯವಿದ್ದರೆ, ಅವರಿಗೆ ಸಸ್ಯ ಏನನ್ನು ಸೂಚಿಸುತ್ತಿದೆ ಎಂದು ತಿಳಿಯುತ್ತದೆ.

ಕೆಲವು ದೇಶಗಳಲ್ಲಿ (ವಿಶೇಷವಾಗಿ ಇಲ್ಲಿ) ಕೆಲವು ಸಸ್ಯಗಳನ್ನು ಪೂಜಿಸಲು ಮಾಧ್ಯಮವನ್ನಾಗಿ ಉಪಯೋಗಿಸುತ್ತಾರೆ, ಸಮರ್ಪಣೆ, ಭಕ್ತಿ, ಕೆಲವು ಸಸ್ಯಗಳನ್ನು ವಿಶೇಷವಾದ ಸಂದರ್ಭದಲ್ಲಿ ಕೊಡುತ್ತಾರೆ. ಮತ್ತು ಈ ಗುರುತಿಸುವಿಕೆ ಬಹಳಷ್ಟು ಆ ಸಸ್ಯದ ಸ್ವಭಾವವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸಮರ್ಪಿಸುವುದನ್ನು ನಾನು ನೋಡಿದ್ದೇನೆ, ಏಕೆಂದರೆ ಸಹಜವಾಗಿ, ಏನನ್ನು ತಿಳಿಯದೆ, ಧಾರ್ಮಿಕ ಸಮಾರಂಭಗಳಲ್ಲಿ ಕೊಟ್ಟಂತಹ ಅರ್ಥದ ರೀತಿಯಲ್ಲಿ ನಾನು ಅರ್ಥವನ್ನು ಕೊಟ್ಟಿದ್ದೇನೆ. ಕಂಪನ ಹೂವಿನಲ್ಲಿ ನಿಜವಾಗಿ ಇದೆ........ ಅದು ಹೂವನ್ನು ಆ ರೀತಿ ಉಪಯೋಗಿಸುವುದರಿಂದ ಬಂದಿದೆಯೋ ಅಥವಾ ಬಹಳ ಬಹಳ ದೂರದಿಂದ ಬಂದಿದ್ದೋ, ಎಲ್ಲಿಯೋ ಬಹಳ ಆಳದಿಂದ ಬಂದಿದ್ದು. ಅಂತರಾತ್ಮ ಜೀವನ ಆರಂಭವಾದಾಗಿನಿಂದ? ಅದು ಹೇಳುವುದು ತುಂಬಾ ಕಷ್ಟ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/167–68**

**ಹೂಗಳ ಸಮರ್ಪಣೆ**

*ಸಮಾಧಿಯ ಮೇಲಿನ ಹೂವುಗಳ ಸಂಬಂಧ ಈ ಪ್ರಶ್ನೆ, ಶ್ರೀ ಅರವಿಂದರು ಅವುಗಳ ಮಹತ್ವತೆಯ ಹೊರತಾಗಿ ವಿಶೇಷವಾದ ದಿವ್ಯ ಸಂದೇಶವನ್ನು ಪ್ರಸಾರಿಸುತ್ತಾರೋ,?*

ನಾನು ಆ ರೀತಿ ಯೋಚಿಸುವುದಿಲ್ಲ. ಅದು ಬೇರೆ ಬೇರೆ ಸಂದರ್ಭದ ಮೇಲೆ ಅವಲಂಬಿಸಿರುತ್ತದೆ. ಅದರ ಬದಲಾಗಿ ಹೂಗಳ ಮೂಲಕ ಏನು ಸಂದೇಶವನ್ನು

ಇಡುತ್ತಾರೋ ಅದನ್ನು ಸ್ವೀಕರಿಸುತ್ತಾರೆ. ಅದು ಕೊಂಚ ಸಾಧ್ಯವಿದೆ. ನಿಖರವಾದ ಪ್ರಾರ್ಥನೆ ಅಥವಾ ಯಾವುದೋ ಉದ್ದೇಶದ ಸಲುವಾಗಿ ಜನರು ಹೂಗಳನ್ನು ಸಮರ್ಪಿಸಿದಾಗ ಶ್ರೀ ಅರವಿಂದರು ಸಂದೇಶವನ್ನು ಸ್ವೀಕರಿಸುತ್ತಾರೆ ಮತ್ತು ಅದಕ್ಕೆ ಉತ್ತರಿಸುತ್ತಾರೆ ಮತ್ತು ಯಾರು ಸಾಕಷ್ಟು ಸಂವೇದನಾಶೀಲರಾಗಿದ್ದಾರೋ ಅವರು ಉತ್ತರವನ್ನು ಸ್ವೀಕರಿಸುತ್ತಾರೆ

*ನಾವು ಅರ್ಪಣೆ ಮಾಡುವ ಹೂಗಳು ನಮ್ಮ ಪ್ರಜ್ಞೆ ಸ್ಥಿತಿಯನ್ನು ಅವಲಂಬಿಸಿದ್ದರೆ, ನಮಗೆ ಶುದ್ಧವಾದ ಮಾನಸಿಕ ವಾಗಿಯಾದರು ಅವುಗಳ ಮಹತ್ವತೆ ತಿಳಿಯಲು ಸಹಾಯ ಮಾಡುತ್ತದೆಯೋ?*

ಹೌದು, ಖಂಡಿತವಾಗಿ.

*ನಿಗೂಢ ಜಗತ್ತಿನಲ್ಲಿ ಹೂಗಳಿಗೆ ಶಕ್ತಿಯಿದೆಯಾ?*

ಹೌದು, ಅವುಗಳಿಗೆ ನಿಗೂಢ ಶಕ್ತಿ ಇದೆ; ಅವುಗಳಿಗೆ ಶಕ್ತಿ ತುಂಬಲು ನಮಗೆ ಸಾಧ್ಯವಾದರೆ ಅವುಗಳು ಅದನ್ನು ಪ್ರಸಾರಣ ಮಾಡುತ್ತವೆ.

*ನೀವು ಕೊಟ್ಟಂತಹ ಸಂದೇಶಗಳ ಹೊರತಾಗಿ ಬೇರೆ ಸಂದೇಶಗಳನ್ನು ಪ್ರಸರಿಸುತ್ತವೆಯೋ?*

ಅದೇನು ಅಸಾಧ್ಯವಾದುದಲ್ಲ, ಆದರೆ ಸಂದೇಶ ಕಳಿಸುವ ಹೆಚ್ಚಿನ ರೂಪುಗೊಳಿಸುವ ಸಾಮರ್ಥ್ಯ ಹೊಂದಿರಬೇಕು.

*ರೂಪುಗೊಳಿಸುವ ಶಕ್ತಿ ಶುದ್ಧವಾಗಿ ನಿಗೂಢವೋ ಅಥವಾ ಮಾನಸಿಕ ಅಥವಾ ಪ್ರಾಣಿಕ ಶಕ್ತಿಗಳ ರೂಪುಗೊಳಿಸುವ ಸಂದೇಶವನ್ನು ಪ್ರಸರಣ ಗೊಳಿಸುತ್ತವೆಯೋ?*

ಮಾನಸಿಕ ರೂಪುಗೊಳಿಸುವ ಶಕ್ತಿ ಖಚಿತವಾಗಿ ಸಂದೇಶಗಳನ್ನು ಪ್ರಸಾರ ಗೊಳಿಸುತ್ತದೆ. ಆದರೆ ಯಾರು ಸಂದೇಶಗಳನ್ನು ಸ್ವೀಕರಿಸಬೇಕೋ ಮತ್ತು ಅರ್ಥೈಸಿಕೊಳ್ಳಬೇಕೋ ಅವರು ಸ್ವತಃ ಬಹಳ ಮಾನಸಿಕವಾಗಿ ಗ್ರಹಿಸುವ ಮತ್ತು ವಿಶೇಷವಾಗಿ ಗಮನಿಸುವ ಸಾಮರ್ಥ್ಯ ಹೊಂದಿರಬೇಕು.

*ನಾವು ಯಾವಾಗ ಹೂಗಳನ್ನು ಅರ್ಪಿಸುತ್ತೇವೆಯೋ ಆಗ ಯಾವ ನಿಲುವಿನಿಂದ ಅವುಗಳನ್ನು ಅರ್ಪಿಸಬೇಕು? ನಮಗೆ ಮಹತ್ವತೆ ಗೊತ್ತಿಲ್ಲದಿದ್ದರೆ ಏನಾದರೂ ವ್ಯತ್ಯಾಸವಾಗುತ್ತದೆಯೊ?*

ಇದು ಸಂಪೂರ್ಣವಾಗಿ ಹೂಗಳನ್ನು ಅರ್ಪಿಸುವ ವ್ಯಕ್ತಿಯ ಮೇಲೆ ನಿರ್ಧರಿತವಾಗಿರುತ್ತದೆ ಮತ್ತು ಆತನ ಪ್ರಜ್ಞೆಯ ಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ.

ಅದೇ ಉತ್ತರವನ್ನು ಎರಡೂ ಪ್ರಶ್ನೆಗಳಿಗೆ ಕೊಡಬಹುದು. ಅವರು ಏನು ಮಾಡುತ್ತಾರೆ ಎನ್ನುವ ಪ್ರಜ್ಞಾ ಸ್ತರದ ಮೇಲೆ ಆಳವಾದ ಮಹತ್ವತೆ ಇರುತ್ತದೆ.

*ಹೂವುಗಳು ಯಾವಾಗಲೂ ತಮ್ಮ ಶಕ್ತಿಯನ್ನು ಉಳಿಸಿಕೊಳ್ಳುತ್ತವೆಯೊ ಅವು ಬಾಡಿದಾಗಲೂ ಕೂಡ?*

ಬಾಡುವುದು? ಇಲ್ಲ ನನ್ನ ಮಗುವೇ; ಅವು ಒಣಗಿದಾಗ, ಹೌದು. ಹಾಳಾದ ಹೂಗಳು ಏನು ಅಲ್ಲ .ಒಂದು ವಿಭಜನೆ (ಕರಗುವಿಕೆ )ಆಗುತ್ತದೆ, ಸತ್ವ ಕಾಣೆಯಾಗುತ್ತದೆ. ಬಹುಶಃ ಅದು ಭೂಮಿಗೆ ಶಕ್ತಿಯನ್ನು ತರುತ್ತದೆ, ಅದು ಸ್ವಲ್ಪ ಸಾಧ್ಯತೆ ಇದೆ; ಆದರೆ ಇನ್ನೂ ಕೂಡ, ಯಾವಾಗ ಅದು ಕರಗತೊಡಗುತ್ತದೆ ಆಗ ಅದು ಬೇರೆ ಹೂಗಳು ಬೆಳೆಯಲು ಒಳ್ಳೆ ಗೊಬ್ಬರ ಮಾತ್ರ ಆಗಬಹುದು. ಆದರೆ ಅದು ಒಣಗಿದರೆ,ತನ್ನ ಶಕ್ತಿಯನ್ನು ಉಳಿಸಿಕೊಳ್ಳುತ್ತದೆ, ಅದು ಬಹಳ ಸಮಯದವರೆಗೆ ಉಳಿಯುತ್ತದೆ.

*ಮಧುರ ಮಾತೆಯವರೇ, ನೀವು ದಿನಾಲು ನಮಗೆ ಕೊಡುವ ಹೂವುಗಳನ್ನು ಕೂಡ ಏನು ಮಾಡಬೇಕು?*

ಹೂಗಳು ಅವು ತಾಜಾ ಇರುವವರೆಗೆ ನೀವು ಅವುಗಳನ್ನು ಇಟ್ಟುಕೊಂಡಿರಲೆಬೇಕು. ಮತ್ತು ಅವು ಆ ರೀತಿ ಇಲ್ಲದಿದ್ದಾಗ, ನೀವು ಅವುಗಳನ್ನು ಆರಿಸಿಟ್ಟುಕೊಂಡು ಮತ್ತು ಅವುಗಳನ್ನು ನೀವು ತೋಟಗಾರನಿಗೆ ಕೊಡಬೇಕು (ನಿಮಗೆ ಗೊತ್ತಿರುವ ಯಾವುದೇ ತೋಟಗಾರನಿಗೆ), ಅದರಿಂದ ಅವುಗಳನ್ನು ಭೂಮಿಗೆ ಸೇರಿಸಿ ಬೇರೆ ಹೂವುಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ಹೌದು ನಮಗೆ ಭೂಮಿ ಕೊಟ್ಟದ್ದನ್ನು ಅದಕ್ಕೆ ಹಿಂದಿರುಗಿಸಬೇಕು, ಇಲ್ಲವೆಂದರೆ ಭೂಮಿ ಬಡವಾಗುತ್ತದೆ.

*ಯಾವ ಅಂತರಾತ್ಮದ ಪ್ರಾರ್ಥನೆಯನ್ನು ಹೂಗಳು ಪ್ರತಿನಿಧಿಸುತ್ತವೆ?*

ಅಂತರಾತ್ಮ ಯಾವಾಗ ಸಸ್ಯದಲ್ಲಿ ಹೂವಿನ ರೂಪದಲ್ಲಿ ಪ್ರಕಟವಾಗುತ್ತೋ ಪ್ರಾರ್ಥನೆ ಮೌನ ರೂಪದಲ್ಲಿರುತ್ತದೆ; ಅದು ಸಸ್ಯದ ದೈವದೆಡೇಗಿನ ಉತ್ಸಾಹ ತೋರುತ್ತದೆ.

*ಕೆಲವೊಂದು ಹೂಗಳ ಮಹತ್ವತೆ "ಹಣಕ್ಕಾಗಿ ಆಸೆ" "ತುಡಿತ" "ಪ್ರತಿಷ್ಠೆ ಗದ್ದಲ" ಇತ್ಯಾದಿ ಎಂದೆಲ್ಲಾ ಇವೆ. ಈ ಹೂಗಳು ಅದು ಹೇಗೆ ಅಂತರಾತ್ಮದ ಪ್ರಾರ್ಥನೆ ಯನ್ನು ಪ್ರತಿನಿಧಿಸುತ್ತವೆ?*


ಈ ಹೂಗಳು ತಮ್ಮ ಕೆಟ್ಟ ಕಂಪನಗಳನ್ನು ಪರಿವರ್ತನೆಗಾಗಿ ಸಮರ್ಪಿಸುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/230–232 – ಶ್ರೀಮಾತೆ**



ಓರ್ವ ಮಾನವನಿಗೆ ಅನುರೂಪಿಸುವದಕ್ಕಿಂತ, ಅತ್ಯಂತ ಸರಳವಾಗಿಯೇ ನಾನು ನನ್ನ ಚೈತನ್ಯವನ್ನು ಪುಷ್ಪಕ್ಕೆ ಅನುರೂಪಿಸಬಲ್ಲೆ: ಇದು ತನ್ನದೇ ಅನುಭವವನ್ನು ಹೇಗೆ ರೂಪಿಸಿಕೊಳ್ಳಬೇಕು ಎನ್ನುವದನ್ನು ಅರಿತಿರದಿದ್ದರೂ, ಆತ್ಮೀಯ ಸ್ವೀಕಾರಾರ್ಹತೆಯಲ್ಲಿಯೇ ಇರುತ್ತದೆ, ಏಕೆಂದರೆ ಇದಕ್ಕೆ ಮನಃ ಸ್ವರೂಪದ ಅವಕಾಶವನ್ನು ಹೊಂದಿರುವದಿಲ್ಲ. ಆದರೆ ಪರಿಶುದ್ಧವಾದ ಅಲೌಕಿಕವಾಗಿರುವ ಪ್ರಾಣಿಕ–ಚೇತನವನ್ನು ಹೊಂದಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/132** **– ಶ್ರೀಮಾತೆ**



*ಈ ಪುಷ್ಪವು ಏಕೆ ನಿಮ್ಮ ಕರುಣೆಯನ್ನು ಸಂಕೇತಿಸುತ್ತಿದೆ? ಅದೇಕೆ ಇಷ್ಟೊಂದು ಸೂಕ್ಷ್ಮವಾಗಿದೆ? ಇದೇಕೆ ಇಷ್ಟು ಬೇಗನೇ ಬಾಡುತ್ತದೆ?*

– ಹಾಗಲ್ಲ, ಅದರ ಸಂಕೇತದೊಂದಿಗೆ ಕರುಣೆಯು ಎಂದಿಗೂ ಬಾಡುವದಿಲ್ಲ. ಪುಷ್ಪಗಳೆಂದರೆ, ಯಾವುದು ಶಾಶ್ವತವಾಗಿರುವದೋ ಅದನ್ನೇ, ತಮ್ಮಷ್ಟಕ್ಕೆ ತಾವೇ ಆಯಾ ವಸ್ತುಗಳಲ್ಲಿ ಪ್ರತಿನಿಧಿಸುತ್ತಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/445 – ಶ್ರೀ ಅರವಿಂದರು**

# ಪುಷ್ಪಗಳ ಉಪಾಖ್ಯಾನಗಳು

**– ಅನುವಾದ: ಪುಟ್ಟು ಕುಲಕರ್ಣಿ**

**ಚೆರಿ–ಬ್ಲಾಸಮ್**

ಏಕಾಗ್ರತೆಯ ತುರೀಯಾವಸ್ಥೆಯು ನನ್ನನ್ನು ಆವರಿಸಿಕೊಂಡಿತು. ಆ ಸ್ಥಿತಿಯಲ್ಲಿ ನನ್ನನ್ನು ನಾನು ಗುರುತಿಸಿಕೊಳ್ಳಲೂ ಸಹಿತ ಸಾಧ್ಯವಾಗುತ್ತಿರುವಂತೆಯೇ – ನಾನೂ ಒಂದು ಚೆರದರಿ ಬ್ಲಾಸಮ್ ಪುಷ್ಪವಾಗಿ ಪರಿಭಾವಿಸಿಕೊಂಡೆ,



ತದನಂತರದಲ್ಲಿ ಅದರೊಡನೆ ಇತರೇ ಚೆರಿ–ಬ್ಲಾಸಮ್ ಜೊತೆಗೇ ಇದ್ದೆ. ಮತ್ತೂ ಮತ್ತೂ ಪ್ರಜ್ಞೆಯ ಆಳಕ್ಕೆ ಆಳಕ್ಕೆ ಅವತರಣಗೊಳ್ಳುತ್ತಿದ್ದಂತೆ (ಧ್ಯಾನದ ಪರಮೋಚ್ಚ ಸ್ಥಿತಿಗೆ ತಲುಪುತ್ತಿದ್ದಂತೆ), ಅಲ್ಲಿ ಒಂದು ನೀಲಿಮದ ಪ್ರವಾಹವು ಶಕ್ತಿಯೋಪಾದಿಯಲ್ಲಿ ಧಾರೆಗೊಳ್ಳುತ್ತ ಆಗಮಿಸುತ್ತಿರುವದನ್ನು ಕಂಡೆ. ಆ ಕ್ಷಣದಲ್ಲಿಯೇ ನಾನು ಚೆರಿ–ಬ್ಲಾಸಮ್ ವೃಕ್ಷವಾಗಿ ಪರಿವರ್ತನಗೊಂಡಿದ್ದೆ. ಆಕಾಶದೆತ್ತರಕ್ಕೆ ಏರಿ ವಿಸ್ತಾರಗೊಳ್ಳಲೆಂದು ಸಾವಿರಾರು ಬಾಹುಗಳನ್ನು ಚಾಚಿದಂತೆ ಟೊಂಗೆಗಳಲ್ಲಿ ಹರಡಿಕೊಂಡಿದ್ದೆ. ಅವುಗಳೆಲ್ಲವೂ, ಅವುಗಳ ತ್ಯಾಗವನ್ನು ಪ್ರದರ್ಶಿಸುತ್ತಿರುವ ಪುಷ್ಪಗಳಿಂದಲೇ ತುಂಬಿಕೊಂಡಿದ್ದವು. ಅನತಿ ದೂರದಲ್ಲಿಯೇ ನಾನೊಂದು ವಾಣಿಯೊಂದನ್ನು ಆಲಿಸಿದೆ, “ನೀನು ನಿನ್ನಷ್ಟಕ್ಕೆ ನಿನ್ನನ್ನು ಈ ಚೆರಿ–ಬ್ಲಾಸಮ್‌ನ ಆತ್ಮವಾಗಿಸಿಕೊಂಡು ಚೆರಿ ವೃಕ್ಷವಾಗಿದ್ದೀಯಾ. ಹಾಗೆಯೇ ಸ್ವರ್ಗಕ್ಕೆ ಸಮರ್ಪಣೆಗೊಳ್ಳುವ ಸಲುವಾಗಿಯೇ ಪ್ರಫುಲ್ಲಿತವಾಗಿರುವ ಈ ಪುಷ್ಪದ–ಪ್ರಾರ್ಥನೆಯು ದೈವತ್ವವಾಗಿದೆ ಎನ್ನುವದನ್ನು ಮರೆಯಬೇಡ”.

ನಾನು ಈ ವಾಣಿಯನ್ನು ಯಾವಾಗ ಲಿಖಿತಗೊಳಿಸಿದೆನೋ, ಆಗ ಸರ್ವಸ್ವವೂ ಪ್ರಕಟವಾಯಿತು; ಈಗ ಈ ಚೆರಿ ವೃಕ್ಷದ ರಕ್ತವು(ಹರಿತ್) ನನ್ನ ನರನಾಡಿಗಳಲ್ಲಿ ಪ್ರವಹಿಸಲು ಪ್ರಾರಂಭವಾಯಿತು. ಅಷ್ಟೇ ಅಲ್ಲದೇ ನಿರ್ಮಾಯ ಶಾಂತಿ ಮತ್ತು ಶಕ್ತಿಯ ಸಂಯೋಗದಲ್ಲಿ ಅದು ಪ್ರವಹಿಸುತ್ತಿತ್ತು. ಮಾನವನ ದೇಹಕ್ಕೂ ಈ ವೃಕ್ಷದ ದೇಹಕ್ಕೂ ಏನಾದರೂ ವ್ಯತ್ಯಾಸವಿದೆಯೇ? ನಿಜವಾಗಿಯೂ

ಯಾವುದೇ ವ್ಯತ್ಯಾಸವಿಲ್ಲ. ಈ ಪ್ರಜ್ಞೆ ಎನ್ನುವದೂ ಎರಡೂ ಕಡೆಗೆ ಸಮಸಮವಾಗಿಯೇ–ಸಮ್ಮಿತಿಯಲ್ಲಿಯೇ – ಸಂವಹನಗೊಳ್ಳುತ್ತದೆ.

ಇದೇ ಸಮಯದಲ್ಲಿ ಚೆರಿ ವೃಕ್ಷವು ಮೆಲುಧ್ವನಿಯಲ್ಲಿ ಹೇಳಿತು, "ವಸಂತದಲ್ಲಿ ಆಗುವ ವಿಚಲನೆಗಳಿಗೆ ಈ ಚೆರಿ ಬ್ಲಾಸಮ್ ಸೂಕ್ತ ಪರಿಹಾರಕ್ಕಾಗಿಯೇ ಜೀವಿಸುತ್ತಿದೆ".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/364**



**ಅತಿಮಾನಸ ಅಥವಾ ಕದಂಬ–ಪುಷ್ಪ**

ಓರ್ವ ಶಿಷ್ಯನಿಗೆ ಈ ಕದಂಬ ಪುಷ್ಪವನ್ನು ನೀಡುತ್ತಾ ಶ್ರೀಮಾತೆಯವರು, "ಇದು ಅತಿಮಾನಸ–ಸೂರ್ಯ", ಇದೇ ಇದರ ಹೆಸರು– ಅತಿಮಾನಸ, ಸೂರ್ಯ. ಅಂದರೆ ಕಿತ್ತಳೇ ವರ್ಣದ ಗೋಲಾಕಾರದಲ್ಲಿ ಅಗಣಿತ ಪ್ರಮಾಣದ ಕೇಸರಗಳನ್ನು ಹೊಂದಿದೆ"

ಎಷ್ಟೊಂದು ಸುಂದರವಾಗಿದೆಯಲ್ಲವೇ ಇದು, ಇದೆಲ್ಲವೂ ಒಗ್ಗೂಡಿಕೊಂಡೇ, ಸಮಗ್ರವಾಗಿ ಒಟ್ಟಿನಲ್ಲಿ ಅಗಣಿತವಾಗಿ ಇದೆ. ಎಲ್ಲ ದಿಕ್ಕುಗಳಲ್ಲಿಯೂ ವಿಕಾಸವಾಗುವ ಏಕೈಕ ವ್ಯವಸ್ಥೆ ಇದಾಗಿದೆ. ಎಂತಹ ಆಕರ್ಷಣೀಯವಾಗಿರುವ ವರ್ಣವಿನ್ಯಾಸ!, ಇದರ ಗಿಡವೂ ಸಹಿತ ಅಷ್ಟೇ ಭವ್ಯವಾಗಿದೆ.

ಪ್ರಕೃತಿ ಯಾವಾಗಲೂ ವಿಸ್ಮಯಕಾರೀ ಆವಿಷ್ಕಾರಗಳಲ್ಲಿಯೇ ತನ್ಮಯವಾಗಿರುತ್ತದೆ. ಏನನ್ನೇ ಸೃಷ್ಟಿಸಿದರೂ ಅದು ಸುಂದರವೇ ಆಗಿರುವಂತೆ ಸೃಷ್ಟಿಸುತ್ತದೆ. ಮಾನವನು ಉತ್ಪಾದನೆಗೊಳಿಸುವ ಯಾವುದೂ, ಇಷ್ಟೊಂದು ಪರಿಪೂರ್ಣತೆಯಿಂದ ಕೂಡಿರುವದಿಲ್ಲ. ಅವನು ಆ ರೀತಿಯಲ್ಲಿ ರಚಿಸುವಂತೆ ಸಾಮರ್ಥ್ಯವನ್ನು ಪಡೆದಿದ್ದಾನೆ ಅಥವಾ ಯಶಸ್ಸು ಪಡೆದಿದ್ದಾನೆ ಎಂದು ನನಗನಿಸುತ್ತಿಲ್ಲ. ಆದರೂ ಕೆಲವೇ ಕೆಲವು ಪ್ರಜಾತಿಯನ್ನು ಸೃಷ್ಟಿಸಲು ಸಮರ್ಥನಾಗಿದ್ದರೂ, ಅಲ್ಲಿಯೂ ಸಹಿತ ಈ ಪ್ರಕೃತಿಯೇ ಮತ್ತೆ ಮೂಲ ವಾಗಿರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಡಿಸೆಂಬರ 17, 1961**

**ತುಳಸಿ**

ಒಂದು ದಿನ, ಯಾವುದೇ ಪೂರ್ವ ಸೂಚನೆಯೂ ಇಲ್ಲದೇ, ಓರ್ವ ವ್ಯಕ್ತಿಯು ನನಗೆ ತುಳಸಿ ಚಿಗುರನ್ನು ತಂದು ಕೊಟ್ಟಿದ್ದರು. ನಾನು ಅದನ್ನು ಆಘ್ರಾಣಿಸಿದ್ದೆ, ಜೊತೆಗೆ "ಓ ಏಕನಿಷ್ಠೆಯ ಭಕ್ತಿ" ಎಂದು ಉದ್ಗರಿಸಿದ್ದೆ. ಹೌದು, ಇಲ್ಲಿ ಖಚಿತವಾಗಿಯೂ ಭಕ್ತಿಯ ಸ್ಪಂದನವಿತ್ತು. ಆಮೇಲೆ, "ಇದೊಂದು ಶ್ರೀಕೃಷ್ಣನಿಗೆ ಪ್ರಿಯವಾದ ಭಕ್ತಿಯ ನೆಲೆಯಾಗಿದೆ; ಕೃಷ್ಣ ಪಾವಿತ್ರ್ಯತೆಯೂ ಆಗಿದೆ."

*

**ತಪಸ್ಯಾ ಪುಷ್ಪ (ಕೇದಗೆ ಪುಷ್ಪ)**

ಇನ್ನೊಮ್ಮೆ ನನ್ನ ಬಳಿ ದೊಡ್ಡ ಗಾತ್ರದ ಪುಷ್ಪಗಳನ್ನ ತರಲಾಗಿತ್ತು (ಆದರೆ ಅವು ನಿಜವಾಗಿಯೂ ಪುಷ್ಪಗಳ ವರ್ಗಕ್ಕೆ ಸೇರಿರಲಿಲ್ಲ). ಮೇಲ್ನೋಟಕ್ಕೆ ಅವು ಬೀಜಗಳಿಂದ(ಕಾಳುಗಳಿಂದ) ತುಂಬಿದಂತಿತ್ತು. ಅದರಲ್ಲೂ ಉದ್ದುದ್ದವಾಗಿರುವ ಅತ್ಯಂತ ತೀವ್ರ ತರಹದ ಸುವಾಸನೆಯ ದಳಗಳೆಲ್ಲವೂ – ನಲವತ್ತಕ್ಕೂ ಹೆಚ್ಚು ದಳಗಳು– ಇದ್ದವು. ನಾನು ಅದನ್ನು ಆಘ್ರಾಣಿಸುತ್ತಲೇ "ತಾಪಸಿಯ ಪರಿಶುದ್ಧತೆ" ಎಂದಿದ್ದೆ. ಅದು ಶಿವನು ತಪಸ್ಸು ಮಾಡುತ್ತಿರುವ ಸಂಕೇತವಾಗಿತ್ತು.

ಇಲ್ಲಿ ಇರುವ ಜನಸಮುದಾಯಕ್ಕೆ ಪ್ರಾಚೀನ ಕಾಲದಿಂದಲೂ ಬಂದಿರುವ ಜ್ಞಾನದ ಪರಂಪರೆ ಇದೆ. ಅದರಲ್ಲೂ ವೇದದ ಜ್ಞಾನ – ಅದನ್ನು ಈಗಲೂ ಸುರಕ್ಷಿತವಾಗಿರಿಸಿಕೊಂಡು ಬಂದಿದ್ದಾರೆ–, ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವಾದದಲ್ಲಿ, ಇದು ನಿಶ್ಚಿತ ಸರ್ವರೂಪದ ಸತ್ಯವೇ ಆಗಿದೆ. ಇದೆಲ್ಲವೂ ಕೇವಲ ಮನಸ್ಸಿನ ಮೇಲೆ ಅಥವಾ ಚಿಂತನದ ಮೇಲೆ ಅಥವಾ ಭಾವನೆಗಳ ಮೇಲೆ ಮಾತ್ರ ರೂಪಿತಗೊಂಡಿರುವದಲ್ಲ. ಇದು ನಿಜವಾಗಿಯೂ ನಿಜವಾಗಿಯೂ .... "ಸ್ಪಂದನ"ವಾಗಿದೆ.

ನಿಜ, ಇದು ಶಿವನೇ ಆಗಿದೆ. ತಪಸ್ಸು ಮಾಡುತ್ತಿರುವ ಶಿವ! ಇಲ್ಲೊಂದು ಅತ್ಯಾಶ್ಚರ್ಯವಾಗಿರುವ ಸಂಗತಿ ಒಂದಿದೆ. ಇದರ ಪರಿಮಳವು ಹಾವುಗಳನ್ನು ಆಕರ್ಷಿಸುತ್ತದೆ ಎನ್ನುವ ಅದ್ಭುತವಾದ ವಿಶ್ವಾಸವಿದೆ. ಪುಷ್ಪಗಳನ್ನು ಹೊಂದಿರುವ ಇದರ ಪೊದೆಗಳು, ಬಿಲಗಳನ್ನು ರೂಪಿಸಿಕೊಳ್ಳುವಲ್ಲಿ ಬಲು ದೂರದಿಂದಲೂ

ಹಾವುಗಳನ್ನು ಆಕರ್ಷಿಸುತ್ತವೆ. "ಸರ್ಪವು ಉತ್ಕ್ರಾಂತಿಯ ಶಕ್ತಿಯನ್ನು ಹೊಂದಿದೆ" ಎನ್ನುವ ಮಾತು ನಿಮಗೆ ಗೊತ್ತಿದೆಯಲ್ಲವೇ? ಇದು ಶಿವನೇ ಸೃಷ್ಟಿಸಿರುವ ಸೃಷ್ಟಿಯಾಗಿದೆ. ಶಿವನು ಯಾವಾಗಲೂ ಇದನ್ನು ತನ್ನ ಕುತ್ತಿಗೆಯ ಸುತ್ತಲೂ ಇದನ್ನೆ ಧರಿಸಿರುತ್ತಾನೆ. ಏಕೆಂದರೆ ಇದು ಶಕ್ತಿ ಮತ್ತು ಪರಿವರ್ತನೆಯ (ರೂಪಾಂತರದ)ನ್ನು ಸಂಕೇತಿಸುತ್ತಿದೆ. ಅದಕ್ಕಿಂತ ಈ ಸರ್ಪವೂ ಸಹಿತ ಪುಷ್ಪದ ಈ ಪುಷ್ಪದಂತೆಯೇ ಇರುತ್ತದೆ. ಇದು ಸಾಮಾನ್ಯವಾಗಿ ಹಳ್ಳ–ನದಿಗಳ ದಂಡೆಗಳಲ್ಲಿ ಬೆಳೆಯುತ್ತದೆ. ಎಲ್ಲಿ ಎಲ್ಲಿ ಈ ಪುಷ್ಪದ ಪೊದೆಗಳನ್ನು ನೀವು ಕಾಣುತ್ತೀರೋ, ಅಲ್ಲೆಲ್ಲ ಬಿಲಗಳು ಮತ್ತು ಸರ್ಪಗಳ ವಾಸ್ತವ್ಯ ಸಾಮಾನ್ಯ ಸಂಗತಿಯಾಗಿರುತ್ತದೆ.

ಇದು ನನಗೆ ಆಶ್ಚರ್ಯಕರವಾಗಿ ಕಂಡಿತು. ಅದು ಹೀಗೆ ಹೀಗೆ ಇರಬೇಕೆಂದು ನಾವು ನಿರ್ಧರಿಸಲು ಬರುವದಿಲ್ಲ. ಇವೆಲ್ಲವೂ ಪ್ರಕೃತಿಯ ಪ್ರಜ್ಞಾಪೂರ್ವಕವಾದ ಸ್ಪಂದನಗಳಾಗಿವೆ. ಆ ಪರಿಮಳ, ಆ ವರ್ಣ, ಅದರ ಆಕಾರ ಎಲ್ಲವೂ ಸಂಚಲನದ ನಿಜವಾದ ಅಭಿವ್ಯಕ್ತಿಗಳಾಗಿವೆ ಎನ್ನುವದೇ ಸ್ವಯಂಪ್ರೇರಣೆಯಾಗಿದೆ .

*

**ಸರಳಾತಿಸರಳ: ಶೀತಕ್ಕೆ ಪರಿಹಾರ**

ಇದೋ ಇಲ್ಲಿ ಗಮನಿಸಿ, ನಿಮಗಾಗಿ ಇಲ್ಲಿ ಎರಡು ಪುಷ್ಪಗಳನ್ನು ತಂದಿದ್ದೇನೆ. ಇವು ಎರಡು ವಿಭಿನ್ನ ಸ್ವರೂಪದಲ್ಲಿ ಇರುವಂತೆ ಕಂಡರೂ, ವಿಶಿಷ್ಟವಾಗಿರುವ ಭಾರತೀಯ ಪರಿಮಳವನ್ನೇ ಹೊಂದಿವೆ: ಇವುಗಳಲ್ಲಿ ಒಂದು "ಸ್ಪಷ್ಟವಾದಿ (ಸರಳತೆ)"ಆಗಿದ್ದರೆ, ಮತ್ತೊಂದು "ಸರಳಾತಿಸರಳ (ನಿಷ್ಕಪಟಿ)"ವಾಗಿದೆ. ಇವುಗಳಲ್ಲಿ ನಾನು ಯಾವಾಗಲೂ ನಾನು "ಈ ನಿಷ್ಕಪಟಿ'ಯನ್ನು ಕಾಣುತ್ತೇನೆ ಎಂದು ಅದರೆಡೆಗೆ ತೋರಿಸುತ್ತಾ ಹೇಳಿದರು. ಇದು ಪರಿಶುದ್ಧಗೊಳಿಸುವ ಪರಿಮಳವನ್ನು ಹೊಂದಿದೆ. ನೀವು ಯಾವಾಗ ಇದನ್ನು ಆಘ್ರಾಣಿಸುತ್ತೀರೋ, ಓ, ಅಲ್ಲಿ ಆಗ ಎಲ್ಲರೂ ನಿರಾಳರಾಗುತ್ತಾರೆ. ನಿಜವಾಗಿಯೂ ಇದು ಅತ್ಯಾಶ್ಚರ್ಯಕರವಾಗಿದೆ! ಹೀಗೆ ಹೇಳುತ್ತಲೇ, ಶ್ರೀಮಾತೆಯವರು ಮತ್ತೆ ಆ ಪುಷ್ಪವನ್ನು ಆಘ್ರಾಣಿಸುತ್ತಾರೆ. ಒಮ್ಮೆ ಇದೇ ಪುಷ್ಪವನ್ನು ನಾನು ಆಘ್ರಾಣಿಸಿಕೊಂಡೇ ನನ್ನ ಶೀತವನ್ನು ನಿವಾರಣೆ ಮಾಡಿಕೊಂಡಿದ್ದೆ ಎಂದು ತಿಳಿಸುತ್ತಾ, ಇದು ಶೀತದ ಪ್ರಾರಂಭಾವಸ್ಥೆಗೆ ಅತ್ಯತ್ತಮ ಔಷಧಿಯಾಗಿದೆ ಎಂದು ಹೇಳಿದರು. ಇದರ

ಪರಿಮಳವೇ ನಿಮ್ಮ ಮೂಗು–ಗಂಟಲುಗಳನ್ನು ಸಂಪೂರ್ಣವಾಗಿ ಆರಾಮಗೊಳಿಸುತ್ತದೆ ಹಾಗೂ ಅರೋಗ್ಯವನ್ನು ತರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 4, 1961**

**ಉನ್ಮನೀ ಮನೋಭಾವದ ಕ್ರಿಯೆ**

ಶ್ರೀಮಾತೆಯವರು ಎಸ್ ಎನ್ನುವ ವ್ಯಕ್ತಿಗೆ ಒಂದು ಪುಷ್ಪವನ್ನು ಕೊಡುತ್ತಾ "ಇದು ಉನ್ಮನೀ ಮನೋಭಾವದ ಕ್ರಿಯಾ ಪುಷ್ಪ" ಎಂದರು. ಇದು ಸುಂದರ–ವಾಗಿದೆಯೆಲ್ಲವೇ ಎಂದು ಕೇಳುತ್ತಾ, ನೋಡು ಎಷ್ಟೊಂದು ಜೀವಂತಿಕೆಯಿಂದ ಕೂಡಿದೆ, ಸ್ಪಂದನಶೀಲವಾಗಿದೆ! ನಿಜವಾಗಿಯೂ ಪ್ರೇಮಮಯಿಯಾಗಿದೆ!

*

**ಸಹನಶೀಲತೆ; ಜಿನಿಯಾ ಪುಷ್ಪ**

ಓ... ಆ ಒಂದು  ಇದು ನನ್ನ ಬಳಿ ಸಹನಶೀಲತೆ ಎನ್ನುವ ಜಿನಿಯಾ ಎನ್ನುವ ಪುಷ್ಪಗಳು ಇದ್ದವು. ಅವು ತುಂಬ ಕಲಾತ್ಮಕವಾಗಿಯೂ ಇದ್ದವು ಅಲ್ಲದೇ ಹೂವಿನ ಪ್ರತಿಯೊಂದು ಪಕಳೆಯೂ ವರ್ಣರಂಜಿತವಾಗಿ ಚಿತ್ರಿಸಲ್ಪಟ್ಟಂತೆ ಇದ್ದವು. ಅವೆಲ್ಲವೂ ಒಟ್ಟಂದದಲ್ಲಿ ಅತ್ಯಂತ ಸೌಷಮ್ಯಪೂರ್ಣವಾಗಿದ್ದವು. ಅಷ್ಟೇ ಅಲ್ಲದೇ, ನಾನಾ ಸ್ವರೂಪದಲ್ಲಿ ಇದ್ದವು. ಓ.. ಈ ಪ್ರಕೃತಿ ಎಷ್ಟೊಂದು ಅಚ್ಚರಿಗಳಿಂದ ತುಂಬಿದೆ... ಅಂತಿಮವಾಗಿ ನಾವು ಅದರ ನಕಲು ಪ್ರತಿಗಳೋ ಅಥವಾ ಒಡ್ಡೊಡ್ಡು ರೂಪವೋ ಆಗಿದ್ದೇವೆ ಅಷ್ಟೇ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 18, 1961**

**ಅಮರತ್ವ**

ನಾನು ಇಲ್ಲಿ ನಿನ್ನ ಸಲುವಾಗಿ ಒಂದು ಸಮಗ್ರ ಸಂಕಥನವನ್ನೇ ತಂದಿದ್ದೇನೆ.! ಎನ್ನುತ್ತಲೇ ಶ್ರೀಮಾತೆಯವರು ಕೆಲವು ಪುಷ್ಪಗಳನ್ನು ನೀಡುತ್ತಾರೆ. ಇವುಗಳಲ್ಲಿ ಮೊದಲನೇಯದು "ವೇದದ ಗುರಿ"ಯಾಗಿದೆ; ಅಂದರೆ 'ಅಮರತ್ವ'. ಅದು ಅವುಗಳ ಗಮ್ಯವೂ ಹೌದು. ಈ ಸತ್ಯವು ಅವುಗಳನ್ನು ಅಮರತ್ವದೆಡೆಗೆ

ಕರೆದೊಯ್ಯುತ್ತದೆ. ಅಮರತ್ವವನ್ನು ಪಡೆಯುವದೇ ಅವುಗಳ ಅತ್ಮೀಯ ಬಯಕೆಯೂ ಆಗಿತ್ತು. ಇದು ಕೇಲವ ಭೌತಿಕ ಸ್ವರೂಪದ ಅಮರತ್ವವೆಂದು ನಾನು ಯೋಚಿಸುತ್ತಿಲ್ಲ. ಇದು ನನಗೆ ಗೊತ್ತಿರುವ ಖಚಿತತೆ ಇರದಿದ್ದರೂ, ಇವು ತಮ್ಮ ಮೂಲದ ಕುರಿತು ಸಂಭಾಷಿಸುತ್ತವೆ. ಇದು ವೇದಕ್ಕಿಂತಲೂ ಹಾಗೂ ಕಬ್ಬಲಕ್ಕಿಂತಲೂ ಪೂರ್ವದಲ್ಲಿರುವ ಆದಿಮ ಪರಂಪರೆಯಾಗಿದೆ. ಅವು ಈ ಭೂಮಿಯ ಮೇಲೆ ಅಮರತ್ವವನ್ನು ಪಡೆದುಕೊಳ್ಳುವ ಕುರಿತೇ ಮಾತನಾಡುವಂತಿವೆ. ಈ ಭೂಮಿಯ ಮೇಲೆ ಶ್ರೀಅರವಿಂದರ ಚಿಂತನವನ್ನು ಈ ರೀತಿ ರೂಪಾಂತರಣಗೊಳಿಸಿವೆ. ಅವುಗಳ ವಿಷಯವನ್ನು ನೇರಾನೇರವಾಗಿ ವ್ಯಕ್ತಪಡಿಸದಿದ್ದರೂ, ಅವುಗಳು ಈ ವಿಷಯವನ್ನು ಖಚಿತವಾಗಿಯೂ ಅರಿತುಕೊಂಡಿವೆ.

*

**ದೈವತ್ವದೊಡನೆ ಮಿತ್ರತ್ವ**

ಶ್ರೀಮಾತೆಯವರು ಮತ್ತಷ್ಟು ಪುಷ್ಪಗಳನ್ನು ಕೊಡುತ್ತಾ, ಇದು ಹೆಚ್ಚಾಗಿ ವೈಯಕ್ತಿಕವಾದ ಆಯಾಮ: ದೈವತ್ವದೊಡನೆ ಮಿತ್ರತ್ವ, ಆ ದೈವತ್ವದೊಡನೆ ನೀವು ಮಿತ್ರತ್ವ ಭಾವದಲ್ಲಿ ಸಂವಹನಗೊಳ್ಳುತ್ತಿದ್ದಲ್ಲಿ, ಆಗ ನೀವು ಪರಸ್ಪರ ಅರಿತುಕೊಳ್ಳುತ್ತೀರಿ, ನೀವು ಆಗ ಪರಸ್ಪರರಲ್ಲಿ ಹೆದರಬೇಕಾಗಿಲ್ಲ. ಹೀಗಾಗಿ ನೀವು ಉತ್ತಮ ಮಿತ್ರರೂ ಆಗುತ್ತೀರಿ.

*

**ಜಗತ್ತನ್ನೇ ಪಾಲಿಸುತ್ತಿರುವ ವಿಶ್ವಪ್ರೇಮ**

ಇದೋ ಇಲ್ಲಿ ಮತ್ತೊಂದು ಅಚ್ಚರಿ ಇದೆ! ಎಂದು ಹೇಳುತ್ತಲೇ ತಮ್ಮ ಬಳಿಯಿದ್ದ "ಜಗತ್ತನ್ನೇ ಪಾಲಿಸುತ್ತಿರುವ ದೈವೀ ಪ್ರೇಮದ ಪುಷ್ಪವನ್ನು" ಕೊಟ್ಟರು. ಓ... ಇದಕ್ಕೆ ಅದೆಂತಹ ಸಾಮರ್ಥ್ಯವಿದೆ! ಇದು ಉದಾರಗುಣವುಳ್ಳ, ವ್ಯಾಪಕ ಗುಣವನ್ನು ಹೊಂದಿದೆ. ಸಂಕುಚಿತತೆಯ ಲವಶೇಷವೂ ಇಲ್ಲಿಲ್ಲ. ಕ್ಷೀಣತನವು ಎಂದಿಗೂ ಬರುವದಿಲ್ಲ ಅಥವಾ ಸೀಮಿತಗೊಳ್ಳುವ ಅಂಶಗಳೆಂದೂ ಆಗಮಿಸದ ಸ್ಥಿತಿಯಲ್ಲಿ ಇದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ನವೆಂಬರ್ 7, 1961**

## ದೈವೀ ಪುಷ್ಪಗುಚ್ಛ



ಇಲ್ಲಿದೆ ನೋಡಿ, "ಕೃಪೆ". ಇಲ್ಲಿ ಸಮತೋಲನವಾಗಿದೆ. ಎಷ್ಟೊಂದು ಮಧೂರವಾಗಿದೆ! ಇಲ್ಲಿ ನೋಡಿ, ಯಾವುದೇ ಧೂಸರದ ಹೊದಿಕೆ ಇರದೇ ಪರಿಶುಭ್ರವಾಗಿರುವ ಪ್ರಕಾಶವಿದು. ಇದು ಪವಿತ್ರವೂ ಹೌದು. ಇದೊಂದು "ಸಮಗ್ರ ಸಂವಾದ" ಎನ್ನುತ್ತಲೇ ಅಲ್ಲಿದ್ದ ಪುಷ್ಪಗಳ ಕರಂಡಕದಲ್ಲಿ ಶ್ರೀಮಾತೆಯವರು ಮತ್ತೆರಡು ಪುಷ್ಪಗಳನ್ನು ಇರಿಸುತ್ತಾರೆ. ಇವುಗಳಲ್ಲಿ ಒಂದು "ಸೇವೆ" ಆದರೆ ಮತ್ತೊಂದು "ಶ್ರೀ ಅರವಿಂದರ ಸಾನುಕಂಪ"ವಾಗಿದೆ. ಹೌದು ಇದು ಶ್ರೀ ಅರವಿಂದರ ಸಾನುಕಂಪದೊಡನೆ ನಡೆಯುವ ಸಮಗ್ರ ಸಂವಾದವೇ ಆಗಿದೆ. ಅವರ ಈ ಸಾನುಕಂಪವೇ ನಾವು ಶ್ರೀ ಅರವಿಂದರ ಸಲುವಾಗಿ ನಾವು ಸೇವೆ ಮಾಡಲು ಅವಕಾಶವನ್ನೂ ಒದಗಿಸುತ್ತಿದೆ.



**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 25, 1961**



**ಸೌಗಂಧಪೂರ್ಣ ಆನಂದ**

ಈ ದೈವೀ ಸ್ಪಂದನದ ಮೂಲಕವೇ ಈ ಸುವಾಸನೆಯನ್ನು ನಾನು ಈಗಾಗಲೇ ಅನುಭವಿಸಿದ್ದೇನೆ. ಇದು ಸುಗಂಧಗಳಲ್ಲಿಯೂ ಸ್ಪಂದಗೊಳ್ಳುವ ಆನಂದವಾಗಿದೆ. ಇಲ್ಲಿಯೇ ನನ್ನ ಕೋಣೆಯ ಕಿಟಕಿಯ ಕೆಳಗೇ, ನೃಪೇಂದ್ರನ ಅಡುಗೆ ಕೋಣೆ ಇದೆ. ಅದು ನಿಮಗೂ ಗೊತ್ತಿದೆ. ಅಲ್ಲಿ ಪ್ರತಿದಿನವೂ ಮುಂಜಾನೆ ಮತ್ತು ಸಂಜೆ ಮಕ್ಕಳಿಗಾಗಿ ತಿಂಡಿ–ತಿನಿಸುಗಳನ್ನು ಪಾಕಗೊಳಿಸಲಾಗುತ್ತಿದೆ. ಅಲ್ಲಿಂದಲೇ ಅದರ ಪರಿಮಳವು ತೇಳಿಕೊಂಡು ಗಾಳಿಯಲ್ಲಿ ಭರದಿಂದ ನುಗ್ಗಿ ಬರುತ್ತದೆ.

ಆಮೇಲೆ ಅಲ್ಲಿ ಸಮಾಧಿಯ ಹತ್ತಿರ ಇರುವ ಮರವು ಹೂವಿನಿಂದ ತುಂಬಿಕೊಂಡಾಗಲಂತೂ, ಅ ಪುಷ್ಪಗಳ ಪರಿಮಳವೂ ಗಾಳಿಯಲ್ಲಿ ರಭಸದಿಂದ ತೇಲಿತೇಲಿಕೊಂಡು ನನ್ನತ್ತ ಬರುತ್ತದೆ. ಅಲ್ಲಿಗೆ ಬಂದ ಜನರೂ ಬೆಳಗಿಸುವ ಊದುಬತ್ತಿಯ, ಧೂಪಗಳ ಪರಿಮಳವೂ ಸಹಿತ ಈ ಗಾಳಿಯಲ್ಲಿ ಮಿಳಿತಗೊಳ್ಳುತ್ತಿದೆ. ಇಲ್ಲಿ ಪ್ರತಿಯೊಂದು ಸುವಾಸನೆಯೂ (ಸುಗಂಧವೆಂದು ಕರೆಯೋಣ) ತೇಲಿಕೊಂಡು ಬರುತ್ತಿದೆ. ಅದೆಲ್ಲವೂ ದೈನಂದಿನ ಜಪದ ಸಲುವಾಗಿ ಬರುತ್ತಿರುವದರಿಂದ, ಈ ಸುಗಂಧದ ಆನಂದವು ಲಭ್ಯವಾಗುತ್ತದೆ. ಇಲ್ಲಿ ಬರುತ್ತಿರುವ ಪ್ರತಿಯೊಂದು ಸುಗಂಧಕ್ಕೂ ಒಂದು ಅರ್ಥವಿದೆ. ಒಂದು ಅಭಿವ್ಯಕ್ತಿ ಇದೆ. ಅದನ್ನು ಹೇಗೆಂದು ವರ್ಣಿಸುವದು? ಅದರ ಗುರಿ, ಅದರ ಉದ್ದೇಶ

ಏನೆಂದು ಹೇಳುವದು? ಅತೀ ಆಕರ್ಷಕವಾಗಿದೆ! ಅಲ್ಲಿರುವ ಸುಗಂಧಗಳಲ್ಲಿ ಯಾವುದು ಒಳ್ಳೆಯದು ಯಾವುದು ಕಡಿಮೆ ಎಂದು ಹೇಳಲು ಸಾಧ್ಯವೇ ಇಲ್ಲ. ಆ ಪರಿಕಲ್ಪನೆಯೇ ಸಂಪೂರ್ಣ ಹೊರಟು ಹೋಗಿದೆ. ಪ್ರತಿಯೊಂದು ಸುಗಂಧಕ್ಕೂ ಒಂದು ಅಂತರಾರ್ಥವಿದೆ. ಅದರದೇ ಪ್ರಯೋಜನವಿದೆ. ನಾನು ಇದನ್ನು ಸುದೀರ್ಘ ಅವಧಿಯಿಂದಲೂ ಇದನ್ನು ಅನುಭವಿಸುತ್ತಲೇ ಇದ್ದೇನೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 19, 1961**

**ವಿಜಯ**

ವಿಜಯ! ಹೌದು ಇದು "ಅತಿಮಾನಸೀಯ ವಿಜಯ". ಅಂದರೆ ಎಲ್ಲ ಆಯಾಮಗಳನ್ನೂ ಒಳಗೊಂಡು ವಿವರವಾಗಿರುವ "ವಿಜಯವಾಗಿದೆ".

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜುಲೈ 7, 1961**

**ಅಸಂದಿಗ್ಧವಾದ ಪ್ರಮಾಣ**

ಕಠಿಣತೆಯನ್ನು ಸಂಪೂರ್ಣವಾಗಿಯೇ ನಿರಾಕರಿಸುವ ಸ್ವಭಾವವಿದಾಗಿದೆ. ಇದು ಅತ್ಯಂತ ಸುಂದರವೂ ಆಗಿದೆ. ಈ ಹೂವನ್ನು ನೋಡಿದಾಗ, ಅದು ಅತ್ಯಂತ ಘನತೆಯಿಂದಲೂ, ಪ್ರಶಾಂತತೆಯಿಂದಲೂ, ಖಚಿತವಾಗಿಯೂ ನೈಜವಾಗಿ ನಿಶ್ಚಲತೆಯ ಸಂಕೇತವಾಗಿರುವದನ್ನು ಕಂಡಿದ್ದೆ. ಇದು ಏಕೆ ಹೀಗಿದೆ ಎನ್ನುವದು ನನಗೆ ತಿಳಿದಿಲ್ಲ. ನಾನು ಎಷ್ಟೊಂದು ಸುದೀರ್ಘ ಸಮಯ ಅದನ್ನು ನೋಡುತ್ತಿದ್ದೇನೋ, ಅದು ಅಷ್ಟೇ ಪ್ರಮಾಣದಲ್ಲಿ ಪ್ರಭಾವ ಬೀರುತ್ತಿತ್ತು. ಇದರ ಮಹತ್ವವೇನು ಎಂದು ನನ್ನನ್ನು ಕೇಳಿದ್ದರಿಂದ, ನಾನು ಹೇಳುವದು ಇಷ್ಟೇ, "ಅಸಂದಿಗ್ಧವಾಗಿರುವ ಪ್ರಮಾಣ"ಇದು. ಅಂದರೆ ಯಾವುದೇ ಸಂಶಯವೂ ಇರದ ಖಚಿತತೆ ಇದಾಗಿದೆ. ಆಧ್ಯಾತ್ಮಿಕ ಅನುಭಾವದ ವಲಯದಲ್ಲಿ ಇದನ್ನು "ಅತಿಶಯದ ಸದಭಿರುಚಿ" ಎಂದು ಕರೆಯಬಹುದಾಗಿದೆ. ಅದು ಅಭಿವ್ಯಕ್ತಗೊಳಸುತ್ತಿರುವದಕ್ಕಿಂತಲು ಅದರ ಆಂತರ್ಯ ಇನ್ನೂ ಇನ್ನೂ ಮಹತ್ವದ್ದಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಸೆಪ್ಟೆಂಬರ್ 30, 1961**

## ಪರಿಪೂರ್ಣ ಉದಾರತೆ ಮತ್ತು ಕಾಲಾತೀತತೆ

ನಾನು ಈ ಝಡ್ ಎನ್ನುವ ವ್ಯಕ್ತಿಯನ್ನು ನೋಡುತ್ತಿದ್ದಾಗ, ನನ್ನ ಕೈಯಲ್ಲಿ ಈ 'ಪರಿಪೂರ್ಣ ಉದಾರತೆ ಮತ್ತು ಕಾಲಾತೀತ' ಹೂಗಳು ಇದ್ದವು. 'ಪರಿಪೂರ್ಣ ಉದಾರತೆ' ಎಂದರೆ ಏನು ಎನ್ನುವದನ್ನು ಅವನಿಗೆ ವಿವರಿಸಿದೆ. ಅಹಂಕಾರದ ಪರಿಣಾಮವು ಜೀವಿಯನ್ನು ಸಂಕುಚಿತಗೊಳಿಸುತ್ತದೆ ಎಂದೂ ತಿಳಿಸಿದೆ. ನಾನು ಇದನ್ನು ಅವನಿಗೆ ಹೇಳುತ್ತಿದ್ದಂತೆಯೇ ಅಲ್ಲಿ ಆ ಅನುಭವವು ರೂಪುಗೊಂಡಿತು, ಅದರ ಚಿಂತನವನ್ನು ಮಾತ್ರ ನಾನೀಗ ನೆನಪಿನಲ್ಲಿ ಇಟ್ಟುಕೊಂಡಿದ್ದೇನೆ. ಆದರೆ ಆಗ ಆ ಅನುಭವವೇ ಸ್ವಯಂ ಅಲ್ಲಿ ಇತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 2, 1961**

## ಉಪಶಮನಗೊಳಿಸುವ ಭೌತಿಕ ಶಕ್ತಿ

ಎಸ್ ಎನ್ನುವ ವ್ಯಕ್ತಿಯು ಶ್ರೀಮಾತೆಯವರಿಗೆ "ಉಪಶಮನಗೊಳಿಸುವ ಭೌತಿಕ ಶಕ್ತಿಯ" ಹೂಗಳನ್ನು ಕೊಡುತ್ತಾರೆ. ಈ ವಿಷಯದ ಕುರಿತು ಶ್ರೀಮಾತೆಯವರು. ಇದು ಖಾಯಂ ಆಗಿಯೇ ಪ್ರತಿಷ್ಠಾಪಿತಗೊಳ್ಳಬೇಕು ಎನ್ನುವದು ನನ್ನ ಅಭಿಪ್ರಾಯವಾಗಿದೆ. ಯಾರಾದರೂ "ಇಲ್ಲಿ ನನಗೆ ನೋವಿದೆ" ಎಂದು ಹೇಳಿದಾಗ, ನಾನು ನನ್ನ ಹಸ್ತವನ್ನು ಆ ಸ್ಥಾನಕ್ಕೆ ಚಾಚುತ್ತೇನೆ. ಅಷ್ಟೇ.. .. ಅಲ್ಲಿಗೆ ನೋವು ಮಾಯವಾಗಿರುತ್ತದೆ.

ಹಸ್ತಗಳಿಗೆ ಸಾನುಕಂಪದ ಅನುಭವವಿರುತ್ತದೆ. ಅದು ಸಾಧ್ಯವೆನ್ನುವದು ಹಸ್ತಗಳಿಗೂ ಗೊತ್ತಿದೆ. ಸ್ಪಂದನ ವಿಷಯದಲ್ಲಿ ಅವು ಸದಾ ಪ್ರಜ್ಞಾಪೂರ್ಣವಾಗಿರುತ್ತವೆ. ಹೀಗಾಗಿ ಎಲ್ಲವೂ ಸಾಧ್ಯವೆನ್ನುವದು ಅವುಗಳಿಗೆ ಖಚಿತವಾಗಿಯೂ ಗೊತ್ತಿದೆ. ಒಂದು ದಿನ "ಈ" ಎನ್ನುವ ವ್ಯಕ್ತಿಯು ಜಾರಿ ಬಿದ್ದಿದ್ದರು. ಅದು ಮೊದಲು ನನಗೆ ಗೊತ್ತಿರಲಿಲ್ಲ. ಅವಳ ಮೊಳಕಾಲಿಗೆ ಪೆಟ್ಟಾಗಿತ್ತು. ಅದು ಅಲ್ಲದೇ ತರಚುಗಾಯವೂ ಆಗಿತ್ತು. ಇವುಗಳಿಂದಾಗಿ ಅವಳು ನೋವಿನಲ್ಲಿ ಇದ್ದಾಗ, ತಾನಿದ್ದ ಒಂದೇ ವಸ್ತ್ರವನ್ನೇ ಧರಿಸಿಕೊಂಡೇ ಇಲ್ಲಿ ಬಂದಿದ್ದಳು. ನಾನು ಅದನ್ನು ಕಂಡು, "ಏನಾಗಿದೆ ನಿನಗೆ" ಎಂದು ಕೇಳಿದೆ. "ನಾನು ಬಿದ್ದು ಬಿಟ್ಟೆ" ಎಂದು ಉತ್ತರಿಸಿದ್ದಳು. ಆಗ ನನ್ನ ಈ ಹಸ್ತ (ಶ್ರೀಮಾತೆಯವರು ಬಲಹಸ್ತವನ್ನು ತೋರಿಸುತ್ತಾ)ವೇ ಇದ್ದಕ್ಕಿದ್ದಂತೆಯೇ ಚಾಚಿ ಅವಳ ಮೊಣಕಾಲನ್ನು ಸ್ಪರ್ಶಿಸಿತು.

ಅದೇ ರೀತಿಯಲ್ಲಿ ನನ್ನ ಬೆರಳುಗಳೂ ಸಹಿತ ಆ ನೋವಿನ ಕಂಪನವನ್ನು ಅನುಭವಿಸಿದವು. ಅದು ಸೂಜಿಗಳಿಂದ ಚುಚ್ಚುತ್ತಿರುವ ಹಾಗೇ ಇತ್ತು. ಆದರೆ ಆ ಸೂಜಿಗಳು ಪ್ರಕಾಶದ ಸೂಜಿಗಳಾಗಿದ್ದವು. ಕಂಪನಗೊಳ್ಳುತ್ತ ಕಂಪನಗೊಳ್ಳುತ್ತಲೇ ಇದ್ದವು. ಹೀಗಾಗಿ, ನಾನು ನನ್ನ ಹಸ್ತವನ್ನು ಅಲ್ಲಿ ಇಟ್ಟು ಓ! . . . ಇಲ್ಲಿಯೇ. . ಎಂದು ಕೇಳಿದೆ. ಅವಳು ಅತ್ಯಾಶ್ಚರ್ಯಕರ ಎನ್ನುವಂತೆಯೇ ಎಲ್ಲ ನೋವಿನಿಂದಲೂ ಮುಕ್ತಳಾಗಿದ್ದಳು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 13, 1966**

## ಕೃಪೆ

ಶ್ರೀಮಾತೆ ಎಸ್ ಎನ್ನುವವರಿಗೆ ಹೂವುಗಳನ್ನು ಕೊಡುತ್ತಾ, ಇದು "ಕೃಪೆ" ಎಂದು ಹೇಳಿದರು.

ನೀನು ಈ ಎರಡನೇ 'ಕೃಪೆ'ಯನ್ನೂ ಇಚ್ಛಿಸುತ್ತೀ ಅಲ್ಲವೇ? ಆದರೆ ಅದು ಬಹುತೇಕವಾಗಿ ದೊರೆಯುವಂತೆ ಇಲ್ಲ. ಓ ಮತ್ತೊಂದು ದಿನ ಒಬ್ಬರು ನನ್ನನ್ನು ಒಂದು ಪ್ರಶ್ನೆ ಕೇಳಿದ್ದರು. ಅವರ ಪ್ರಶ್ನೆಯು ನವಂಬರ 24ರ ವಿಷಯಕ್ಕೆ ಸಂಬಂಧ ಪಟ್ಟಿದ್ದು. ಅದಕ್ಕೆ ಶ್ರೀ ಅರವಿಂದರು ಕೊಟ್ಟ ಉತ್ತರದ ಕುರಿತಾಗಿತ್ತು. ಆ ವಿಷಯವು ಅಷ್ಟೇ ಆಸಕ್ತಿದಾಯಕವೂ ಆಗಿತ್ತು. ಇದ್ದಕ್ಕಿದಂತೆ ಅಲ್ಲಿ ವಿಶಿಷ್ಟವಾದುದನ್ನು ನಾನು ನೋಡಿದ್ದೆ, ಅವರ ಮಾತಂತೂ ಅತ್ಯದ್ಭುತವಾಗಿತ್ತು. ಅಲ್ಲಿ "ಆತ್ಮೀಯತೆ" ಮತ್ತು "ಕೃಪೆ" ಎರಡನ್ನೂ ನೋಡಿದ್ದೆ. 'ನಿಯತಿ ಮತ್ತು ಅನುಕಂಪ' ಇವುಗಳ ಜೊತೆಗೆ ಈ ಆತ್ಮೀಯತೆಯು ಪ್ರತಿಯೊಂದರ ಜೊತೆಗೂ ಹೇಗೆ ಲೀಲೆಗೊಳ್ಳುತ್ತದೆ ಮತ್ತು ಯಾವುದೇ ವ್ಯತ್ಯಾಸವಿಲ್ಲದೇ ನಿಬಂಧನೆಗಳಿಲ್ಲದೇ ಅದು ಕಾರ್ಯಪ್ರವೃತ್ತವಾಗಿರುತ್ತದೆ. ಈ ಅನುಕಂಪವೇ ಆ ಕೃಪೆಯನ್ನು ಸ್ವೀಕರಿಸುವ ಹಂತದಲ್ಲಿ ಇರುವ ಹಾಗೆಯೇ ರೂಪುಗೊಂಡಿರುತ್ತದೆ.

ಇದು ಆಶ್ಚರ್ಯಕರವಾಗಿರುವ ಸಂಗತಿ ಎಂದು ನನಗೆ ಖಚಿತವಾಗಿತ್ತು.

ಇದು ನನ್ನ ಅನುಭವವೂ ಆಗಿತ್ತು. ಈ ಆತ್ಮೀಯತೆಯ ಕಾರ್ಯವು ಬಲೆಯ–ಜಾಲರಿಯ ಮೂಲಕವೇ ಘಟಿಸುತ್ತಿರುವದು. ಜೊತೆಗೆ ಈ ಕೃಪೆಯು ಎಷ್ಟೊಂದು ಶಕ್ತಿದಾಯಕವಾಗಿ, ನಿಯತಿಯಾಗಿ ಇರುವದಷ್ಟೇ ಅಲ್ಲದೇ ಅದು ಎಂದಿಗೂ

ಅಡೆತಡೆಯನ್ನು ಉಂಟು ಮಾಡಲಾರದು ಎನ್ನುವದನ್ನು ನಾನು ಅನುಭವಿಸಿದ್ದೆ. ಅದನ್ನು ಕಂಡಿದ್ದೇನೆ. ಈ ಆತ್ಮೀಯತೆಯು ಸರ್ವರನ್ನೂ ಸ್ಪರ್ಶಗೊಳ್ಳುತ್ತಿರುದನ್ನು ನಾನು ನೋಡಿದ್ದೇನೆ. ಆ ಮೂಲಕ ಎಲ್ಲರಿಗೂ ಅವಕಾಶವನ್ನು ಒದಗಿಸುತ್ತಿರುವದನ್ನೂ ಕಂಡಿದ್ದೇನೆ. ಪ್ರತಿಯೊಬ್ಬರಿಗೂ ಅವರದೇ ಆದ ಅವಕಾಶವನ್ನು ಸಮಾನವಾಗಿಯೂ ಒದಗಿಸುತ್ತದೆ, ಎನ್ನುವ ಹೇಳಿಕೆಯಲ್ಲಿ ಅವರು ಏನು ಹೇಳುತ್ತಿದ್ದಾರೆ ಎನ್ನುವದನ್ನು ನಾನು ಅರಿತುಕೊಂಡಿದ್ದೇನೆ. ಅಲ್ಲಿರುವ ಮಹತ್ವದಲ್ಲಿ ಅಥವಾ ಆ ಸ್ಥಿತಿಯಲ್ಲಿ ಕಿಂಚಿತ್ತು ವ್ಯತ್ಯಾಸವಿರುವದಿಲ್ಲ. ಪ್ರತಿಯೊಬ್ಬರಿಗೂ ಒಂದೇ ರೀತಿಯಾದ ಅವಕಾಶ ಅಲ್ಲಿದೆ.

ಹೀಗಾಗಿ ಈ "ಆತ್ಮೀಯತೆಯು" "ಕೃಪೆಯ" ಅಸ್ತಿತ್ವಕ್ಕಾಗಿಯೇ ಎಲ್ಲವನ್ನೂ ಜಾಗ್ರತಗೊಳಿಸುವ ಸಲುವಾಗಿಯೇ ರೂಪಿತಗೊಂಡು ಸ್ಪಷ್ಟವಾಗಿರುತ್ತದೆ. ಜೊತೆಗೆ, ಈ ಕೃಪೆಯ ರೀತಿಯಲ್ಲಿಯೂ ವಿಶೇಷವೊಂದು ವೈಶ್ವಿಕದಲ್ಲಿ ಇದೆ ಎನ್ನುವದನ್ನೂ ತೋರಿಸುತ್ತಿದೆ. ಯಾರು ವಿಶ್ವಾಸವನ್ನು ಹೊಂದಿ ಅಭೀಪ್ಸೆಯನ್ನು ಹೊಂದುತ್ತಾರೆಯೋ ಅವರಿಗೆ ಖಚಿತವಾಗಿಯೂ ಈ "ಕೃಪೆಯು" ತಕ್ಷಣದಲ್ಲಿಯೇ ಕ್ರಿಯೆಗೆ ತೊಡಗಿಕೊಳ್ಳುತ್ತದೆ. ಅದು ಯಾವಾಗಲೂ ಕ್ರಿಯಾಶೀಲತೆಯಲ್ಲಿಯೇ ಇರುತ್ತದೆ. ಆದರೆ ಮುಖ್ಯ ಸಂಗತಿ ಏನೆಂದರೆ, ಯಾರು ಸಂಪೂರ್ಣ ವಿಶ್ವಾಸವನ್ನು ಹೊಂದಿದ್ದಾರೆಯೋ ಅವರಿಗೆ ಮಾತ್ರ ಪೂರ್ಣಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಲಭ್ಯವಾಗುತ್ತದೆ.

ಇದೆಲ್ಲವೂ ಸುಸ್ಪಷ್ಟವಾಗಿದೆ. ಅತ್ಯಂತ ಸುನಿರ್ದಿಷ್ಟವೂ ಆಗಿದೆ! ನಿಜವಾಗಿಯೂ ಇದೊಂದು ನೂತನವಾದ ಅನುಭವವಾಗಿದೆ. ಇದೊಂದು ಆವಿಷ್ಕರಣವಾಗಿದೆ. ಶ್ರೀ ಅರವಿಂದರು ಈ ಆತ್ಮೀಯತೆಯನ್ನು ಹೇಗೆ ಅಭಿವ್ಯಕ್ತಗೊಳಿಸುತ್ತಿದ್ದರು ಎಂದರೆ, . . . ಅದು ಅವರ ಕಣ್ಣುಗಳಲ್ಲಿಯೇ ಕಾಣಿಸುತಿತ್ತು. ಅವರ ಕಣ್ಣುಗಳು ಸಂಪೂರ್ಣವಾಗಿ ಆತ್ಮೀಯತೆಯೇ ಆಗಿದ್ದವು.

ಶ್ರೀ ಅರವಿಂದರು ಒಂದೆಡೆಗೆ ಬರೆದಿರುವಂತೆ, "ಕೃಪೆಯು ಯಾವಾಗಲೂ ಯಾರಿಂದಲೂ ದೂರವಿರುವದಿಲ್ಲ. ಆದರೆ ಕೆಲವರು ತಾವಾಗಿಯೇ ಕೃಪೆಯಿಂದ ದೂರವುಳಿದುಕೊಳ್ಳುತ್ತಾರೆ. ಬಹುತೇಕವಾಗಿ ಮಾನವರು ಈ ಕೃಪೆಯಿಂದ ತಮ್ಮನ್ನು ತಾವೇ ದೂರವಿರಿಸಿಕೊಂಡಿದ್ದಾರೆ". ಆ ಶಬ್ದಗಳು ನಿಖರವಾಗಿ ನನಗೀಗ ನೆನಪಿನಲ್ಲಿ ಇಲ್ಲ, ಆದರೆ ಅವರು ಈ ಶಬ್ದಗಳನ್ನೇ ಕೊಂಕಿಸಿ ಹೇಳಿದ್ದಾರೆ

ಎನಿಸುತ್ತಿದೆ. ಕೃಪೆಯು ಯಾವಾಗಲೂ ತನ್ನ ಕಾರ್ಯದಿಂದ ಹಿಂದೆ ಸರಿಯುವದಿಲ್ಲ. ಅದು ಎಂದಿಗೂ ಸಾಧ್ಯವೂ ಇಲ್ಲ. ಅದು ಯಾವಾಗಲೂ ಕ್ರಿಯಾಪ್ರವೃತ್ತಿಯಲ್ಲಿಯೇ ಇರುತ್ತದೆ ಅಲ್ಲವೇ? ಆದರೆ ಮಾನವರು ಮಾತ್ರ ಕೊಂಕಿನಲ್ಲಿ, ವಕ್ರತೆಯಲ್ಲಿಯೇ ಉಳಿದುಕೊಳ್ಳಲು ಯತ್ನಿಸುವರು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಡಿಸೆಂಬರ್ 7, 1966**

**"ವಿಶ್ವಾಸ ಮತ್ತು ಸಮರ್ಪಣೆ"– ರಾಧಾ ಪುಷ್ಪ**

ಸಂದರ್ಶನಕ್ಕಾಗಿ ಬಂದವರನ್ನು ಕುರಿತು, ನನ್ನ ಅಭಿಪ್ರಾಯವೇನೆಂದರೆ, – ಅವಳು ತನ್ನನ್ನು ತಾನೇ ಇಲ್ಲಿ ತೆರೆದುಕೊಳ್ಳಬೇಕಿತ್ತು, ಆ ರೀತಿಯಲ್ಲಿ ಅವಳು ಮುಕ್ತಳಾಗಿದ್ದರೆ, ಅಂದರೆ ಒಂದು ಪುಷ್ಪವು ಹೇಗೆ ಮುಕ್ತವಾಗಿರುವದೋ ಹಾಗೆ ಮುಕ್ತವಾಗಿದ್ದರೆ, ಅದೇ ರೀತಿಯಲ್ಲಿ ಶಾಂತವೂ ಆಗಿದ್ದಲ್ಲಿ, ಇಲ್ಲಿ ಅವಳ ಇರುವಿಕೆಯೂ ಒಳ್ಳೆಯ ಸಂಗತಿಯಾಗಿದೆ. ಅವಳು ತನ್ನ ಜೀವನದ ಬಗೆಗೆ ತೀರಾ ತಲ್ಲಣದಲ್ಲಿ ಇದ್ದಾಳೆ. ಹೀಗೆ ಹೇಳುತ್ತಲೇ ಮಾತೆಯವರು ತಮ್ಮ ಎರಡೂ ಮುಷ್ಟಿಗಳನ್ನು ಬಿಗಿಯಾಗಿ ಮತ್ತೂ ಗಟ್ಟಿಯಾಗಿ ಬಿಗಿಗೊಳಿಸಿಕೊಂಡರು. "ಯಾವಾಗಲೂ ಎಚ್ಚರದಿಂದಿರು", ಮತ್ತು "ಕಣ್ಣುಗಳು ಸದಾ ವಿಶೇಷವಾದುದನ್ನೇ ಕಾಣುತ್ತಿರಲಿ!" ಒಟ್ಟಿನಲ್ಲಿ, ಅವಳು ಈ ರೀತಿ ಮಾಡಿದ್ದೇ ಆದಲ್ಲಿ, ಆಗ ಅವಳು "ಓ ನಿನಗೀಗ ವಿಶ್ವಾಸ ಮೂಡಿದೆ. ಅಲ್ಲಿ ಕೃಪೆಯ ಸ್ವರೂಪದಲ್ಲಿಯೇ ಭದ್ರವಾದ ವಿಶೇಷತೆ ಇದೆ, ನನಗೀಗ ವಿಶ್ವಾಸ ಮೂಡಿದೆ" ಎಂದು ಹೇಳಿಕೊಳ್ಳುತ್ತಾಳೆ.

ಇದೂ ಸಹಿತ ಉತ್ತಮ ಪ್ರಗತಿಯೇ ಆಗಿದೆ. ಈ ರೀತಿಯಲ್ಲಿ ವಿವರಿಸುತ್ತಲೇ ಶ್ರೀಮಾತೆಯವರು "ರಾಧಾ" ಎನ್ನುವ ಪುಷ್ಪವನ್ನು ಕೊಡುತ್ತಾರೆ. "ರಾಧಾ" ಎಂದರೆ ಸಮರ್ಪಣೆ. ಅದಕ್ಕಾಗಿಯೇ ಆ ಕೃಪೆಗೆ ನೀನು ಅನುಬೋಧಗೊಂಡೊದ್ದೇ ಆದರೆ, ಆಗ ಅದು ಖಂಡಿತವಾಗಿಯೂ ವಿಜಯವನ್ನೇ ತರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನವರಿ 7, 1967**

## ಶ್ರೀ ಅರವಿಂದರ

# 'ವೇದ ರಹಸ್ಯ'

**– ಅನುವಾದ: ಪುಟ್ಟು ಕುಲಕರ್ಣಿ**

**3**

ಈಗಾಗಲೇ ಜಿಜ್ಞಾಸೆಯಲ್ಲಿ ಸ್ವೀಕರಿಸಲ್ಪಟ್ಟಿರುವ ಸಿದ್ಧಾಂತಗಳ ಮೂಲಕವಾಗಿಯೇ ಒಂದು **ವಿಚ್ಛೇದ**(Hiatus)ನ್ನು ಇಲ್ಲಿ ರೂಪಿಸಲಾಯಿತು. ಅದು ಈ ಭೌತಿಕ–ಸ್ವರೂಪದಲ್ಲಿ ಅಭಿವ್ಯಕ್ತಿಗೊಳಿಸುತ್ತಿರುವ ಪ್ರಕೃತಿ–ಶಕ್ತಿ(ನೈಸರ್ಗಿಕ–ಶಕ್ತಿ)ಗಳಲ್ಲಿ ಆರಾಧನೆಯನ್ನು ಆಚರಿಸುತ್ತಿದ್ದ ವೇದಕಾಲೀನ ಸಂಗತಿಗಳೂ ಸಹಿತ, ಪ್ರಗತಿ ಹೊಂದಿದ್ದ ಗ್ರೀಕ್(ಯವನ) ಸಂಸ್ಕೃತಿಯ ಮನೋವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಚಿಂತನಗಳಿಂದಲೇ ಪ್ರಭಾವಿತವಾಗಿ, ಈ ಉಪನಿಷತ್ತಿನ ದೇವತೆಗಳು ಮತ್ತು ಪುರಾಣಗಳ ದೇವತೆಗಳ ಸ್ವರೂಪದ ನಿರ್ಧರಣೆಯಲ್ಲಿ ಅನುಷ್ಠಾನಗೊಂಡು ಆಚರಣೆಯಲ್ಲಿದ್ದವು ಎನ್ನುವ ಒಂದು **'ವಿಚ್ಛಿದ್ರ' ಸಿದ್ಧಾಂತ**ವನ್ನೇ ಹೂಡಲಾಯಿತು. ಪ್ರಸ್ತುತದಲ್ಲಿ, ನಾವು ಈ ಸಿದ್ಧಾಂತವನ್ನು ಒಪ್ಪಿಕೊಳ್ಳಬಹುದಾಗಿದೆ, ಏಕೆಂದರೆ – ಮನುಕುಲದ ಪ್ರಜ್ಞಾ ವಿಕಾಸದ ಪ್ರಾರಂಭದ ಅವಧಿಯಲ್ಲಿ ಈ ಮನುಕುಲವು ಖಚಿತವಾಗಿಯೂ ಪೃಥ್ವಿಯ ಮೇಲಿನ ಬದುಕಿಗೆ ಅವತರಣಗೊಂಡರೂ, ಅವನು ಸದಾ ಆಂತರ್ಯದ ಅನ್ವೇಷಣೆಯಲ್ಲಿಯೇ (ಆತ್ಮಿಕವಾಗುವತ್ತಲೇ) ಮುಂದುವರೆಯುತ್ತಾನೆ – ಅಂದರೆ, ಬಾಹ್ಯ ಪ್ರಕೃತಿ–ಶಕ್ತಿಯ ಆರಾಧನೆಯು ಪ್ರಜ್ಞಾಪೂರ್ವಕವಾಗಿಯೇ ಅಭಿನಿವೇಶಗೊಂಡಿದ್ದು ಮತ್ತು ಆ ಮೂಲಕ ಅವನು ತನ್ನದೇ ಆತ್ಮಿಕ ಅಸ್ತಿತ್ವದ ಅಸ್ಮಿತೆಯನ್ನು ಆವಿಷ್ಕಾರಗೊಳಿಸುವತ್ತ ಪ್ರಗತಿ ಹೊಂದುವ ಗುರಿಯೆಡೆಗೆ ಇರುತ್ತದೆ.

ಅಗ್ನಿಯು ವೇದಗಳಲ್ಲಿ ನಿಸ್ಸಂದಿಗ್ಧವಾಗಿಯೂ **'ಅಗ್ನಿಯೇ'** ಆಗಿದ್ದಾನೆ; **ಸೂರ್ಯ(ಆದಿತ್ಯ)**ನೂ 'ಸೂರ್ಯ'ನೇ ಆಗಿದ್ದಾನೆ; **ಪರ್ಜನ್ಯ** ಎನ್ನುವದು ವರ್ಷಾಧಾರೆಯ ಮೇಘ; **ಉಷಾ** ಎನ್ನುವದು ಉದಯ(ಬೆಳಗು): ಇನ್ನುಳಿದ ದೇವತೆಗಳ ವಿಷಯದಲ್ಲಿ ಇಲ್ಲಿ ಕೊಂಚ ಕ್ಷೀಣಗೊಂಡಂತೆ ಕಾಣುವ ಅಥವಾ ಶಾಖೋಪಶಾಖೆಗಳಲ್ಲಿ ರೂಪಿಸಿದಂತೆ ಕಂಡುಬರುತ್ತಿದ್ದರೂ, ಒಂದು ಹಂತದವರೆಗೆ ಕಡಿಮೆ ಸ್ಪಷ್ಟತೆಯನ್ನು ಹೊಂದಿರುವಂತೆ ರೂಪಣೆಗೊಳಿಸಲಾಗಿದೆ. ಆದರೆ, ಇವುಗಳನ್ನು ಜಿಜ್ಞಾಸೆಗೊಳಿಸುವಲ್ಲಿ ನಾವು **ಭಾಷಾವಿಜ್ಞಾನ**

**ತತ್ತ್ವ(Philology)**ದ ಸ್ವರೂಪದ ಊಹೆಗಳ ಮೂಲಕ, ಇವೆಲ್ಲ ಅಸ್ಪಷ್ಟತೆಗಳನ್ನು ಸಟೀಕಸ್ವರೂಪದಲ್ಲಿಯೇ ಪ್ರಸ್ತುತಪಡಿಸಹುದಾಗಿದೆ. ಆದರೆ ನಾವು ಈ ಗ್ರೀಕ್ ಆರಾಧನಾ ಪದ್ಧತಿಯ ವಿಷಯಗಳನ್ನು ಗಮನಿಸಿದಾಗ, ಇದು ವೇದಕಾಲೀನ ಅವಧಿಗಿಂತ ತೀರ ತೀರ ದೂರವೇನೂ ಇಲ್ಲ. ಅದರಲ್ಲೂ ಕಾಲಕ್ರಮಾನುಗತಿಕವಾಗಿರುವಂತಹ ಆಧುನಿಕ ಚಿಂತನಗಳಲ್ಲಿ, ಮಹತ್ವದ ಬದಲಾವಣೆಗಳನ್ನು ಗುರುತಿಸಬಹುದಾಗಿದೆ. ಈ ದೇವತೆಗಳ ಭೌತಿಕ ಗುಣಲಕ್ಷಣಗಳನ್ನು ಒಂದೋ ಉನ್ಮೂಲ(Effaced)ಗೊಳಿಸಲಾಗಿದೆ ಅಥವಾ **ಮನೋವೈಜ್ಞಾನಿಕ ಪರಿಕಲ್ಪನೆ**ಗಳಲ್ಲಿ ಗೌಣಸ್ವರೂಪದಲ್ಲಿ ಗುರುತಿಸುವ ಮೂಲಕ ಅಪ್ರಧಾನಗೊಳಿಸಲಾಗಿದೆ. ಪ್ರಚಂಡ ತೀವ್ರತೆಯ ಸ್ವರೂಪದ ದೇವತೆ ಅಗ್ನಿಯನ್ನು ಸಂಪೂರ್ಣವಾಗಿ ಪರಿವರ್ತಿಸಿ ದುರ್ಬಲ–ದೇವತೆಯ ಸ್ವರೂಪಕ್ಕೆ ತಂದು ಅವನನ್ನು **"ಶ್ರಮಿಕ–ದೇವತೆ"(ಕರ್ಮ ಸ್ವರೂಪದ) (God of Labour)** ಯನ್ನಾಗಿಸಲಾಗಿದೆ; ಅವರ **ಸೂರ್ಯನು ಇಲ್ಲಿ ಅಪೋಲೋ** ಆಗಿ ಕಾವ್ಯಾತ್ಮಕ ಮತ್ತು ಪ್ರಹೇಳಿಕೆಗಳ ಪ್ರೋತ್ಸಾಹನಾ ಸ್ವರೂಪದಲ್ಲಿದ್ದಾನೆ; **ಅಥೇನ್** ದೇವತೆಯೂ ಸಹಿತ, ಮೂಲತಃ ಉಷಾ ಕಾಲದ ದೇವತೆಯೆಂದು **ಸತ್ಯಾಭಾಸ(Plausibly)** ಗೊಳಿಸಲಾಗಿದ್ದು, ತನ್ನ ಭೌತಿಕ ಸ್ವರೂಪದ ಕ್ರಿಯೆಗಳ ಎಲ್ಲ ಸ್ಮರಣೆಗಳನ್ನೂ ಕಳೆದುಕೊಂಡು, ಇದೀಗ ಪ್ರಜ್ಞೆ, ಸಾಮರ್ಥ್ಯಶಾಲಿಯಾದ ಮತ್ತು ಶುದ್ಧಜ್ಞಾನದ ದೇವತೆಯಾಗಿರುವದನ್ನು ಕಾಣಬಹುದಾಗಿದೆ; ಇವರ ಜೊತೆಗೆ ಮತ್ತೆ ಇಲ್ಲಿ ಉಲ್ಲೇಖಿಸಲ್ಪಟ್ಟಿರುವ ಇತರ ದೇವತೆಗಳಾದ – **ಯುದ್ಧ ದೇವತೆ, ಪ್ರೇಮ ದೇವತೆ, ಸೌಂದರ್ಯ ದೇವತೆ**ಗಳು ಈಗಲೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಆದರೆ ಆ ದೇವತೆಗಳ ಭೌತಿಕ ಕ್ರಿಯೆಗಳು ಮಾತ್ರ ಕಣ್ಮರೆಯಾಗಿವೆ. ಮನುಕುಲದ ನಾಗರಿಕತೆಯ ಪ್ರಗತಿಶೀಲ ವಿಕಾಸದ ಕಾರಣದಿಂದಾಗಿ, ಈ ಪರಿವರ್ತನೆಯು ಅನಿವಾರ್ಯವೇ ಆಗಿತ್ತು ಎಂದು ಹೇಳುವದು ಸಮಂಜಸವಾಗುವದಿಲ್ಲ: ಈ ಪರಿವರ್ತನೆಯ ಪ್ರಕ್ರಿಯೆಯ ಕುರಿತಾಗಿ ಅಂತರಾವಲೋಕನ ಮತ್ತು ಸುಸ್ಪಷ್ಟ ವಿಶದೀಕರಣವನ್ನು ಕಡ್ಡಾಯವಾಗಿ ಅಪೇಕ್ಷಿಸುತ್ತದೆ. ಇದೇ ರೀತಿಯ ಪ್ರಕ್ರಿಯೆಯ ಪರಿವರ್ತನೆಯನ್ನು ನಾವು ಪುರಾಣಗಳಲ್ಲಿಯೂ ಇನ್ನಿತರ ದೇವತೆಗಳನ್ನು ಮತ್ತು ಆಕೃತಿ(ಶಿಲ್ಪ)ಗಳನ್ನು – ಸಂಯೋಜಿಸುವ – ಅಸ್ಪಷ್ಟ ಪ್ರಕ್ರಿಯೆಗಳ ಮೂಲಕ ಸಂಯೋಜಿಸಿರುವದನ್ನು ಕಾಣುತ್ತೇವೆ. ಆದರೆ ಇದೇ ಸ್ವರೂಪದ ಅಸ್ಪಷ್ಟತೆಯಲ್ಲಿಯೇ ಪ್ರಕ್ರಿಯೆಗೊಳಿಸಲ್ಪಟ್ಟಿರುವ **ಗ್ರೀಕ ಪುರಾಣ ಶಾಸ್ತ್ರ**ಗಳಲ್ಲಿಯೂ ಅಲ್ಲಿ ವಿಕಾಸದ ಹಂತಗಳಲ್ಲಿ ಕಾಣುತ್ತೇವೆ.

**ಸರಸ್ವತಿ** ನದಿಯು ಜ್ಞಾನದೇವತೆಯಾಗಿ ಹಾಗೂ ಸರಸ್ವತಿ(ಸ್ವರ) ದೇವತೆಯಾಗಿದ್ದಾಳೆ; ವೇದಕಾಲದ **ವಿಷ್ಣು** ಮತ್ತು **ರುದ್ರ** ಇದೀಗ ಪರಮೋಚ್ಚ ಸ್ಥಾನವನ್ನು ಪಡೆದುಕೊಂಡು ಪರಮಾತ್ಮ ಸ್ವರೂಪವೇ ಆಗಿದ್ದಾರೆ, **ತ್ರಿಮೂರ್ತಿ–ತತ್ತ್ವಗಳ** ಹಿನ್ನೆಲೆಯಲ್ಲಿ ಇವರನ್ನು ಅಭಿವ್ಯಕ್ತಗೊಳಿಸಲಾಗಿದ್ದು, ಒಬ್ಬ ದೇವತೆ ಬ್ರಹ್ಮಾಂಡದ **ಸ್ಥಿತಿಕಾರಕ**ನಾಗಿದ್ದರೆ ಮತ್ತೊಬ್ಬ ದೇವತೆ **ಲಯಕಾರ**ನನ್ನಾಗಿಸಿ ಸ್ವರೂಪಗೊಳಿಸಲಾಗಿದೆ. **ಈಶಾವಾಸ್ಯೋಪನಿಷತ್ತಿ**ನಲ್ಲಿ "ಯಾರ ಕ್ರಿಯೆಯು(ಲೀಲೆಯು) ಪರಮಸತ್ಯವಾಗಿ, ಆ ಊರ್ಧ್ವದಿಂದ ಅವತರಣಗೊಂಡು ಪ್ರಕಟಗೊಳ್ಳುವದೋ ಮತ್ತು ಮನುಕುಲದ ಧೀಶಕ್ತಿಯನ್ನು ಪ್ರಚೋದನೆಗೊಳಿಸಿ ರಹಸ್ಯೋದ್ಘಾಟನೆಯನ್ನು ಮಾಡುವಂತೆ ಪ್ರಾರ್ಥನೆ ಸಲ್ಲಿಸಲಾಗಿದೆ. ಇಲ್ಲಿ, ಇದೂ ಸಹಿತ, ಪವಿತ್ರ ವೇದಸೂತ್ರದ ಗಾಯತ್ರೀಯಲ್ಲಿಯೇ – ಅದೂ ಸಾವಿರಾರು ವರ್ಷಗಳಿಂದ ಪ್ರತಿಯೊಬ್ಬ ಬ್ರಾಹ್ಮಣನೂ(ಜ್ಞಾನಾಪೇಕ್ಷಿಯೂ) ಪ್ರತಿನಿತ್ಯ ಧ್ಯಾನಪೂರ್ವಕವಾಗಿ ಅನುಷ್ಠಾನಗೊಳಿಸುತ್ತಲೇ ಬಂದಿರುವ, – ಈ ಮಂತ್ರದ ಸೂತ್ರವೇ ಆಗಿದೆ. ಇದು ಋಗ್ವೇದದ ಒಂದು ಋಕ್ ಆಗಿದೆ ಎನ್ನುವದೂ ನಮಗೆ ತಿಳಿದಿದೆ. ಇದರ ದೃಷ್ಟಾರ **ಬ್ರಹ್ಮರ್ಷಿ ವಿಶ್ವಾಮಿತ್ರ**. ಇದೇ ಉಪನಿಷತ್ತಿನಲ್ಲಿ ಅಗ್ನಿಯನ್ನು ಪುಟಗೊಳಿಸುತ್ತಿರುವದು ಪರಿಪೂರ್ಣವಾಗಿ **ನೈತಿಕ ಕ್ರಿಯಾ ಕರ್ಮಗಳಿಗಾಗಿ(Moral functions),** ಅದೂ ಪಾಪಗಳಿಂದ ಮುಕ್ತರಾಗಿ ಪರಿಶುದ್ಧಗೊಳಿಸುವ ಸಲುವಾಗಿ ರೂಪಿತವಿದೆ: ಈ ಆತ್ಮವು ಸದಾ ಸುಪಥದಲ್ಲಿಯೇ ಸಾಗಿ ಆ ದಿವ್ಯತೋಷವನ್ನು ಪಡೆದುಕೊಳ್ಳಲು ಮಾರ್ಗದರ್ಶಿಯಾಗಿರುವಂತೆ ಪ್ರಾರ್ಥಿಸಲಾಗಿದೆ. ಇದೇ ಸಮಯದಲ್ಲಿ **ಇಚ್ಛಾಶಕ್ತಿ(Power of will)**ಯ ಸ್ವರೂಪದಲ್ಲಿಯೂ ಇರುವಂತೆ ಮತ್ತು ಮಾನವನ ಕ್ರಿಯೆಗಳಿಗೆ ಸಂಪೂರ್ಣ ಹೊಣೆಗಾರಿಕೆಯನ್ನು ಹೊಂದಿರುವಂತೆ ಇರಲು ಪ್ರಾರ್ಥನೆ ಸಲ್ಲಿಸಲಾಗಿದೆ. ಇನ್ನುಳಿದ ಉಪನಿಷತ್ತುಗಳಲ್ಲಿ ಈ ದೇವತೆಗಳನ್ನು ಮಾನವನ **ಸಂವೇದನಾತ್ಮಕ–ಕ್ರಿಯಾಪ್ರವೃತ್ತಿಗಳ (ಭೌತಿಕ ಸ್ವರೂಪದ ಕಾರ್ಯಗಳ) (Sense-functions)** ದೇವತೆಗಳೆಂದೇ ಇಲ್ಲವೇ ಅದೇ ಸ್ವರೂಪದ ಪ್ರತೀಕಗಳೆಂದೇ ಸುಸ್ಪಷ್ಟಗೊಳಿಸಲಾಗಿದೆ. ವೇದದ ಆಚರಣೆಗಳಲ್ಲಿ ಎಲ್ಲ ಕಡೆಗೂ ಆಚರಣಾ ವಿಧಾನದ ಸ್ವರೂಪದಲ್ಲಿಯೇ ಬಳಕೆಯಲ್ಲಿದ್ದ **ಒಂದು ಸಸ್ಯವು ಉತ್ಪಾದಿಸುತ್ತಿದ್ದ ರಹಸ್ಯಾತ್ಮಕ ರಸ(ಸೋಮರಸ)ವು** ಸಹಿತ ದೇವತೆಯಾದದ್ದು ಅಲ್ಲದೇ, ಮುಂದೆ ಅದನ್ನು ಮಾನವನ **ಜೀವ(ನ)ದಲ್ಲಿ 'ಮನಸ್ಸು'** ಆಗಿ ಸ್ವಯಂರೂಪ ತಾಳಿರುವದನ್ನು

ಕಾಣುತ್ತೇವೆ. ಈ ರೀತಿಯ ವಿಕಾಸದ ಪ್ರಕ್ರಿಯೆಯು ಸುದೀರ್ಘ ಅವಧಿಯಲ್ಲಿ ಘಟಿಸಿರಬಹುದು. ಅಂದರೆ ಭೌತಿಕ ಸ್ವರೂಪದ ಆರಾಧನಾ ಹಂತದ ತದನಂತರದ ಅವಧಿಯಲ್ಲಿ ಘಟಿಸಿರಬಹುದು. ಅಥವಾ ಪ್ರಾಚೀನ ಕಾಲದ ಆರಾಧನಾ ಹಂತದ ತದನಂತರದಲ್ಲಿ ರೂಪಿತಗೊಂಡ **"ಸರ್ವಾತ್ಮಕವಾದ ವಿಶ್ವದೇವತಾವಾದದ" (Panthestic Animisim)** ಸ್ವರೂಪದ ಹಂತದಲ್ಲಿ ರೂಪಿತಗೊಂಡಿರಬಹುದು. ಇದು ವೇದಗಳಿಗೆ ಆರೋಪಿಸಲ್ಪಟ್ಟಿರುವ ಸರ್ವದೇವತಾವಾದದ ಉಚ್ಚ ಹಂತದ ಸ್ವರೂಪದ ಹಂತದಲ್ಲೂ ರೂಪಣೆಗೊಂಡಿರಬಹುದು. ಅದೂ ಅಲ್ಲದೇ ಪುರಾಣಶಾಸ್ತ್ರವು ರಚನೆ–ರೂಪಣೆಗಳಲ್ಲಿ ಪ್ರಗತಿ ಕಂಡ, ಎಲ್ಲ ಕಡೆಗೂ ಈ ದೇವತೆಗಳೇ ಪರಿಪೂರ್ಣವಾಗಿಯೇ ಮನೋವೈಜ್ಞಾನಿಕವಾಗಿ ಸ್ವಾಭಾವಿಕವಾಗಿಯೇ ಪ್ರಗತಿಗೊಳಿಸಲ್ಪಟ್ಟಿವೆ. ಹೀಗಾಗಿ ಇದೊಂದು **"ರಹಸ್ಯಗಳ ಯುಗ"**ವೇ ಆಗಿದೆ.

ಇವೆಲ್ಲ ವಿಷಯಗಳು ನಮ್ಮ ಎದುರಿಗೇ ಇದ್ದರೂ, ಇಲ್ಲಿ ಒಂದು **ಕಂದಕವು** ಮಾತ್ರ ಹಾಗೇ ಉಳಿದಿದೆ. ಇಲ್ಲವೇ ವೇದಕಾಲೀನ ಋಷಿಗಳು ನೈಸರ್ಗಿಕ–ಅಂಶಗಳನ್ನು ಹೊಂದಿ ಆಚರಿಸುತ್ತಿದ್ದ ಧರ್ಮಾಚರಣೆಯ ಕುರಿತು, ನಮಗೆ ನಾವೇ ರೂಪಿಸಿಕೊಂಡ ಪೂರ್ವಗ್ರಹದಿಂದ ಕೂಡಿದ ಅಂಶಗಳಿಂದಲೂ ಈ ಕಂದಕವು ನಿರ್ಮಿತಗೊಂಡಿರಬಹುದು.

ನಾನು ಇಲ್ಲಿ ಸಲಹೆ ರೂಪಿಸುತ್ತಿರುವ ಹಿನ್ನಲೆಯಲ್ಲಿ, ಈ ಕಂದಕವು (ಆಖಾತವು) ನಮ್ಮದೇ ಸ್ವಯಂಸೃಷ್ಟಿಯಾಗಿದೆ. ಅಲ್ಲದೇ ಅದು ನಿಜವಾಗಿಯೂ ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ!. ಅದರಲ್ಲೂ ಪ್ರಾಚೀನ ಕಾಲದ ಯಾವುದೇ ಪವಿತ್ರ ಗ್ರಂಥಗಳಲ್ಲಿಯೂ ಈ ರೀತಿಯ ಕಂದಕ ನಿರ್ಮಾಣದ ಕುರಿತ ವಿವರಣೆಗಳು ಇಲ್ಲವೇ ಇಲ್ಲ. ಹೀಗಾಗಿ ನಾನಿ ಇಲ್ಲಿ ಪ್ರಸ್ತುತ ಪಡಿಸುತ್ತಿರುವ **ಊಹೆ (Hypothesis)**ಎಂದರೆ, ಋಗ್ವೇದವೇ ಏಕಮೇವ ಪರಿಗಣನಾತ್ಮಕವಾಗಿರುವ ಅಧಿಕೃತ ದಾಖಲಾತಿಯಾಗಿದೆ; ಇದೇ ಈಗಲೂ ಸಹಿತ ನಮ್ಮಲ್ಲಿ ನಮ್ಮೆಲ್ಲರ ಸಲುವಾಗಿಯೇ ಇದ್ದು, ಮಾನವನ ಚಿಂತನಾಭಿವ್ಯಕ್ತಿಯ ಪ್ರಾರಂಭದ ಕಾಲದಿಂದಲೂ ರೂಪುಗೊಂಡೇ ಮುಂದುವರೆದುಕೊಂಡು ಬಂದಿದೆ. ಆದರೆ ಇದೇ ಅವಧಿಯಲ್ಲಿ ಐತಿಹಾಸಿಕವಾಗಿಯೇ ರೂಪಿತಗೊಂಡಿದ್ದ "ಎಲ್ಯುಷಿನಿಯನ್ ಮತ್ತು ಆರ್ಫಿಕ್ ರಹಸ್ಯವಾದ(ಮತಗಳು)" ಬಹುತೇಕವಾಗಿ ಅಸಫಲ ಅವಶೇಷಗಳಾಗಿವೆ.

**(ಸಶೇಷ)**

**ಟಿಪ್ಪಣಿ:**

**ವಿಚ್ಛೇದ(Hiatus):** ವೇದಾಂತದ ಅವಧಿಯಲ್ಲಿ ಪೂರ್ವದ ಹಾಗೂ ಪಶ್ಚಿಮದ ಜಿಜ್ಞಾಸುಗಳಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಇರಲಿಲ್ಲ. ಪಾಶ್ಚಿಮಾತ್ಯ ಚಿಂತಕರು ಮತ್ತು ಪೂರ್ವದೇಶದ ಚಿಂತಕರ ಮಧ್ಯೆ ನಡೆಯುತ್ತಿದ್ದ ಅನುಸಂಧಾನಗಳಲ್ಲಿ ವಿಶ್ವ ರಹಸ್ಯವನ್ನು ಕುರಿತ ಅನ್ವೇಷಣಾ ವಿಧಾನಗಳಲ್ಲಿ ಇರುವ ಸಮಾನ ಮನೋಧರ್ಮದಲ್ಲಿ ಇದನ್ನು ಕಾಣಬಹುದಾಗಿದೆ. ಆದರೆ ಮಧ್ಯಕಾಲೀನ ಅವಧಿಯ ನಂತರದಲ್ಲಿ, ಅದರಲ್ಲೂ ಧರ್ಮಾಧಿಕಾರವೇ ರಾಜತ್ವವನ್ನು ನಿಯಂತ್ರಿಸುವಷ್ಟರ ಮಟ್ಟಿಗೆ ಲೌಕಿಕವಾದಾಗ, ಅದಕ್ಕೆ ಸಹಜವಾಗಿಯೇ ದೊರೆಯುತ್ತಿದ್ದ ಜನಸಮ್ಮತಿಯನ್ನು ಗಮನಿಸಿ, ಈ ಧರ್ಮದ ಪ್ರಾಬಲ್ಯದಲ್ಲಿಯೇ ಪ್ರಭುತ್ವವನ್ನೂ ಇಟ್ಟುಕೊಳ್ಳಲು, ಮತ್ತೊಂದು ಸಂಸ್ಕೃತಿಯ ಚಿಂತನಗಳನ್ನು ಸರ್ವ ರೀತಿಯಿಂದಲೂ ಕುಂಠಿತಗೊಳಿಸುವ ಹುನ್ನಾರು ರೂಪಣೆಗೊಂಡಿತು, ಈ ಹಿನ್ನೆಲೆಯಲ್ಲಿ – ಪ್ರಭುತ್ವದಲ್ಲಿ ಇದ್ದ ಚಿಂತನಗಳೇ ಶ್ರೇಷ್ಠವೆನಿಸುವ ಹಾಗೆ, ಜೊತೆಗೆ ಸಹಯೋಗಿಯಾಗಿದ್ದ ಸಂಸ್ಕೃತಿಯನ್ನು ಪ್ರತಿಸ್ಪರ್ಧಿಯನ್ನಾಗಿಸಿ ಮರೆಮಾಡಲು ಯತ್ನಗಳು ನಡೆದವು. ಈ ಹಿನ್ನೆಲೆಯಲ್ಲಿ ಮತ್ತೊಂದು ಸಾಂಸ್ಕೃತಿಕ ವಿಶ್ವಾಸಗಳನ್ನು ಕತ್ತರಿಸುವ ಹಾಗೆ ಅಭಿವ್ಯಕ್ತಿಗಳ ನಿರ್ಮಾಣವಾಯಿತು.

**ಅಗ್ನಿ:** ಮಾನವನ ಚಿಂತನಕ್ಕೆ ಪ್ರಪ್ರಥಮವಾಗಿ ಲಭ್ಯವಾಗಿ, ಅಭಿವ್ಯಕ್ತಗೊಂಡು ಮಂತ್ರ ಸ್ವರೂಪವಾಗಿ ಇರುವ ಪ್ರಪ್ರಥಮ ಶಬ್ದ ಈ ಅಗ್ನಿ. ಅಗ್ನಿಯ ವೈಶ್ವಿಕ ತತ್ತ್ವವನ್ನು ಮತ್ತು ಅದು ಸೃಷ್ಟಿಗೆ ಮೂಲಕಾರಣವೆನ್ನುವದನ್ನು ಅನುಭಾವಿಸಿದ ಮಾನವನ ಧೀಶಕ್ತಿಯು, ಅದಕ್ಕೊಂದು 'ಧ್ವನಿ'ಯನ್ನೂ ನೀಡಿ, ಅದಕ್ಕೊಂದು 'ರೂಪ'ವನ್ನೂ ಆವಾಹಿಸಿಕೊಂಡು ಆರಾಧನೆಗೆ ತೊಡಗಲಾಯಿತು. ಅಗ್ನಿಯ ಕುರಿತ ಕುತೂಹಲ – ಜಿಜ್ಞಾಸೆಯು ಆಧುನಿಕ ಕಾಲದಲ್ಲೂ ಮುಂದುವರೆದಿದೆ. 1970–80ರ ದಶಕದಲ್ಲಿ ಪ್ರಪ್ರಥಮ ಬಾರಿಗೆ 'ಅಗ್ನಿ ಸಹಸ್ರ' ನಾಮವು ರೂಪಣೆಗೊಂಡಿದೆ (ಗೋಕರ್ಣದ ಘನಪಾಠಿ ಶ್ರೀ ಸಾಂಬ ದೀಕ್ಷಿತರಿಂದ ರಚಿತಗೊಂಡಿದೆ).

**ಸೂರ್ಯ(ಆದಿತ್ಯ):** ಬ್ರಹ್ಮಾಂಡ ಸೃಷ್ಟಿಗೆ ಕಾರಣವಾಗಿರುವ ಅಗ್ನಿಯು, ಸೂರ್ಯನ ಸ್ವರೂಪದಲ್ಲಿ, ಭೂಬದುಕಿಗೆ ಜೀವವನ್ನು ಊಡುತ್ತಿರುವ ಸಂಗತಿಯನ್ನು ಅರಿತುಕೊಂಡ ಋಗ್ವೇದದ ಅವಧಿಯ ಚಿಂತನಗಳಲ್ಲಿ, ಈ ಸೂರ್ಯನು ಆದಿತ್ಯನಾಗಿದ್ದಾನೆ. ಸೂರ್ಯನ ಶಕ್ತಿಯೇ ಮಾನವನ ಧೀಶಕ್ತಿಯನ್ನು ಪ್ರಚೋದನೆಗೊಳಿಸಿ, ವಿಕಾಸಕ್ಕೆ ಕಾರಣವಾಗಿರುವದರ ರಹಸ್ಯವನ್ನು ಅರಿತುಕೊಳ್ಳಲು

ಪ್ರಾರಂಭವಾದ ಆನ್ವೇಷಣೆ ಇನ್ನೂ ಮುಂದುವರೆದುಕೊಂಡೇ ಬಂದಿದೆ. ತೀರ ಇತ್ತೀಚಿಗೆ ಆಧುನಿಕ ವಿಜ್ಞಾನವೂ ಒಪ್ಪುತ್ತಿರುವದೇನೆಂದರೆ. ಸೂರ್ಯನ ಅಂಶ(ಪ್ರೋಟಾನ್) ಇರದ ಯಾವುದೇ ಪ್ರದೇಶವೂ ಭೂಮಿಯ ಮೇಲೆ ಇಲ್ಲವೇ ಇಲ್ಲ. ಹೀಗಾಗಿ ಸೂರ್ಯನನ್ನು ಸರ್ವಾಂತರ್ಯಾಮಿಯಾಗಿಯೇ ಆರಾಧನೆ ಮಾಡಲಾಗುತ್ತಿದೆ.

**ಭಾಷಾವಿಜ್ಞಾನ ತತ್ತ್ವ(Philology):** ಆಕಾಶದಿಂದ ಜನಿಸಿದ ನಾದವು ಮಾನವನ ಬದುಕಿನಲ್ಲಿ ಧ್ವನಿ ಸ್ವರೂಪದಲ್ಲಿ ಸ್ಪಂದಗೊಂಡು, ಅದರಲ್ಲೂ ಅವನ ಬದುಕಿನ ಸ್ವರೂಪದಲ್ಲಿಯೇ ಜೊತೆಗೆ ಭೌಗೋಳಿಕ ಅಂಶಗಳನ್ನು ಅವಲಂಬಿಸಿಯೇ ಅಭಿವ್ಯಕ್ತಗೊಂಡಾಗ ಅದು ಸಹಜವಾಗಿಯೇ “ಶಬ್ದ”ದ ಸ್ವರೂಪದಲ್ಲಿರುತ್ತದೆ. ಈ ಶಬ್ದದ ಮೂಲಕವೇ ಚಿಂತಗಳಿಗೆ ಒಂದು “ಭಾಷಾ ಸ್ವರೂಪ”ವೂ ದಕ್ಕುತ್ತದೆ. ಹೀಗಾಗಿ ವೈಶ್ವಿಕವಾಗಿರುವ ಈ ಭಾಷಾ ಸ್ವರೂಪವನ್ನು ಪೂರ್ವ ಚಿಂತನಾ ಕ್ರಮಾಂಕಗಳು, ಆಕಾಶವನ್ನೂ “ಪಂಚಭೂತ”ಗಳಲ್ಲಿ ಒಂದಾಗಿ ಆರಾಧಿಸಿದೆ. ಆದರೆ ಪಾಶ್ಚಾತ್ಯ ಪರಂಪರೆಯಲ್ಲಿ ಈ ಆಕಾಶ ತತ್ತ್ವದ ಹಿನ್ನೆಲೆಯ ಚಿಂತನಾ ವಿಧಾನಗಳು ಇರಲಿಲ್ಲ. ಹೀಗಾಗಿ ತೀರ ಇತ್ತೀಚಿಗೆ ಇದನ್ನು ಸರಿದೂಗಿಸುವ ಹಿನ್ನೆಲೆಯಲ್ಲಿ “ಮನೋವೈಜ್ಞಾನಿಕ ಸ್ವರೂಪದ” ಚಿಂತನೆಗಳ ಅಭಿವ್ಯಕ್ತಿಗೆ ತನ್ನನ್ನು ತೊಡಗಿಸಿಕೊಂಡಿತು. ಹೀಗಾಗಿ ಭಾಷೆಯನ್ನು ಒಂದು ವಿಜ್ಞಾನವಾಗಿಸಿ ಅದಕ್ಕೊಂದು ತಾತ್ತ್ವಿಕ ಸ್ವರೂಪದ ಸೂತ್ರಗಳನ್ನು ಹೆಣೆದುಕೊಂಡು, ಅಧ್ಯಯನ ಪರಂಪರೆಯನ್ನು ರೂಪಿಸಿಕೊಂಡಿತು. ಆದರೆ ಭಾರತೀಯ ಚಿಂತನೆಗಳಲ್ಲಿ ಮನೋವೈಜ್ಞಾನಿಕ ಎಂದರೆ ಬೇರೆ ವಿಭಾಗವಿರಲೇ ಇಲ್ಲ. ಇಲ್ಲಿ ಮನಸ್ಸನ್ನು ಆತ್ಮದ ಸ್ವರೂಪಕ್ಕೇ ಗ್ರಹಿಸಿಕೊಂಡು, ಮನಸ್ಸಿನ ಮೂಲಕವೇ ಸಾಕ್ಷಾತ್ಕಾರದ ಪಥವನ್ನು ರೂಪಿಸಿ ಸತ್ಯಾನ್ವೇಷಣೆ ಪ್ರಾರಂಭಿಸಿರುವದನ್ನು ಉಪನಿಷತ್ತುಗಳಲ್ಲಿ ಕಾಣಬಹುದಾಗಿದೆ. ಆದರೆ ಆಧುನಿಕ ಶಿಕ್ಷಣದ ವ್ಯವಸ್ಥೆ ಮತ್ತು ಭಾಷೆಯ ವಿಷಯದಲ್ಲಾದ ತೀವ್ರಗತಿಯ ರೂಪಾಂತರಗಳಲ್ಲಿ, ಈ ರೀತಿಯ ಚಿಂತನೆ ಮತ್ತು ಅಧ್ಯಯನ ಪಥದಲ್ಲಿ ಕೊಂಚ ಹಿನ್ನಡೆಯನ್ನು ಭಾರತ ಕಂಡಿದೆ. ವೈಶ್ವಿಕ ಸ್ವರೂಪದಲ್ಲಾಗುತ್ತಿರುವ ಭೌತಿಕ ಬದಲಾವಣೆಗಳೂ ಸಹಿತ ಭಾಷಾಸ್ವರೂಪದ ಮೇಲೆಯೂ ಪ್ರಭಾವ ಬೀರುತ್ತಿವೆ. ಹೀಗಾಗಿ ಮೂಲಸ್ವರೂಪದಲ್ಲಿದ್ದ ಪ್ರತೀಕಗಳ ಅಥವಾ ಸ್ವರೂಪಗಳ ಇಲ್ಲವೇ ಚಿಂತನಾ ಕ್ರಮದ ಶಬ್ದಗಳ ಸಂರಚನೆಗೊಂಡ ಅವಧಿ ಮತ್ತು ಅವುಗಳಿಗೆ ಆಗಿದ್ದ ಅರ್ಥವ್ಯಾಪ್ತಿ ಮತ್ತು ಆಯಾಮಗಳ ಕುರಿತು, ಇಡೀ ಜಗತ್ತಿನಾದ್ಯಂತವೂ ಜಿಜ್ಞಾಸೆ ನಡೆದಿದೆ.

## ಶ್ರೀ ಅರವಿಂದರ

## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**4**

### ಅಧ್ಯಾಯ – 3

### ಮಾನವ ಶಿಷ್ಯ

ಈಗಾಗಲೇ ವಿವರಿಸಿದಂತೆ ಗೀತೆಯನ್ನು ಉಪದೇಶಿಸುವ ಗುರುಸಾಕ್ಷಾತ್ ಅವತಾರ ಪುರುಷನೇ ಆಗಿದ್ದಾನೆ. ಈಶ್ವರನೇ ಮಾನವ ಪ್ರಜ್ಞೆಯಲ್ಲಿಳಿದು ಬಂದು ಬೋಧಿಸುವ ಪ್ರಸಂಗ ಇದು. ಸರ್ವಭೂತ ಹೃದಯಸ್ಥನಾಗಿರುವ ಪರಮಾತ್ಮನು ನೇರವಾಗಿ ತಾನೇ ಕಾರ್ಯ ಮಾಡದೇ, ಮರೆಯಲ್ಲಿ ನಿಂತು ನಮ್ಮ ಆಲೋಚನೆ, ನಮ್ಮ ಕ್ರಿಯೆ, ಹೃದಯದ ಅಭೀಪ್ಸೆ ಎಲ್ಲವಕ್ಕೂ ಒಂದು ವ್ಯವಸ್ಥಿತ ರೂಪವನ್ನು ನೀಡುತ್ತಾನೆ. ಮಾರ್ಗದರ್ಶನ ಮಾಡುತ್ತಾನೆ. ಸಮಸ್ತ ಬ್ರಹ್ಮಾಂಡವನ್ನು ಅವನೇ ನಿರ್ಮಿಸಿದ್ದಾನೆ. ಅವನೇ ಸೃಷ್ಟಿಕರ್ತ; ಜೇಡವು ತನ್ನ ಶರೀರದ ಅಂಗದ ಮೂಲಕವೇ ತನ್ನ ಬಲೆಯನ್ನು ಹೆಣೆಯುವಂತೆ, ಪರಮಾತ್ಮನೂ ಸಹ ತನ್ನದೇ ಆದ ಆತ್ಮ–ದ್ರವ್ಯದಿಂದಲೇ ಇಡೀ ಸೃಷ್ಟಿಯನ್ನು ರಚಿಸಿದ್ದಾನೆ. ಅದರ ಕರ್ತಾ–ಧರ್ತಾ ಎಲ್ಲವೂ ಅವನೇ. ಅವನು ಸೃಷ್ಟಿಯ ಒಳಗೂ ಇದ್ದಾನೆ, ಹೊರಗೂ ಇದ್ದಾನೆ. “"ಭಾಹ್ಯಾಭ್ಯಂತರತೋ” ವ್ಯಾಪಿಸಿಕೊಂಡಿದ್ದಾನೆ – “ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠತ್ ದಶಾಂಗುಲಮ್.”

ನಮ್ಮ ಹೃದಯದ ಅಭೀಪ್ಸೆ, ಹಂಬಲ, ಅದಕ್ಕಾಗಿ ನಾವು ಮಾಡುವ ಜನ್ಮಜನ್ಮಾಂತರದ ಪ್ರಯತ್ನ ಎಲ್ಲವೂ ಸಾರ್ಥಕವಾಗುವುದು. ನಮ್ಮ ಸತ್ತೆ ಪರಮಾತ್ಮನ ಸತ್ತೆಯ ನಡುವೆ ಇರುವ 'ಅಜ್ಞಾನದ' ಪರದೆಯನ್ನು ಹರಿದೊಗೆದು ತನ್ನ ವ್ಯಕ್ತಿಗತ ಅಸ್ತಿತ್ವವನ್ನು ಪರಮಾತ್ಮನ ಅಸ್ತಿತ್ವವನ್ನು ಪರಮಾತ್ಮನ ಆಸ್ತಿತ್ವದ ಜೊತೆಗೆ ಬೆರೆಸಿದಾಗ ಮಾತ್ರ ಸಾಧ್ಯವಿದೆ. ನಮ್ಮ ಆಸ್ತಿತ್ವವನ್ನು ಪರಮಾತ್ಮನ ಅಸ್ತಿತ್ವದ ಜೊತೆ ಬೆರೆಸುವುದು ಅಂದರೇನು? ಶ್ರೀ ಅರವಿಂದರು ಈ ವಿಷಯವನ್ನು ಸ್ವಲ್ಪ ವಿಶದೀಕರಿಸಿ ಹೀಗೆ ಹೇಳುತ್ತಾರೆ ಚಲ್ಲಾ–ಚದುರಾಗಿ ಹೋಗಿರುವ, ಹೋಗುವ, ಏಕಾಗ್ರತೆಯನ್ನು ಕಳೆದುಕೊಂಡು ಎಲ್ಲಿ ಬೇಕೆಂದರಲ್ಲಿ ಹರಿದಾಡುವ ನಮ್ಮ ಮಾನಸಿಕ ಚಿಂತೆಗಳನ್ನು ಕ್ರಿಯೆಗಳನ್ನು, ಪರಮಾತ್ಮನ ಸಂಪೂರ್ಣ ಪ್ರಕಾಶದಲ್ಲಿ

(ಜ್ಞಾನದಲ್ಲಿ) ಬೆರೆಸಬೇಕು; ನಮ್ಮ ಭೇದ ಬುದ್ಧಿಯನ್ನು ಅರೆ ಸಂಕಲ್ಪವನ್ನು, ಅರ್ಧಮರ್ಧ ಶಕ್ತಿಯನ್ನು ಪರಮಾತ್ಮನ ವಿಶಾಲ, ಸದಾ ಪ್ರಕಾಶ ಪೂರ್ಣವಾದ ಏಕೈಕ ಸಂಕಲ್ಪದ ಜೊತೆ ಬೆರೆಸಬೇಕು ನಮ್ಮ ಬಹಿರ್ಮುಖ ನಡೆಗಳನ್ನು ಪ್ರವೃತ್ತಿಗಳನ್ನು, ಭಾವನೆಗಳನ್ನು ಪರಮಾತ್ಮನ ಸ್ವಯಮಾನದಂದಲ್ಲಿ ಬೆರೆಸಬೇಕು.

ಇದು ಜಗದ್ಗುರು ವಿಶ್ವಗುರು ಶ್ರೀಕೃಷ್ಣ ಹೇಳುವ ಮಾತು, ಈ ಉಪದೇಶಕ್ಕೆ, ಮಾತಿಗೆ ಕಿವಿ ಕೊಡಬೇಕಾಗಿದೆ, ಎಚ್ಚರವಾಗಬೇಕಾಗಿದೆ. ಅವತಾರ ಪುರುಷನ ಶಾಶ್ವತವಾಣಿಯನ್ನು ಆದರಿಸಬೇಕಾಗಿದೆ.

ಅವನ ಶಿಷ್ಯನಾದ ಅರ್ಜುನನ ಸ್ಥಿತಿ ಹೇಗಿದೆ ನೋಡಿ; ಅವನಿಗೆ ದೀಕ್ಷೆ ಸಿಗುವುದು ಯುದ್ಧ ಕ್ಷೇತ್ರದಲ್ಲಿ, ರಣರಂಗದ ಮಧ್ಯದಲ್ಲಿ. ಅವನು ಒದ್ದಾಡುವ, ತೊಳಲಾಡುವ ಮಾನವನ ಸಂಕೇತ. ಅವನಿಗೆ ಇನ್ನು ಜ್ಞಾನ ಲಾಭವಾಗಿಲ್ಲ. ಆದರೆ ಅದಕ್ಕೆ ಯೋಗ್ಯನಾಗಿದ್ದಾನೆ. ಆ ಯೋಗ್ಯತೆ ಪಡೆದುಕೊಂಡಿದ್ದಾನೆ. ಮಾನವರ ಮಧ್ಯದಲ್ಲಿ ಅವತರಿಸಿ ಬಂದ ಈಶ್ವರನ ಜೊತೆ ಆತ್ಮೀಯನಾಗಿ ಒಡನಾಡುತ್ತಾ, ಅವನ ಸಖನಾಗಿ, ಅವನ ಬಂಧುವಾಗಿ, ಆತ್ಮೀಯವಾಗಿ ಆ ಯೋಗ್ಯತೆ ಸಂಪಾದಿಸಿದ್ದಾನೆ. ಕೆಲವರು ಗೀತೆಯನ್ನು ಈ ರೀತಿ ಅರ್ಥಮಾಡಿ ಹೇಳುತ್ತಾರೆ. ಗೀತೆಯಾದರೂ ಅಷ್ಟೇ, ಮಹಾಭಾರತವಾದರೂ ಅಷ್ಟೇ, ಅದೆಲ್ಲ ಕೇವಲ ಉಪಮೆ ಮಾತ್ರ, ಅದು ಕೇವಲ ಅಂತರಂಗದ ಬದುಕಿಗೆ ಸಂಬಂಧಪಟ್ಟದ್ದು, ಬಾಹ್ಯ ಜೀವನದ ಕ್ರಿಯೆಗಳಿಗೂ ಅದಕ್ಕೂ ಸಂಬಂಧವಿಲ್ಲ. ನಮ್ಮೊಳಗೆ ಕೆಲ (ದುಷ್ಟ) ಶಕ್ತಿಗಳಿವೆ, ಅವು ನಮ್ಮ ಆತ್ಮವನ್ನು ಕೈವಶ ಮಾಡಿಕೊಳ್ಳಬೇಕೆನ್ನುತ್ತವೆ; ಇದು ಗೀತೆಯ ಅರ್ಥ ಎಂದು ಕೆಲವರು ಹೇಳುವುದುಂಟು. ಸಾಮಾನ್ಯವಾದ ದೃಷ್ಟಿಕೋನದಿಂದ ಹಾಗೆ ಹೇಳಬಹುದೇನೋ, ಆದರೆ ಮಹಾಭಾರತವನ್ನು ಸಂಪೂರ್ಣವಾಗಿ ನೋಡಿದರೆ ಈ ಅರ್ಥ ಸಮರ್ಥನೀಯವೆನಿಸುವುದಿಲ್ಲ. ಹಾಗೊಂದು ವೇಳೆ ಅದೇ ದೃಷ್ಟಿಕೋನವನ್ನು ಒತ್ತಾಯವಾಗಿ ಹೇರಿದರೆ, ಗೀತೆಯ ನೇರವಾದ ತಾತ್ವಿಕ ಚಿಂತನೆಯು ಬೇಸರದ, ನಿಷ್ಫಲ ಅಥವಾ ನಿಷ್ಪ್ರಯೋಜಕ, ವಿನಾಕಾರಣ ರಹಸ್ಯೀಕರಣವಾಗುವುದು. ವೇದಗಳ ಹಾಗೂ ಕೆಲಮಟ್ಟಿಗೆ ಪುರಾಣಗಳ ಕೆಲಭಾಗ ಸಾಂಕೇತಿಕವಾಗಿದೆ. ಮೇಲ್ಮೈಯಲ್ಲಿ ಕೇವಲ ಕೆಲ ಅಂಕಿಸಂಖ್ಯೆ, ಅಕ್ಷರಗಳು ಮಾತ್ರ ಕಾಣುತ್ತೇವೆ; ನಿಜವಾದ ಕೇಂದ್ರ ಭಾಗವು ಮರೆಯಲ್ಲಿರುತ್ತದೆ ಎಂಬುದೇನೋ ನಿಜ. ಆದರೆ ಗೀತೆ ಹಾಗಲ್ಲ; ಅದನ್ನು ಅತಿ ಸ್ಫುಟವಾದ ಶಬ್ದಗಳಲ್ಲಿ, ವಾಕ್ಯಗಳಲ್ಲಿ ರಚಿತವಾಗಿದೆ. ಮಾನವನ ಜೀವನದಲ್ಲಿ ಅತಿ ಸಾಮಾನ್ಯವಾಗಿ ಎದುರಾಗುವ ಸಮಸ್ಯೆಗಳು – ನೈತಿಕ ಹಾಗೂ ಆಧ್ಯಾತ್ಮಿಕ ಎರಡು

ಬಗೆಯ ಸಮಸ್ಯೆಗಳು. ಇವೆಲ್ಲವನ್ನು ಅತಿ ಸುಲಭವಾದ ಅಕ್ಲಿಷ್ಟ ಶಬ್ದಗಳಲ್ಲಿ, ವಾಕ್ಯಗಳಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ, ಮತ್ತು ಅವುಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಲಾಗಿದೆ. ಆದರೆ ವಾಸ್ತವಿಕ ಸತ್ಯವೇನೆಂದರೆ, ತತ್ವಚಿಂತನೆಯ ವ್ಯವಸ್ಥೆಯು ಸಾಂಕೇತಿಕ ಅಥವಾ ಗೂಢ ಭಾಷೆಯಲ್ಲಿ ಹೇಳದೇ ಇದ್ದರೂ ಒಂದು ವೈಶಿಷ್ಟತೆಯನ್ನು ಹೊಂದಿದೆ, ಮತ್ತು ಗೀತೆಯಂತಹ ವಿಶೇಷ ಆಧ್ಯಾತ್ಮಿಕ ಚಿಂತನೆಗೆ ನಿಜವಾಗಿ ಅಂಥದೊಂದು ವ್ಯವಸ್ಥೆ ಅವಶ್ಯವಾಗಿದೆ. ಅರ್ಜುನನು ಸಾಮಾನ್ಯ ಮಾನವನ ಪ್ರತಿನಿಧಿ, ಜಗದ್ವಿಖ್ಯಾತ ಮಹಾಯುದ್ಧದಲ್ಲಿ ಮುಖ್ಯ ನೇತಾರ, ದೈವೀ ಮಾರ್ಗದರ್ಶನ ಮತ್ತು ಸಹಾಯವಿರುವ ಮಾನವ. ಗೀತೆಯಲ್ಲಿ ಅರ್ಜುನನನ್ನು ಅತ್ಯಂತ ಘೋರ ವಿಪತ್ತಿನ ಸಮಯದಲ್ಲಿ ಇಕ್ಕಟ್ಟಿಗೆ ಸಿಲುಕಿದ ಮಾನವನ ಆತ್ಮ ಎನ್ನುವಂತೆ ಚಿತ್ರಿಸಲಾಗಿದೆ. ಮಾನವನ ಜೀವನ ಮತ್ತು ಆಧ್ಯಾತ್ಮಿಕ ಜೀವನದಲ್ಲಿ, ಅಷ್ಟೇ ಏಕೆ, ನೈತಿಕ ಆದರ್ಶಮಯ ಪರಿಪೂರ್ಣ ಜೀವನದಲ್ಲಿ ಬಹಳ ಭೇದವಿದೆ. ಗೀತೆಯಲ್ಲಿ ಈ ವ್ಯವಸ್ಥೆಯನ್ನು ತುಂಬ ಅರ್ಥಪೂರ್ಣವಾಗಿ ವಿವರಿಸಿರುವುದನ್ನು ಕಾಣಬಹುದು.

ಅರ್ಜುನನು ರಥದಲ್ಲಿ ಕುಳಿತು ಯುದ್ಧಮಾಡುವ ಮಹಾರಥಿಯಾಗಿದ್ದರೆ, ದೈವೀ ಗುರುವಾದ ಶ್ರೀಕೃಷ್ಣನು ಅವನ ಸಾರಥಿಯಾಗಿದ್ದಾನೆ. ವೇದದಲ್ಲಿ ಕೂಡ ನಾವು ಈ ಪರಿಕಲ್ಪನೆಯನ್ನು ಕಾಣುತ್ತೇವೆ; ಜೀವಾತ್ಮನು ಪರಮಾತ್ಮನ ಜೊತೆ ಒಂದೇ ರಥ ಏರಿ, ಅತಿ ನಿರೀಕ್ಷಿತ ಯುದ್ಧಕ್ಕೆ ಹೊರಟಂತೆ ವೇದದಲ್ಲಿ ಹೇಳಲಾಗಿದೆ. ಆದರೆ ಅಲ್ಲಿ ಮಾತ್ರ ಅದು ಕೇವಲ ಸಾಂಕೇತಿಕವಾಗಿದೆ. ಇಲ್ಲಿ ಭಗವಂತ ಅಂದರೆ ಇಂದ್ರ. ಅವನು ಪ್ರಕಾಶ ಮತ್ತು ಅಮರತ್ವ ಅಧಿಪತಿ, ದೈವೀ ಜ್ಞಾನದ ಶಕ್ತಿ, ಜೀವಾತ್ಮನು ಅಸತ್ಯ, ಕತ್ತಲು, ಸೀಮಿತತೆ, ಮರಣಗಳ ಜೊತೆ ಹೋರಾಡುತ್ತಾ ಅಮರತ್ವದೆಡೆ ಸಾಗುತ್ತಿರುವಾಗ ಸಹಾಯ ಮಾಡುವ ಶಕ್ತಿ. ಇಲ್ಲಿ ಯುದ್ಧ ಅಥವಾ ಹೋರಾಟ ಇರುವುದು ಆಧ್ಯಾತ್ಮಿಕ ಶತ್ರುಗಳ ಜೊತೆಗೆ. ಯುದ್ಧದ ಅಂತಿಮ ಪರಿಣಾಮ, ಜೀವಾತ್ಮನು ಜನ್ಮಜನ್ಮಾಂತರಗಳಲ್ಲಿ ಯೋಗ್ಯತೆಯನ್ನು ಸಾಧಿಸಿಕೊಂಡು, ಆತ್ಯಂತಿಕ ಸತ್ಯ, ಸತ್ಯ ಪ್ರಜ್ಞೆಯನ್ನು ಹೊಂದುವನು. ಇಂದ್ರನು ಈ ಸಾಧನೆಯಲ್ಲಿ ಸಹಾಯ ಮಾಡುವ ದೈವೀ ಶಕ್ತಿ. ಅಲ್ಲಿ ಮಾನವನ ಆತ್ಮನಾಗಿ ಕುತ್ಸನಿದ್ದಾನೆ, ಅವನು ತನ್ನ ಹೆಸರಿಗೆ ತಕ್ಕಂತೆ ಸದಾ ಸತ್ಯ ಜ್ಞಾನದ ಸಾಧನೆಯಲ್ಲಿ ತೊಡಗಿದ್ದಾನೆ. ಅವನು ಅರ್ಜುನ ಅಥವಾ ಅರ್ಜುನಿಯ ಮಗನು. ಅರ್ಜುನ ಅಂದರೆ ಶ್ವೇತ, ಶ್ವೇತ ಮಾತೆಯ ಸಂತಾನ. ಅವನು ಸಾತ್ವಿಕ ಅಥವಾ ಶುದ್ಧೀಕರಣಗೊಂಡು ಬೆಳಕಿನಿಂದ ತುಂಬಿದ ಆತ್ಮ ಸ್ವರೂಪನಾಗಿ, ಅನಂತ ದೈವೀ

ಜ್ಞಾನಕ್ಕೆ, ವೈಭವಕ್ಕೆ ಯೋಗ್ಯನಾದ ಜೀವಾತ್ಮನಾಗಿದ್ದಾನೆ. ಯುದ್ಧದ ಕೊನೆಗೆ, ಅಂದರೆ ರಥಯಾತ್ರೆಯ ಅಂತಿಮ ಘಟ್ಟದಲ್ಲಿ ಇಂದ್ರನು ಸ್ವಧಾಮಕ್ಕೆ ತೆರಳುವಾಗ ರಥಾರೂಢನಾಗಿದ್ದ ಕುತ್ಸನೂ ಸಹ ಇಂದ್ರನಂತೆ, ಇಂದ್ರನ ಪ್ರತಿರೂಪವಾಗಿ ಮಾರ್ಪಟ್ಟಿರುತ್ತಾನೆ. ಇಂದ್ರ ಪತ್ನಿಯಾದ ಶಚಿಯು ಮಾತ್ರ ಇಂದ್ರ ಮತ್ತು ಕುತ್ಸರಲ್ಲಿ ಭೇದವನ್ನು ಗುರುತಿಸುತ್ತಾಳೆ. ಶಚಿಯು 'ಸತ್ಯ ಪ್ರಜ್ಞೆಯ' ಪ್ರತಿನಿಧಿ ದೇವತೆ. ಅಂತೆಯೇ ಆಕೆ ಇಂದ್ರ–ಕುತ್ಸರನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಈ ಉಪಾಖ್ಯಾನವು ಖಂಡಿತವಾಗಿಯೂ ಸಾಂಕೇತಿಕವಾಗಿದೆ, ಆಂತರಿಕ ಪಯಣದ ದ್ಯೋತಕವಾಗಿದೆ. ಜೀವಾತ್ಮನು ಕೊನೆ ಹಂತದಲ್ಲಿ ಪರಮಾತ್ಮನ ಪ್ರತಿರೂಪವೇ ಆಗಿ ನಿಲ್ಲುತ್ತಾನೆ. ಅವನು ದಿವ್ಯ ಜ್ಞಾನದ ಬೆಳಕಿನಿಂದ ತುಂಬಿ ಹೋಗಿಬಿಡುತ್ತಾನೆ. ಆದರೆ ಗೀತೆ ಇದರಿಂದ ತುಸು ಭಿನ್ನವಾಗಿದೆ. ಅದು ಕರ್ಮದಿಂದ ಆರಂಭವಾಗುತ್ತದೆ, ಅರ್ಜುನನು ಕರ್ಮಯೋಗಿಯಾಗಿದ್ದಾನೆ. ಅವನು ಪ್ರಯತ್ನವಾದಿ, ಕರ್ಮಯೋಗಿ; ಅವನು ಜ್ಞಾನಯೋಗಿಯಲ್ಲ. ಅವನು ಯೋಧ, ಹೋರಾಟಗಾರನೇ ಹೊರತು ದೃಷ್ಟಾರನಾಗಲಿ ಮನೀಷಿಯಾಗಲಿ ಅಲ್ಲ.

ಶಿಷ್ಯನ ಈ ವಿಶಿಷ್ಟ ಸ್ವಭಾವವನ್ನು ಗೀತೆಯ ಆರಂಭದಿಂದಲೂ ಪರಿಚಯ ಮಾಡಿಕೊಡುತ್ತಾ ಬರಲಾಗಿದೆ. ಮೊದಲ ಬಾರಿಗೆ ತಾನು ಏನು ಮಾಡುತ್ತಲಿದ್ದೇನೆ, ಅತಿ ದೊಡ್ಡ ಸಂಹಾರ ಕಾರ್ಯದಲ್ಲಿ ತಾನೂ ಸಹ ಭಾಗಿಯಾಗುತ್ತಿದ್ದೇನೆ ಎಂಬ ಭಾವ ಜಾಗೃತವಾಗುತ್ತದೆ; ಈ ಭಾವ ಮನದಲ್ಲಿ ಮೂಡುತ್ತಲೇ ಅವನು ಹಿಂಜರಿಯುತ್ತಾನೆ. ಮಹಾನ್ ಸಂಹಾರ ಕಾರ್ಯದಲ್ಲಿ, ವಿನಾಶಕಾರಕ ಯುದ್ಧದಲ್ಲಿ ತೊಡಗಲು ಹಿಂಜರಿಯುತ್ತಾನೆ. ಈ ಭಾವ ಅಥವಾ ದೃಷ್ಟಿಕೋನವೇನೂ ಆಳವಾದ ಚಿಂತನೆಯಿಂದ ಬಂದುದಲ್ಲ, ಆಧ್ಯಾತ್ಮಿಕ ದೃಷ್ಟಿಕೋನದ ಫಲವೂ ಅಲ್ಲ. ಅವನಲ್ಲೇನೂ ಆಧ್ಯಾತ್ಮಿಕ ಪ್ರವೃತ್ತಿ ಜಾಗೃತವಾಗಿದೆ ಎಂದು ಹೇಳಲು ಬರುವುದಿಲ್ಲ. ಅವು ಸಾಮಾನ್ಯ ಮಾನವನ ವ್ಯಾವಹಾರಿಕ ಭಾವನಾತ್ಮಕ, ಸಂವೇದನಾತ್ಮಕ, ನೈತಿಕ ದ್ವಿಧಾ ಪ್ರವೃತ್ತಿ ಜನ್ಯ ಆಲೋಚನೆಗಳಾಗಿವೆ. ಎಷ್ಟೋ ಕಠಿಣ ಪ್ರಸಂಗಗಳನ್ನೆದುರಿಸಿ, ಅನೇಕ ಸಮಸ್ಯೆಗಳ ಜೊತೆ ಹೋರಾಡಿ ಕೊನೆಗೆ ಯಾವುದೂ ಫಲಕಾರಕವಾಗದೇ, ಎಲ್ಲವೂ ಕೈಕೊಟ್ಟಾಗ ಮೂಡುವ ನಿರಾಶಾಭಾವದ ಫಲವೂ ಅಲ್ಲ; ಅವನು ಇನ್ನೂ ಯಾವುದೇ ಪ್ರಯತ್ನವನ್ನು ಆರಂಭ ಕೂಡ ಮಾಡಿಲ್ಲ; ಇಂತಹ ಅಸ್ವಾಭಾವಿಕ (ಅಥವಾ ತಾಮಸಿಕ) ಪರಿಸ್ಥಿತಿಯಲ್ಲಿ ಮೇಲು ಮೇಲಿನ ಮಾನಸಿಕ ಸ್ತರದಲ್ಲಿ ಉದಿಸಿದ ಭಾವ ಅವನದಾಗಿದೆ.

ಗೀತೆಯ ಭಾಷೆಯಲ್ಲಿಯೇ ಹೇಳುವುದಾದರೆ, ಅರ್ಜುನನು ತ್ರಿಗುಣಗಳಿಗೆ ವಶವರ್ತಿಯಾದವನು; ಸತ್ವ–ರಜ–ತಮವೆಂಬ ತ್ರಿಗುಣಗಳು ಪ್ರಕೃತಿಯ ಶಕ್ತಿಗಳು. ಮನುಷ್ಯನು ನಿರ್ವಿವಾದವಾಗಿ ಅವುಗಳಿಗನುಗುಣವಾಗಿಯೇ ವರ್ತಿಸುತ್ತಾನೆ. ಅದು ಮಾನವನ ಸಹಜ ಧರ್ಮ ಅಥವಾ ಸ್ವಭಾವ. ಅವನು ಎಷ್ಟು ಶುದ್ಧವಾಗಿರುತ್ತಾನೋ, ಸಾತ್ವಿಕನಾಗಿರುತ್ತಾನೋ, ಉನ್ನತ ಹಾಗೂ ಸ್ಪಷ್ಟ (ಅಥವಾ ಅಸಂದಿಗ್ಧ) ಶಕ್ತಿಗಳಿಂದ ಪ್ರವರ್ತಿತನಾಗಿರುತ್ತಾನೋ, ತನ್ನ ಕೆಳಗಿನ ಅಥವಾ ನಿಮ್ನ ಗುಣ ಸ್ವಭಾವಗಳನ್ನು ತನಗೆ ತಿಳಿದಿರುವ ಅತ್ಯುಚ್ಚ ನಿಯಮ–ವ್ಯವಸ್ಥೆಯ ಮೂಲಕ ನಿಯಂತ್ರಿಸುತ್ತಾನೋ, ಅಷ್ಟರಮಟ್ಟಿಗೆ ಅವನು ಒಳ್ಳೆಯವನಾಗಿರುತ್ತಾನೆ, ಮಾನವನೆನಿಸಿಕೊಳ್ಳಲು ಯೋಗ್ಯನಾಗಿರುತ್ತಾನೆ. ಅವನಲ್ಲಿ ಅಸುರೀ ಗುಣ–ಪ್ರಭಾವಗಳ ಒತ್ತಡ ಇರುವುದಿಲ್ಲ; ಭಾವಾವೇಶಗಳಿಗೆ ಒಳಗಾಗಿ ಅನಿಯಂತ್ರಿತವಾಗಿ ನಡೆದುಕೊಳ್ಳುವುದಿಲ್ಲ; ಅವನಿಗೆ ಆತ್ಮ ನಿಯಂತ್ರಣದ ತರಬೇತಿ ಆಗಿದೆ, ತನ್ನ ನಿಗದಿತ ಕರ್ತವ್ಯಗಳನ್ನು ಮಾಡುವ ಸಂಕಲ್ಪ ಇದೆ, ತಾನಿರುವ ದೇಶ–ಕಾಲ–ಸಮಾಜದ ನಿಯಮಗಳಿಗೆ, ತತ್ವಗಳಿಗೆ ಬದ್ಧನಾಗಿ ನಡೆದುಕೊಳ್ಳುತ್ತಾನೆ. ಸಮಾಜದಲ್ಲಿನ ಧರ್ಮ, ಸಂಸ್ಕೃತಿಗಳನ್ನು ಮೀರದೇ ಅವುಗಳಂತೆ ನಡೆದುಕೊಳ್ಳುತ್ತಾನೆ. ಹಾಗಾದರೆ ಅವನಲ್ಲಿ ಅಹಂ ಇರುವುದಿಲ್ಲವೇ? ಇಲ್ಲ, ಇರುತ್ತದೆ, ಆದರೆ ಸಾಮಾನ್ಯ ಜನರಂತೆ ಇರದೇ, ಅವನದು ಶುದ್ಧವಾದ, ಸಾತ್ವಿಕ ಅಹಂಕಾರದಿಂದ ಕೂಡಿರುತ್ತದೆ, ಅವನು ಸಮಾಜದ ನೈತಿಕ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತಾನೆ, ಕೇವಲ ತನ್ನ ಸ್ವಾರ್ಥ, ವೈಯಕ್ತಿಕ ಹಿತ, ಬಯಕೆ, ಭಾವನೆಗಳನ್ನಲ್ಲ. ಬೇರೆಯವರ ಹಿತವನ್ನು ಲಕ್ಷಿಸಿ ಕೆಲಸ ಮಾಡುತ್ತಾನೆ. ಅವನು ಶಾಸ್ತ್ರ ವಿಹಿತ ಧರ್ಮವನ್ನು ಮೀರುವುದಿಲ್ಲ. ಅವನ ವಿಚಾರದಲ್ಲಿ, ನಡೆಯಲ್ಲಿ ಧರ್ಮವಿದೆ. ಸಾಮಾಜಿಕ ನಿಯಮದ ಪ್ರಕಾರ ಅವನು ಕ್ಷತ್ರಿಯನಾಗಿದ್ದಾನೆ. ಅಂತೆಯೇ ಅವನಲ್ಲಿ ಧೈರ್ಯವಿದೆ, ಬುದ್ಧಿ ಇದೆ, ಸಾಹಸ ಪ್ರವೃತ್ತಿ ಇದೆ, ಸ್ವ–ನಿಯಂತ್ರಣ ಸಾಮರ್ಥ್ಯವಿದೆ, ಅವನು ಆರ್ಯ ಜನಾಂಗದ ಪ್ರಮುಖ ನಾಯಕನಾಗಿದ್ದಾನೆ. ಅವನು ಶಾಸ್ತ್ರ ಧರ್ಮವನ್ನು ಮೀರದೆ ಇದುವರೆಗೆ ಪ್ರಾಮಾಣಿಕವಾಗಿ, ಶ್ರದ್ಧೆಯಿಂದ, ಪ್ರಜ್ಞಾಪೂರ್ವಕವಾಗಿಯೇ ನಡೆದು ಬಂದಿದ್ದಾನೆ; ಆದರೆ ಅದೇ ಧರ್ಮ ಅವನನ್ನೀಗ ಮಹಾ ಸಂಹಾರ ಕಾರ್ಯದಲ್ಲಿ ಮುಂದಾಳುವನ್ನಾಗಿ ಮಾಡಿಬಿಟ್ಟಿದೆ, ಸರಿಸುಮಾರು ಎಲ್ಲಾ ಆರ್ಯ ಸಾಮ್ರಾಜ್ಯಗಳು ಮಹಾಯುದ್ಧದಲ್ಲಿ ನಾಶವಾಗಿ ಹೋಗಿಬಿಡುವ ಹರಿತಕ್ಕೆ ಬಂದು ಮುಟ್ಟಿವೆ. ಇಡೀ ಮನುಕುಲ ಸಂಸ್ಕೃತಿಯೇ ವಿನಾಶದ ಅಂಚಿಗೆ ಬಂದು ಮುಟ್ಟಿದೆ, ಏನು ಅನ್ನುವ ಭಯದ ವಾತಾವರಣ ನಿರ್ಮಾಣವಾಗಿದೆ.

ಇದು ಕೂಡ ಮತ್ತೆ ವ್ಯಾವಹಾರಿಕ ಮಾನವನ ದೃಷ್ಟಿಯೋ; ತನ್ನ ಇಂದ್ರಿಯಗಳ ಸಂವೇದನೆಯ ಮೂಲಕ ಅವನಿಗೆ ಕರ್ಮದ ಪ್ರತೀತಿಯಾಗುತ್ತದೆ. ತನ್ನ ಮಿತ್ರನಾದ ಸಾರಥಿ ಕೃಷ್ಣನಿಗೆ ರಥವನ್ನೊಯ್ದು ಎರಡು ಸೈನ್ಯಗಳ ಮಧ್ಯದಲ್ಲಿ ನಿಲ್ಲಿಸಲು ಹೇಳುತ್ತಾನೆ; ಹೀಗೆ ಹೇಳುವಾಗ ಅವನಲ್ಲಿ ಯಾವ ಗಂಭೀರ ವಿಚಾರವು ಇರಲಿಲ್ಲ, ಬದಲಾಗಿ ಹೆಮ್ಮೆಯ ಭಾವನೆ ಇತ್ತು, ಅಧರ್ಮದ ಕಟ್ಟಾಳುಗಳು ಯಾರು? ಯಾರನ್ನು ತಾನು ಯುದ್ಧದ ನೆಪದಲ್ಲಿ ಕೊಂದು ಧರ್ಮ ಸ್ಥಾಪನೆ ಮಾಡಬೇಕಾಗಿದೆ? ಎಂಬುದನ್ನು ಪ್ರತ್ಯಕ್ಷ ನೋಡುವ ಬಯಕೆ ಇತ್ತು. ಆದರೆ ಅಲ್ಲಿ ನೋಡುವಾಗ ಅವನಲ್ಲಿ ಚಿತ್ತ ಬದಲಾವಣೆಯಾಯಿತು. ಈ ಅಂತಃಕಲಹ, ಮಹಾಯುದ್ಧ ಎಲ್ಲರನ್ನೂ ಎಲ್ಲಿಗೆ ಒಯ್ದು ಮುಟ್ಟಿಸುತ್ತದೆ ಎಂಬುದರ ಕಲ್ಪನೆ ಆಗ ಅವನಿಗೆ ಬಂದಿತು. ಕೇವಲ ಕುಲ ಬಾಂಧವರಲ್ಲ, ಒಂದೇ ರಾಷ್ಟ್ರದವರೂ ಅಲ್ಲ, ಒಂದೇ ಬಣವೂ ಅಲ್ಲ, ತನಗೆ ಪ್ರೀತಿಪಾತ್ರರಾದವರು, ತನಗೆ ಬೇಕಾದವರು, ತನಗೆ ಪೂಜಾರ್ಹರಾದವರೂ ಕೂಡ ಹಗೆಗಳಂತೆ ಕಾದಲು ನಿಂತಿರುವುದನ್ನು ಪ್ರತ್ಯಕ್ಷ ಕಂಡಾಗ ಅವನ ಚಿತ್ತ ಕಲಕಿ ಹೋಯಿತು. ತನ್ನ ಗುರುಗಳು, ಪಿತಾಮಹ, ಆತ್ಮೀಯ ಗೆಳೆಯರು, ವಾರಿಗೆಯಲ್ಲಿ ಅಣ್ಣತಮ್ಮಂದಿರು, ಮಕ್ಕಳಾಗಬೇಕಾದವರು ಎಲ್ಲರೂ ಅಲ್ಲಿ ಎದುರು ಬಣದಲ್ಲಿ ನಿಂತಿದ್ದಾರೆ. ಪ್ರೀತಿ–ಸಂಬಂಧ ಎಲ್ಲ ಮರೆತು ತಾನವರನ್ನು ಕೊಲ್ಲಬೇಕು. ಅವನ ಮನ ಥರಗುಟ್ಟಿತು. ಇದೆಲ್ಲಾ ಅವನಿಗೆ ಮೊದಲಿಗೇ ಗೊತ್ತಿರಲಿಲ್ಲವೆಂದೇನಲ್ಲ, ಗೊತ್ತಿತ್ತು; ಇವರೆಲ್ಲ ತನಗೆ ಮೋಸ ಮಾಡಿದವರು, ವಂಚಿಸಿದವರು, ತಮ್ಮ ಹಕ್ಕುಗಳನ್ನು ಕಿತ್ತುಕೊಂಡವರು, ತಮ್ಮ ಧರ್ಮಪತ್ನಿಯನ್ನು ಅವಮಾನಿಸಿದರು, ಇದೆಲ್ಲಾ ಗೊತ್ತಿದ್ದದ್ದೇ. ತಾನು ಕ್ಷತ್ರಿಯನಾಗಿ ಇವುಗಳ ವಿರುದ್ಧ ಹೋರಾಡಬೇಕು, ನ್ಯಾಯ ಸದಾ ಸರ್ವದಾ ಗೆಲ್ಲುವಂತಾಗಬೇಕು, ಅದಕ್ಕಾಗಿ ಅನ್ಯಾಯ, ಅಧರ್ಮದ ವಿರುದ್ಧ ಹೋರಾಡುವುದು ತನ್ನ ಕರ್ತವ್ಯ ಎಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಈ ತತ್ವ ಅವನ ಹೃದಯಕ್ಕೆ ಈ ಕ್ಷಣದವರೆಗೆ ತಾಗಿರಲಿಲ್ಲ. ಇದೆಲ್ಲದರ ಬಗ್ಗೆ ಆಳವಾಗಿ ಯೋಚನೆ ಕೂಡ ಅವನು ಮಾಡಿರಲಿಲ್ಲ. ಆದರೆ ದೈವೀ ಸಾರಥಿಯಾದ ಕೃಷ್ಣ ಇದನ್ನೆಲ್ಲ ಅರ್ಜುನನಿಗೆ ತೋರಿಸಿಕೊಟ್ಟ, ಅವನ ಅಂತರಂಗವನ್ನು ಭೇದಿಸಿ ಮರ್ಮಸ್ಥಾನಕ್ಕೆ ಮುಟ್ಟುವಂತೆ ತೋರಿಸಿಕೊಟ್ಟ. ಅವನ ಭಾವನಾತ್ಮಕ ವ್ಯಕ್ತಿತ್ವವನ್ನು ತಟ್ಟಿ ಎಬ್ಬಿಸಿಬಿಟ್ಟ. ಅರ್ಜುನನ ಅಂತರಂಗ ಕುಲಕಿ ಹೋಯಿತು.

ಅದರ ಪರಿಣಾಮವಾಗಿ ಅರ್ಜುನನು ಭಾವನಾತ್ಮಕ ಮತ್ತು ಪ್ರತ್ಯಕ್ಷ ಲೌಕಿಕ ಬಿಕ್ಕಟ್ಟಿಗೆ ಸಿಲುಕಿದನು. ಅವನು ಕಿಂಕರ್ತವ್ಯಮೂಢನಾದನು; ಏನು ಮಾಡಬೇಕು?

ಏನು ಮಾಡಬಾರದು ತಿಳಿಯದಂಥ ಇಬ್ಬಗೆಯ ಪರಿಸ್ಥಿತಿ ಉಂಟಾಯಿತು. ಅವನಿಗೆ ಕರ್ಮದ ಮೇಲೂ ಕರ್ಮಫಲ ಆನಂದ–ಭೋಗಗಳ ಮೇಲೆ ಜಿಗುಪ್ಸೆಯಾಯಿತು ಕ್ಷತ್ರಿಯರ ಧರ್ಮವಾದ ಸಾಹಸ, ಧೈರ್ಯ, ವಿಜಯ, ಆಡಳಿತ, ಅಧಿಕಾರ ಇವ್ಯಾವೂ ಬೇಡವೆನಿಸಿದವು. ಯುದ್ಧ ನ್ಯಾಯಯುತವಾಗಿರಬಹುದು, ಯೋಗ್ಯ ಉದ್ದೇಶ ಹೊಂದಿರಲೂಬಹುದು; ಆದರೆ ಎಲ್ಲದರ ಕೊನೆಯ ಪರಿಣಾಮ ಏನು? ಸ್ವಾರ್ಥ ಸಾಧನೆ, ತಾನು ತನ್ನ ಕುಟುಂಬ–ಪರಿಹಾರ–ಪರಿಜನರ ಹಿತಕ್ಕಾಗಿ ಅಪಾರ ಜೀವಹಾನಿ ಮಾಡಬೇಕು! ಆನಂದ ಭೋಗ, ಇಷ್ಟಕ್ಕಾಗಿ ತಾನೇ ಈ ಅಪಾರ ಜೀವ ಹಾನಿ ಮಾಡುವುದು! ಇದು ಯೋಗ್ಯವೇ? ಭೌತಿಕ ಸುಖ, ಸಾಮಾಗ್ರಿ, ಭೋಗ ಐಶ್ವರ್ಯ ಇವುಗಳೇನು ಶಾಶ್ವತವೇ? ಇದೆಲ್ಲ ಸಾಮಾಜಿಕ, ರಾಷ್ಟ್ರೀಯ ಜೀವನದ ದೃಷ್ಟಿಯಿಂದ ಇದು ಅವಶ್ಯಕವಾಗಿದ್ದರೂ, ಆದರೆ ಅದರ ಸಲುವಾಗಿ ತನ್ನ ಬಂಧು–ಬಾಂಧವ–ಪರಿಜನರನ್ನೇ ನಾಶಮಾಡಿ ಬಿಡುವುದೇ? ಬೇಡ, "ಏತಾನ್ನಹಂತುಮಿಚ್ಛಾಮಿ ಘ್ನತೋಪಿ" ನನ್ನನ್ನೇ ಅವರು ಕೊಂದರು ಅಡ್ಡಿಯಿಲ್ಲ, ಅವರನ್ನು ನಾನು ಕೊಲ್ಲಲು ಬಯಸುವುದಿಲ್ಲ: ಬಂಧು–ಬಾಂಧವ ಪರಿಜನರಿಗಾಗಿ ಸುಖ, ರಾಜ್ಯ, ಭೋಗ, ಐಶ್ವರ್ಯ ಎಲ್ಲ, ಹೀಗಿರುವಾಗ ಅವರನ್ನೇ ಕೊಂದು ನಾನೇನು ಸುಖ ಅನುಭವಿಸಲು ಸಾಧ್ಯ? ಮೂರು ಲೋಕಗಳ ರಾಜ್ಯ ಕೊಡುತ್ತೇನೆ ಅಂದರೂ ಸಹ ನಾನಿ ಘೋರ ಕೃತ್ಯ ಮಾಡಲಾರೆ ಎಂದು ಅರ್ಜುನ ಕೈ ಚೆಲ್ಲಿದ. 'ಅಹೋ ಬತ ಮಹತ್ ಪಾಪಂ ಕರ್ತುಂ ವ್ಯವಸಿತಾ ವಯಂ' ನಾವು ಬಹುದೊಡ್ಡ ಪಾಪ ಮಾಡಿ ಹೊರಟಿದ್ದೇವೆ ಎಂದು ಹೇಳುತ್ತಾ ಶಸ್ತ್ರಗಳನ್ನು ಕೆಳಗಿಟ್ಟು ಕುಳಿತು ಬಿಟ್ಟ ಅರ್ಜುನ. ಅವನಲ್ಲಿ ಭಾವನಾತ್ಮಕ ಪ್ರವಾಹ ಉಕ್ಕೇರಿತು. ಅವನು ವಿವಶನಾಗಿ ಹೋದ. ಇದು ಬರೀ ವೈಯಕ್ತಿಕ ಪಾಪದ ವಿಚಾರ ಮಾತ್ರ ಅಲ್ಲ, ಇಂಥ ಮಹಾ ಯುದ್ಧದಿಂದ ಸಾಮಾಜಿಕ ವ್ಯವಸ್ಥೆ ಕೆಟ್ಟುಹೋಗುತ್ತದೆ ಎಂದು ಅರ್ಜುನ ಹೇಳುತ್ತಾನೆ. ನೈತಿಕತೆ, ಧರ್ಮ, ವರ್ಣ ವ್ಯವಸ್ಥೆ ಹಾಳಾಗಿ ಹೋಗುವುದೆಂದು ಶಂಕಿಸುತಾನೆ, ವಾದಿಸುತ್ತಾನೆ. ಕೊನೆಗೆ ಕೃಷ್ಣನಿಗೆ ಹೇಳುತ್ತಾನೆ "ನಾನಂತೂ ಶಸ್ತ್ರತ್ಯಾಗ ಮಾಡುತ್ತೇನೆ, ಕೌರವರು ಬೇಕಾದರೆ ನನ್ನನ್ನು ಕೊಲ್ಲಲಿ, ಯದಿ ಮಾಂ ಅಪ್ರತೀಕಾರಂ ಅಶಸ್ತ್ರಂ ಶಸ್ತ್ರಪಾಣಯಃ। ಧಾರ್ತರಾಷ್ಟ್ರಾಃ ರಣೇ ಹನ್ಯುಃ ತತ್ ಮೇ ಕ್ಷೇಮತರಂ ಭವೇತ್" ಅದೇ ಒಳ್ಳೆಯದು. ಅವರು ಕೊಂದರೆ ನನಗೆ ಕ್ಷೇಮ ಎಂಬ ವಿಚಿತ್ರ ವಾದ ಮಂಡಿಸುತ್ತಾನೆ.

ಅರ್ಜುನನಲ್ಲಿ ಮೂಡಿದ ಈ ಭಾವ, ಇಬ್ಬದಿಯ ಸ್ವರೂಪವು ಮನೀಷಿಯ, ಚಿಂತಕನ ರೂಪದ್ದಲ್ಲ. ಇದು ಅವನ ವೈಚಾರಿಕ ಪ್ರಾಗಲ್ಭತೆಯನ್ನು ತೋರಿಸುವುದಿಲ್ಲ.

ಜೀವನದ ಬಾಹ್ಯ ವ್ಯಾಪಾರದಿಂದ ವಿಮುಖವಾಗಿ ಅಂತರ್ಮುಖಿಯಾಗುವ ಪ್ರವೃತ್ತಿಯದೂ ಅಲ್ಲ. ಅರ್ಜುನನು ಸತ್ಯವನ್ನರಸಿ ಹೊರಟಿಲ್ಲ, ಈ ವಿಶ್ವದ ಅಸ್ತಿತ್ವದ ಅರ್ಥವನ್ನು ಕಾಣುವ ಹಂಬಲದಿಂದ ಹೊರಟವನೂ ಅಲ್ಲ, ಅಷ್ಟೇ ಏಕೆ ದುಃಖ ಹಾಗೂ ಯಾತನಾಮಯ ಸಂಸಾರದಿಂದ ಪಾರಾಗಿ ಹೋಗುವ ಸನ್ಯಾಸಿಯ ಅಥವಾ ಭಿಕ್ಷುವಿನ ಮನಃಸ್ಥಿತಿಯೂ ಅರ್ಜುನನಿಗಿಲ್ಲ. ಅವನ ಸಮಸ್ಯೆ ಭಾವನಾತ್ಮಕವಾದುದು, ಸಂವೇದನಾತ್ಮಕವಾದುದು, ಅಷ್ಟೇ ಅಲ್ಲ ತಾನೇನು ಮಾಡುತ್ತ ಜೀವನ ಮಾಡಿದ್ದನೋ, ಸಂತೋಷ ಕಂಡಿದ್ದನೋ ಅದನ್ನೇ ಈಗ ತನ್ನ ಭಾವನೆಗಾಗಿ ವಿರೋಧ ಮಾಡುತ್ತಿದ್ದಾನೆ. ತನ್ನವರಿಗಾಗಿ ವಿರೋಧ ಮಾಡುತ್ತಿದ್ದಾನೆ; ಇಲ್ಲಿ ಗೊಂದಲವಿದೆ, ನೈತಿಕ ದ್ವಂದ್ವವಿದೆ, ಯಾವುದೇ ನಿರ್ದಿಷ್ಟ ಮಾನದಂಡವಿಲ್ಲ. 'ಧರ್ಮದ ಬಗ್ಗೆ ನಿಶ್ಚಿತ ಜ್ಞಾನವೂ ಇಲ್ಲ. ಮಾನಸಿಕ ಸ್ತರದಲ್ಲಿ ಮಾತ್ರ ಸಕ್ರಿಯವಾಗಿರುವ ಕರ್ಮನಿಷ್ಠ ಜೀವಕ್ಕೆ ಇಂಥ ಪ್ರಸಂಗ ನಿಜವಾಗಿ ದೊಡ್ಡ ವಿಪತ್ತೇ, ಅದೊಂದು ರೀತಿಯ ಸೋಲಿನ ತರಹದ ಪ್ರಸಂಗ ಅದು. ಪ್ರತಿಭಟನೆ ಎಂಬುದು ನಿಜ ವಾಗಿ ನೈಸರ್ಗಿಕ ಮತ್ತು ಸಹಜ ಇಂದ್ರಿಯಾನುಭವದ ಹಂತದಲ್ಲಿ ಇಂಥ ವಿರೋಧವೂ ಭಯ, ಜಿಗುಪ್ಸೆಗಳನ್ನು ಹುಟ್ಟಿಸುತ್ತದೆ. ಪ್ರಾಣಿಕದ ಹಂತದಲ್ಲಿ ಜೀವನದ ಆದರ್ಶ ಮತ್ತು ಕರ್ಮದ ಪ್ರಸಿದ್ಧ ವಸ್ತು ಅಥವಾ ವಿಷಯಗಳಲ್ಲಿ ಶ್ರದ್ಧೆ ಹೊರಟುಹೋಗುವುದು; ಭಾವನಾತ್ಮಕವಾಗಿ ಸಮಾಜ ಜೀವಿಯ ಸಾಮಾನ್ಯ ಗುಣಗಳಾದ ಸ್ನೇಹ, ಜೀವರಾಶಿಗಳ ಕ್ಷೇಮದ ಅಭಿಲಾಷೆ – ಸರ್ವೇ ಜನಾಃ ಸುಖಿನೋ ಭವಂತು – ಇಂಗಿ ಹೋಗುತ್ತದೆ; ನೈತಿಕ ದೃಷ್ಟಿಕೋನದಿಂದ, ಯುದ್ಧ ಘೋರ ಪರಿಣಾಮ, ನರಕ, ಭುಂಜೀಯ ಭೋಗಾನ್ ರುಧಿರ ಪ್ರದಿಗ್ಧಾನ್' ಇವೆಲ್ಲಾ ಬೇಡವಾಗಿ ಬಿಡುತ್ತದೆ. ವ್ಯವಹಾರಿಕವಾಗಿ ಧರ್ಮ–ಅಧರ್ಮಗಳ ಮಾನದಂಡವನ್ನು ಸ್ವೀಕಾರ ಮಾಡಿದರೆ, ಕರ್ಮದ ಹಿಂದಿರುವ ಘನ ಉದ್ದೇಶ ನಾಶವಾಗಿ ಬಿಡುವುದು. ಅರ್ಜುನ ತನ್ನ ಅಂತಃಕರಣ ಅಥವಾ ಅಂತರಂಗದ ದಿವಾಳಿತನವನ್ನು ಪ್ರಕಟಮಾಡುತ್ತ ಹೇಳುತ್ತಾನೆ. ಕೇವಲ ವಿಚಾರವಲ್ಲ ತನ್ನ ಹೃದಯ ಪ್ರಾಣಿಕ ಸತ್ತೆ, ತನ್ನ ಪ್ರಜ್ಞಾಯುಕ್ತ ಸತ್ತೆ ಕೂಡ ದಿಕ್ಕೆಟ್ಟು ಹೋಗಿದೆ; ತನಗೆ ಧರ್ಮ ಎಲ್ಲೂ ಕಾಣುತ್ತಿಲ್ಲ. ತಾನೇನು ಮಾಡಬೇಕು ತಿಳಿಯದಂತಾಗಿದೆ. ತಾನು ಧರ್ಮ ಸಂಮ್ಮೂಢ ಚೇತನಾಗಿದ್ದೇನೆ ಎಂದು ಹೇಳುತ್ತಾನೆ. ಅಂತೆಯೇ ಕೊನೆಗೆ ತನ್ನ ಪ್ರಿಯ ಮಿತ್ರನೂ, ಬಂಧುವೂ ಮಾರ್ಗದರ್ಶನ ಗುರು ಆಗಿರುವ ಕೃಷ್ಣನನ್ನು ಪ್ರಾರ್ಥಿಸುತ್ತಾನೆ. "ಶಿಷ್ಯಃ ತೇ ಅಹಮ್, ನನ್ನನ್ನು ಶಬ್ದ ಜಾಲದಲ್ಲಿ ಸಿಲುಕಿಸಿ ದಾರಿ

ತಿಳಿಯದಂತೆ ಮಾಡಬೇಡ" 'ತದೇಕಂ ವದ ನಿಶ್ಚಿತ್ಯಯೇನ ಶ್ರೇಯೋ ಅಹಮಾಪ್ನುಯಾಮ್' ಎಂದು ಕೇಳಿಕೊಳ್ಳುತ್ತಾನೆ.

ಅವನೇನು ಜೀವನದ ಮರ್ಮ ಕೇಳಲಿಲ್ಲ, ರಹಸ್ಯ ಕೇಳಲಿಲ್ಲ, ಬದುಕಿನ ಉದ್ದೇಶ ಗುರಿ–ಉದ್ದೇಶ ಕೇಳಲಿಲ್ಲ, ಅವನು ಅತಿ ಸರಳ ಪ್ರಶ್ನೆ ಕೇಳುತ್ತಾನೆ. ಬಿಕ್ಕಟ್ಟಿನ ಇಂತಹ ಪ್ರಸಂಗದಲ್ಲಿ ತಾನೇನು ಮಾಡಬೇಕು? ತನ್ನ ಧರ್ಮ ಏನು? ಎಂದು ಕೇಳುತ್ತಾನೆ.

ಸಾಂದರ್ಭಿಕವಾಗಿ ಧರ್ಮದ ವ್ಯಾಖ್ಯೆಯನ್ನು ಕುರಿತು ಶ್ರೀ ಅರವಿಂದರು ಹೇಳುತ್ತಾರೆ. ಧರ್ಮ ಅಂದರೆ ಸೇರಿವೆ, ಕೂಡಿವೆ, ಒಂದಾಗಿವೆ. ಸೇರಿಸೋ ತತ್ವ ಅದು ನಿಯಮ, ಪ್ರಕೃತಿ, ಸ್ವಭಾವ, ಜೀವನ ಮತ್ತು ಕಾರ್ಯಗಳ ನಿಯಮ. ತ್ರಾಯತೇ ಇತ್ಯಾದಿ ಶಬ್ದ ಬಳಸದೆ ನೇರವಾಗಿ ಹೇಳುತ್ತಾರೆ. ಧರ್ಮವು ಜೀವನದ ಎಲ್ಲಾ ಅಂಗಗಳನ್ನು ಸೇರಿಸಿ ಒಟ್ಟಾಗಿ ಕರೆದೊಯ್ಯುವ ತತ್ವ. ಇದು ಬಹುಶಃ ಹೊಸ ವ್ಯಾಖ್ಯೆ ಎಂದು ತೋರುತ್ತದೆ.

ಅರ್ಜುನನು ನಿಜವಾಗಿ ಇಷ್ಟೆಲ್ಲ ವಿಚಾರಮಾಡಿ. ಧರ್ಮದ ಜ್ಞಾನವನ್ನು ಬಯಸಿ ಪ್ರಶ್ನಿಸಲಿಲ್ಲ. ಅವನಿಗೆ ಅದೆಲ್ಲ ಬೇಕಾಗಿರಲಿಲ್ಲ. ಉನ್ನತ ಜೀವನ, ಆಧ್ಯಾತ್ಮಿಕ ಜೀವನ ಇವುಗಳ ಬಗ್ಗೆ ಅವನಿಗೇನೂ ಜಿಜ್ಞಾಸೆ ಇರಲಿಲ್ಲ. ಆದರೆ ದೇವ ಗುರು ಕೃಷ್ಣನಿಗೆ ತನ್ನ ಶಿಷ್ಯನನ್ನು ಹಾಗೆಯೇ ಬಿಡುವ ಇಚ್ಛೆ ಇರಲಿಲ್ಲ. ಅವನನ್ನು ಉನ್ನತ ಜೀವನಕ್ಕೆ ಕರೆದೊಯ್ಯುವ ಬಯಕೆಯಿಂದ, ಶಿಷ್ಯನಲ್ಲಿ ಆ ತಯಾರಿ ಇದೆಯೋ ಇಲ್ಲವೋ ಅನ್ನುವುದನ್ನು ಖಚಿತಪಡಿಸಿಕೊಳ್ಳುತ್ತಾನೆ. ಅಂತೆಯೇ ಸರ್ವಧರ್ಮಾನ್ ಪರಿತ್ಯಜ್ಯ, ಪ್ರಜ್ಞೆ ಮುಕ್ತನಾಗಿ ಬ್ರಹ್ಮನಲ್ಲಿ (ಪರಮಾತ್ಮನಲ್ಲಿ) ಜೀವಿಸಲು, ಅದೇ ಪ್ರಜ್ಞೆಯಿಂದ ವಿಶ್ವದಲ್ಲಿ ಕೆಲಸ ಮಾಡಲು ಅರ್ಜುನನು ಸಿದ್ಧನಾಗಿದ್ದಾನೋ ಇಲ್ಲವೋ ಅನ್ನುವುದನ್ನು ಕೃಷ್ಣನು ಪರೀಕ್ಷೆ ಮಾಡಿ ತಿಳಿದುಕೊಳ್ಳುತ್ತಾನೆ. ಅರ್ಜುನನಿಗೆ ಸಾಮಾನ್ಯ ಜೀವನದ ಬಗ್ಗೆ ತೀವ್ರ ಜಿಗುಪ್ಸೆ ಮೂಡಿರುವುದನ್ನು ಖಚಿತ ಪಡಿಸಿಕೊಂಡ ಮೇಲೆಯೇ, ಸಾಧಕನಾದವನು ಆತ್ಮ ಸ್ಥಾಯಿಯಲ್ಲಿ ನಿಂತುಕೊಂಡು ಕೆಲಸ ಮಾಡುವುದು ಹೇಗೆ ಅನ್ನುವುದನ್ನು ಹೇಳಲು ಉಪ ಕ್ರಮಿಸುತ್ತಾನೆ; ಆದರೆ ಕಾರ್ಯದ ಯಾವ ಬಾಹ್ಯ ನಿಯಮಗಳನ್ನು ಹೇಳುವುದಿಲ್ಲ. ಅವನು ಆತ್ಮದಲ್ಲಿ ಸ್ಥಿರನಾಗಿರಬೇಕು, ಕರ್ಮಫಲವನ್ನು ಅಪೇಕ್ಷಿಸಬಾರದು, ಪಾಪಪುಣ್ಯಗಳ ಪರಿಕಲ್ಪನೆಯನ್ನು ಮೀರಿ ಬೆಳೆಯಬೇಕು, ಸಮಾಧಿಯಲ್ಲಿ ನಿಂತು ಅಚಲ ಬುದ್ಧಿಯಿಂದ ವ್ಯವಹಾರ ಮಾಡಬೇಕು.

ಅರ್ಜುನನಿಗೆ ಇದರಿಂದ ಸಮಾಧಾನವಾಗಲಿಲ್ಲ, ಅವನು ಕೇಳುತ್ತಾನೆ, ಹೌದು ಈ ರೀತಿ ಆತ್ಮನಲ್ಲಿ ಸ್ಥಿರವಾಗಿ ನಿಂತು ನಿಶ್ಚಲ ಚಿತ್ತದಿಂದ ಸಂಸಾರ ಮಾಡು ಎಂದು ಹೇಳಿದರೆ, ಅದರ ಪರಿಣಾಮ ಬಾಹ್ಯ ಕೃತಿಗಳ ಮೇಲೆ ಪ್ರತಿಬಿಂಬವಾಗುತ್ತದೆ? ಅವನ ಮಾತು ಹೇಗಿರುತ್ತದೆ? ಅವನು ಹೇಗೆ ವರ್ತನೆ ಮಾಡುತ್ತಾನೆ? ಮಾನವನಾಗಿಯೇ ಇದ್ದುಕೊಂಡು ಮಾನವನಿಂದ ಯಾವ ರೀತಿ ಭಿನ್ನವಾಗಿ ಅವನು ಕಾರ್ಯ ಮಾಡುತ್ತಾನೆ ಎಂದು ಕೇಳುತ್ತಾನೆ.

ಕೃಷ್ಣನು ಇಲ್ಲಿಯೂ ಸಹ ಕಾರ್ಯ, ಕ್ರಿಯೆಗಳ ಬಗ್ಗೆ ಹೇಳಲು ಹೋಗದೇ, ಬಾಹ್ಯ ಕೃತಿಗಳ ಹಿಂದಿರುವ ಅಂತರಂಗದ ಆತ್ಮ ಸ್ಥಿತಿಯ ಬಗ್ಗೆ ತಾನು ಹೇಳಿರುವುದನ್ನೇ ಮತ್ತಷ್ಟು ವಿಷದೀಕರಿಸಿ ಹೇಳುತ್ತಾನೆ. ಮುಖ್ಯವಾಗಿ ಏನು ಬೇಕೆಂದರೆ, ಬುದ್ಧಿ ಸ್ಥಿರವಾಗಿರಬೇಕು, ಬಯಕೆಗಳಿಲ್ಲದ ಸಮಸ್ಥಿತಿ ಇರಬೇಕು, ಅರ್ಜುನನಿಗೆ ಈಗ ತಾಳ್ಮೆ ತಪ್ಪುತ್ತದೆ. ಜ್ಞಾನವೇ ಕರ್ಮಕ್ಕಿಂತ ಅಧಿಕವಾಗಿದ್ದರೆ 'ಘೋರೇ ಕರ್ಮಣಿ ಕಿಂ ನಿಯೋಜಯಸಿ ಮಾಮ್' ಎಂದು ಗಟ್ಟಿಸಿ ಕೇಳಿ ಬಿಡುತ್ತಾನೆ. ಏನೇನೋ ತರ್ಕ ಹೇಳುತ್ತಾ ನನ್ನ ಬುದ್ಧಿಯನ್ನು ಗೊಂದಲಕ್ಕೀಡು ಮಾಡುತ್ತಿರುವೀ, ಆದ್ದರಿಂದ 'ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಹಮಾಪ್ನುಯಾಮ್' ಸ್ಪಷ್ಟವಾಗಿ ಹೇಳಿಬಿಡು ನಾನೇನು ಮಾಡಲಿ? ಎಂದು ಪ್ರಶ್ನಿಸುತ್ತಾನೆ.

ಸಾಮಾನ್ಯ ಮಾನವನಿಗೆ ಈ ಆಧ್ಯಾತ್ಮಿಕ, ತಾತ್ವಿಕ ಚರ್ಚೆ ಇವೆಲ್ಲ ಬೇಡ. ಆಂತರಿಕ ಜೀವನ, ಆತ್ಮ ಇವೆಲ್ಲ ಬೇಡ. ಈ ಭೂಮಿಯ ಮೇಲಿನ ಬದುಕಿನಲ್ಲಿ ತಾನೇನು ಮಾಡಬೇಕು? ಧರ್ಮ ಯಾವುದು? ಈ ಜಗತ್ತನ್ನು ಬಿಟ್ಟು ಮೋಕ್ಷವನ್ನಪೇಕ್ಷಿಸುವುದು ಒಂದು ದೃಷ್ಟಿಯಿಂದ ಅರ್ಥವಾದೀತು. ಆದರೆ ಇದೇ ಜಗದಲ್ಲಿ ಇದ್ದು, ಜಗದ ಜಂಜಡಗಳಿಂದ ಮೀರಿ ಕೆಲಸ ಮಾಡುವುದು ಹೇಗೆ? ಗೊಂದಲದ ವಿಚಾರ! ಆದ್ದರಿಂದ ಒಂದೇ ಮಾತಿನಲ್ಲಿ ಹೇಳಿಬಿಡು ನಾನೀಗ ಏನು ಮಾಡಬೇಕು? ನನ್ನ ಕರ್ತವ್ಯ ಏನು? ಅರ್ಜುನ ನೇರವಾಗಿ ಪ್ರಶ್ನೆ ಮಾಡುತ್ತಾನೆ.

ಉಳಿದಂತೆ ಅರ್ಜುನನ ಇನ್ನೂ ಅನೇಕ ಪ್ರಶ್ನೆಗಳಿವೆ, ಅವೆಲ್ಲವೂ ಒಂದೇ ಮನೋಧರ್ಮದಿಂದ ಬಂದವುಗಳಾಗಿವೆ, ಆತ್ಮದಲ್ಲಿ ಸ್ಥಿತನಾಗಿರಬೇಕು, ಬಾಹ್ಯದಲ್ಲಿ ಅದೇ ಸ್ಥಿತ ಭಾವದಿಂದ ಕೆಲಸ ಮಾಡಬೇಕು. ಬಾಹ್ಯದಲ್ಲಿ ಯಾವ ರೀತಿಯ ಬದಲಾವಣೆಯು ಕಾಣಲಿಕ್ಕಿಲ್ಲ. ಅಥವಾ ಕೆಲವೊಮ್ಮೆ ತಪ್ಪು ಎನ್ನುವಂತೆ

ಭಾಸವಾದರೂ ಸ್ವ–ಧರ್ಮಕ್ಕನುಗುವಾಗಿ 'ಕರ್ಮಮಾಚರೇತ್' ಎಂದು ಕೃಷ್ಣ ಹೇಳಿದ ಮೇಲೂ ಅರ್ಜುನನ ಸಂದೇಹ ತೀರಲಿಲ್ಲ. ಕೃಷ್ಣನು ಕರ್ಮ ಮತ್ತು ಕರ್ಮ ಸನ್ಯಾಸ ಎರಡನ್ನು ಸಮನ್ವಯ ಮಾಡಿ ಹೇಳಿದಾಗಲೂ ಅವನಿಗೆ ಅರ್ಥ ಆಗಲಿಲ್ಲ. ಇನ್ನೊಮ್ಮೆ ಹೇಳು, ಮತ್ತೊಮ್ಮೆ ಹೇಳು ಬಿಡಿಸಿ ಹೇಳು ಎಂದು ಪದೇಪದೇ ಕೇಳಿದ. ತನ್ನ ಕ್ಷತ್ರಿಯ ಧರ್ಮ, ಸಮಾಜ ಸಂರಕ್ಷಣ ಕರ್ಮವೇ ತನ್ನ ಧರ್ಮವೆಂಬುದು ತಿಳಿದರೂ ಪಾಪ–ಪುಣ್ಯಗಳಿಗೆ ಇದನ್ನು ಸಮನ್ವಯ ಮಾಡುವುದು ಹೇಗೆ? ತಿಳಿಯಲಿಲ್ಲ. ಇದೆಲ್ಲ ಏನು? ಕೊನೆಗೆ ಆ ದಂಡೆಯೂ ಇಲ್ಲ ಈ ದಂಡೆಯೂ ಇಲ್ಲ ಅನ್ನುವಂತಾಗುವುದಿಲ್ಲವೇ? ಆತ್ಮ ಅದನ್ನು ಮಾಡಿ, ಇದನ್ನು ಮಾಡಿ ಕೊನೆಗೆ ಸೋತುಹೋಗುವುದೇ? ಮೋಡ ಕರಗಿದಂತೆ ಕರಗಿಹೋಗಿ ಬಿಡುವುದೇ? ಎಂಬ ಸಂಶಯ ಮುಂದಿಟ್ಟ.

ಮುಂದೆ ಕೃಷ್ಣನ ಉತ್ತರಗಳಿಂದ ಅರ್ಜುನನ ಸಂಶಯಗಳೆಲ್ಲ ದೂರಾದವು 'ಭಗವಂತನೇ ನಿಯಮ. ಆ ನಿಯಮದ ಮುಂದೆ ಇನ್ನಾವ ನಿಯಮವೂ ಇಲ್ಲ' ಎಂಬುದನ್ನು ಅವನು ಅರಿತನು. ಕೊನೆಗೆ, ಆ ನಿಯಮವನ್ನು ತಿಳಿದುಕೊಳ್ಳುವ ಬಗೆ ಯಾವುದು? ಈಶ್ವರ ಪ್ರೇರಣೆ ಎಂಬುದನ್ನು ತಿಳಿದುಕೊಳ್ಳುವುದು ಹೇಗೆ? ಎಂದು ಕೇಳುತ್ತಾನೆ. ಸಾಮಾನ್ಯ ಮಾನವೀಯ ಪ್ರಜ್ಞೆಯಿಂದ ಭಗವಂತನನ್ನು ಗುರುತಿಸುವುದು ಹೇಗೆ? ಈಶ್ವರನ ಆತ್ಮಶಕ್ತಿಯು ಯಾವ ಯಾವ ವಸ್ತುಗಳಲ್ಲಿ ಹೆಚು ಹೆಚ್ಚಾಗಿ ಪ್ರಕಟವಾಗಿದೆ(ವಿಭೂತಿ)? ಧ್ಯಾನದ ಮೂಲಕ ತಾನದನ್ನು ಗುರುತಿಸಬಹುದೇ? ಮಾನವನ ರೂಪದಲ್ಲಿ ತನ್ನೊಡನೆ ನಿಂತು ಮಾತನಾಡುತ್ತಿರುವ ಕೃಷ್ಣನ ಹಿಂದಿನ ವಿರಾಟ್ ರೂಪವನ್ನು ತಾನು ನೋಡಲು ಸಾಧ್ಯವಿಲ್ಲವೇ? ಹೀಗೆ ಅನೇಕ ಪ್ರಶ್ನೆಗಳನ್ನು ಅರ್ಜುನ ಕೇಳುತ್ತಲೆ ಹೋದನು. ಅವನ ಕೊನೆಕೊನೆಯ ಪ್ರಶ್ನೆಗಳಂತೂ ತುಂಬಾ ವಿಶಿಷ್ಟ ಕರ್ಮತ್ಯಾಗ ಅಥವಾ ಕರ್ಮ ಸನ್ಯಾಸ ಹಾಗೂ ಕರ್ಮಫಲ, ಅನಾಸಕ್ತಿ ಯೋಗ ಇವುಗಳಲ್ಲಿರುವ ಸ್ಪಷ್ಟ ಭೇದವೇನು? ಪುರುಷ ಪ್ರಕೃತಿಯರ ನಡುವೆ ಏನು ಬೇಧವಿದೆ? ಕ್ಷೇತ್ರ ಮತ್ತು ಕ್ಷೇತ್ರಜ್ಞ ಅಂದರೇನು? ದೈವೀ ಸಂಕಲ್ಪದಂತೆ ಕಾರ್ಯ ಮಾಡುತ್ತಾ ಸ್ವಂತದ ಇಚ್ಛೆಗಳನ್ನು ಲೇಶಕೂಡ ಇಲ್ಲದಲೆ ಬಿಡುವುದು ಸಾಧ್ಯವೇ? ಮತ್ತು ಅದು ಅಷ್ಟು ಮಹತ್ವದ್ದೇ? ಕೊನೆಗೆ, ನಿಸ್ತ್ರೈಗುಣ್ಯೋ ಭವ ಎಂದು ಕೃಷ್ಣ ಹೇಳಿರುವುದನ್ನು ಗಮನಿಸಿ, ತ್ರಿಗುಣಗಳ ವ್ಯವಹಾರಿಕ ಬಲೆಯಿಂದ ಪಾರಾಗುವ ಬಗೆ ಏನು? ಪರಿಣಾಮವೇನು? ಸ್ಪಷ್ಟವಾದ ನೇರವಾದ ಉತ್ತರ ಬೇಕೆಂದು ಕೃಷ್ಣನನ್ನು ಅವನು ಕೇಳುತ್ತಾರೆ.

ಯುದ್ಧ ರಂಗದಲ್ಲಿ ಯುದ್ಧ ಸನ್ನದ್ಧ ಸೈನ್ಯದ ನಡುವೆ ನಿಂತು ಉಪದೇಶ ನೀಡುವುದನ್ನು ಕುರಿತು ಎಷ್ಟೋ ಜನ ಏನೇನೋ ಟೀಕೆ ಮಾಡಿದ್ದಾರೆ, ಬರೆದಿದ್ದಾರೆ, ಸತ್ಯವೋ ಸುಳ್ಳೋ ಎಂದು ಶಂಕಿಸಿದ್ದಾರೆ. ಆದರೆ ನಿಜವಾಗಿ ಅದು ಅತ್ಯಂತ ಯೋಗ್ಯವಾದ ದೇಶ ಮತ್ತು ಕಾಲ, ಕ್ಷೇತ್ರ ಮತ್ತು ಸಮಯ. ಅರ್ಜುನ ತನ್ನ ಜೀವನವಿಡೀ ಪಾಲಿಸಿಕೊಂಡು ಬಂದಿದ್ದ. ನೈತಿಕ, ಸಾಮಾಜಿಕ, ಭಾವನಾತ್ಮಕ ಎಲ್ಲಾ ಮೌಲ್ಯಗಳು ಕುಸಿದು ಬಿದ್ದಾಗ ಅವನ ಸಾಮಾನ್ಯ ಅಹಂಗೆ ಅಸಾಧ್ಯ ಆಘಾತವಾದಾಗ ಧೃತಿಗೆಟ್ಟು ಹೋಗಿದ್ದಾನೆ. ಅಂಥ ಸಮಯದಲ್ಲಿ ಕೃಷ್ಣ ಅವನಿಗೆ ಉಪದೇಶ ಮಾಡುತ್ತಿದ್ದಾನೆ. ಅಂಥ ವಿಕಟ ಸಮಯದಲ್ಲಿ ಶಿಷ್ಯನನ್ನು ಮೇಲೆತ್ತಲೇಬೇಕು ತಾನೇ? ಎಲ್ಲಾ ಮಾನಸಿಕ ಹಾಗೂ ಕೆಳಸ್ತರದ ಬದುಕಿನಿಂದ ಶಿಷ್ಯನಾದವನನ್ನು ಉದ್ಧಾರ ಮಾಡುವುದೇ ಗುರುವಿನ ಕರ್ತವ್ಯ. ಕ್ಲುಪ್ತ ಸಮಯದಲ್ಲಿ ಅದು ಎಂಥದೇ ಆಗಿರಲಿ, ಎಲ್ಲೇ ಇರಲಿ, ಶಿಷ್ಯನನ್ನು ಎತ್ತಿ ಅವನ ಅಹಂಜನ್ಯ ಬದುಕಿನಿಂದ ಮೇಲೆತ್ತಿ ಆಧ್ಯಾತ್ಮಿಕ ಮೌಲ್ಯ ಹಾಗೂ ಆಧ್ಯಾತ್ಮಿಕ ಜೀವನಕ್ಕೆ ತಯಾರು ಮಾಡುವುದೇ ಅವನ ಕೆಲಸ. ಅದನ್ನು ಕೃಷ್ಣ ಇಲ್ಲಿ ಬಹು ಚೆನ್ನಾಗಿ ಮಾಡುತ್ತಾನೆ. ಅರ್ಜುನನು ಸಾಮಾನ್ಯ ಸ್ತರದಿಂದ ಮೇಲೇರಿ ಈಶ್ವರಿ ಭಾವದಲ್ಲಿ ನೆಲೆ ನಿಲ್ಲುವಂತೆ ಮಾಡುತ್ತಾನೆ. ಅರ್ಜುನನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೊಸ ಜೀವನ ಧರ್ಮವನ್ನು ಬೋಧಿಸುತ್ತಾನೆ ಯಾವುದರಿಂದ ಆತ್ಮನು ಕರ್ಮಬಂಧನದಿಂದ ಮುಕ್ತವಾಗುವನೋ ದಿವ್ಯ ಹಾಗೂ ಮುಕ್ತ ಜೀವನ ನಡೆಸಲು ಸಾಧ್ಯವಾಗುವದೋ ಅಂತ ಈಶ್ವರಿ ಜೀವನ ಧರ್ಮವನ್ನು ಬೋಧಿಸುತ್ತಾನೆ ಕರ್ಮ ಮಾಡದೆ ಯಾವ ಜೀವಿಯು ಒಂದು ಕ್ಷಣ ಕೂಡ ಜೀವಿಸದು ಆದ್ದರಿಂದ ಕರ್ಮ ಮಾಡಲೇಬೇಕು, ಕರ್ಮ ವಿಮುಖನಾಗಬಾರದು. ಆದರೆ ಕಾರ್ಯವನ್ನೇ ಬಂಧನವಾಗದಂತೆ ಹೇಗೆ ಮಾಡುತ್ತಾ ಜೀವಿಸಬೇಕು ಎಂಬುದನ್ನು ಅಂತ ವಿಕಟ ಸಂದರ್ಭದಲ್ಲಿ ಹೇಳಲೇಬೇಕಾಗಿ ಬಂದಿತು. ಸೂಕ್ತ ಗಳಿಗೆಯಲ್ಲಿ ಯುಕ್ತ ಉಪದೇಶ ಪಡೆದ ಅರ್ಜುನ ಸಂದೇಹ ಮುಕ್ತನಾಗಿ ಯುದ್ಧ ಸನ್ನದ್ಧನಾದ.

ಇಡೀ ಗೀತೆಯ ಬೋಧನೆಯನ್ನು ನೋಡಿ; ಯುಕ್ತ ಕರ್ಮ ಮಾಡಲೇಬೇಕು, ವಿಶ್ವಚಕ್ರ ಮುಂದುವರಿಯಲೇಬೇಕು, ಮಾನವನ ಆತ್ಮ ಅದೇ ಅಜ್ಞಾನದ ಸುಳಿಯಲ್ಲಿ ಸಿಕ್ಕು ಕರ್ಮ ವಿಮುಖವಾಗಬಾರದು ಎಂಬ ಮೂರು ಸೂತ್ರಗಳನ್ನೇ ಅದು ಹೇಳುತ್ತದೆ. ಅದರ ಗತಿ ಮತ್ತು ಗುರಿ ನಿರ್ಧಾರಿತವಾಗಿದೆ.

(ಸಶೇಷ)

## ಶ್ರೀ ಅರವಿಂದರ

# "ಋಗ್ವೇದದ ಪ್ರಥಮ ಋಕ್" – ಒಂದು ಆಧುನಿಕ ವಿಶ್ಲೇಷಣೆ

**– ಅನುವಾದ: ಪುಟ್ಟು ಕುಲಕರ್ಣಿ**

**4**

**ಯಜ್ಞ ಎಂದರೆ ವಿಷ್ಣು! ಸತ್ಯ ಯುಗದ ವಿಷ್ಣುವಿನ ಹೆಸರು ಯಜ್ಞ!!**

ಇನ್ನು "ಯತ್" ಎಂದರೆ ಉದ್ಯಮಭೂತ (**ಪದಾರ್ಥೋದ್ಯಮಭೂತ್–** Endeavour) ಎಂದು ಅರ್ಥವಿದೆ. ಆದರೆ "ಯಜ್" ಎನ್ನುವದು ಎಂದಿಗೂ ಈ ಪದಾರ್ಥೋದ್ಯಮಭೂತತ್ವವನ್ನು ಒಪ್ಪುವದಿಲ್ಲ; ಏಕೆಂದರೆ ಇದು "ಸಂಶಯಗಳನ್ನು ಸ್ಪಷ್ಟವಾಗಿ ನಿವಾರಿಸಿಕೊಂಡ" "ಅತ್ಯಂತ ಸುನಿಶ್ಚಿತವಾದ", "ವಿಜಯಶಾಲಿಯಾದ" ಮತ್ತು ನಿಖರವಾಗಿ ಪ್ರಭುತ್ವವನ್ನು ಹೊಂದಿದ ಅಥವಾ ಅಧಿಕಾರತ್ವವನ್ನು ಹೊಂದಿದ ಹಾಗೂ ಫಲಿತಾಂಶಕ್ಕಾಗಿ ಇರುವ ಕರ್ಮ–ಸಿದ್ಧಾಂತವನ್ನು ಹೊಂದಿರುತ್ತದೆ. ಹೀಗಾಗಿ ಇದರ ಅರ್ಥವ್ಯಾಪ್ತಿಯು – ಆಳ್ವಿಕೆ ನಡೆಸು, ಪ್ರಶಾಸನಗೊಳಿಸು ಮತ್ತು ಅಧಿಕಾರತ್ವವನ್ನು ಹೊಂದು ಎನ್ನುವಂತೆ ವಿಸ್ತಾರವಾಗಿ ಬಳಕೆಗೆ ಬಂದಿತು.

ಇವೆಲ್ಲ ಹಿನ್ನಲೆಯಲ್ಲಿ ನಿರ್ಧಾರಿತವಾಗುವ ಸಂಗತಿ ಎಂದರೆ "ಯಜ್ಞ" ಎಂದರೆ "ವಿಷ್ಣು". ಈ ವಿಷ್ಣುವು ಬ್ರಹ್ಮಾಂಶವನ್ನು ಪ್ರಶಾಸನಕ್ಕೆ ಒಳಪಡಿಸುವ ಮಹಾನ್–ಬಲಶಾಲಿಯಾಗಿದ್ದಾನೆ. ಇವನೇ ಮಾನವ ವರ್ಗದ ಕ್ರಿಯೆಗಳಿಗೆ/ಕರ್ಮಗಳಿಗೆ, ದೇಹಕ್ಕೆ, ಚಿಂತನಕ್ಕೆ ಒಡೆಯನಾಗಿದ್ದು, ಈ ಪರಮೋಚ್ಚ ದೇವತೆಯು ಮಾನವನ ಊರ್ಧ್ವಾತಿಊರ್ಧ್ವ ಗಮನಕ್ಕೆ ಅಂದರೆ ಆ ತುರೀಯಕ್ಕೆ ಮಾರ್ಗದರ್ಶಿಯಾಗಿದ್ದಾನೆ. ಅವನಿರುವ ಸ್ಥಾನಕ್ಕೆ "ಪರಾರ್ಧ" ಅಥವಾ "ಸಚ್ಚಿದಾನಂದ" ಎಂದು ನಿರ್ಧರಣೆ ಇದೆ.

ಯಜ್ಞ ಎನ್ನುವಲ್ಲಿನ "ನ" ಎನ್ನುವದು ಪ್ರತ್ಯಯ(Nominal Suffex)ವಾಗಿದೆ. ಇದು ಕರ್ಮ/ಕರ್ತವ್ಯದ ಪ್ರಧಾನಾಂಶದಲ್ಲಿ ರೂಪಿತಗೊಂಡಿದೆ. ಇದು ವಿಶೇಷಣದ ರೂಪದಲ್ಲಿಯೂ ಇರಬಹುದು ಅಥವಾ ಇರದೆಯೂ ಇರಬಹುದು. ಹೀಗಾಗಿ, ಇದು ಇಲ್ಲಿ ಕ್ರಿಯಾಪ್ರವೃತ್ತನಾಗಿರುವವನನ್ನು, ಅಂತಹ ಉಪಕರಣವನ್ನು ಅಥವಾ ಪದ್ಧತಿಯನ್ನು ಅಥವಾ ಅಂತಹ ವ್ಯವಸ್ಥೆಯಲ್ಲಿ ಬಾಧಿತಗೊಳ್ಳುವವನನ್ನು ಸಂಕೇತಿಸುತ್ತದೆ. ಹೀಗಾಗಿಯೇ "ಯಜ್ಞಃ" ಎನ್ನುವದಕ್ಕೆ ನಿಯಂತ್ರಿಸುವವ (ಆಳ್ವಿಕೆ

ನಡೆಸುವವ), ಪ್ರಶಾಸನಗೊಳಿಸುವವ, ಅಥವಾ ಒಡೆಯನೆಂದು ಅರ್ಥವ್ಯಾಪ್ತಿ ಇದೆ. ಜೊತೆಜೊತೆಗೆ ಪ್ರೀತಿಸುವ, ಆರಾಧಿಸುವ, ಗೌರವಿಸುವ ಮತ್ತು ಆರಾಧಿಸಲ್ಪಡುವವನು ಎಂದೂ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ. ಪ್ರಭುತ್ವವನ್ನು ಪಡೆಯುವ ಮಾರ್ಗಗಳು ಮತ್ತು ಅದೇ ತೆರನಾಗಿ ಯೋಗವೂ ಆಗಿದೆ. ಆದರೆ ಇದು, ಅದರ ಪ್ರಕ್ರಿಯೆಗಳಲ್ಲಿ ಮಾತ್ರವೇ ವಿನಾ ಸಾಕ್ಷಾತ್ಕಾರದ ವಿಷಯದಲ್ಲಿ ಮಾತ್ರ ಅಲ್ಲವೆ ಅಲ್ಲ. ಈ ಪ್ರಭುತ್ವದ ಮಾದರಿ ಮತ್ತು ಅದರಂತೆ ಧರ್ಮ, ಅನುಷ್ಠಾನಿಸಲು ಇರುವ ನಿಯಮಗಳು ಅಥವಾ ಸ್ವಯಂ – ಪ್ರಶಾಸನಕ್ಕೊಳಪಡುವ(ಸ್ವ–ತಂತ್ರ)ವಾಗಿದೆ. ಆರಾಧನೆ ಅಥವಾ ಆರಾಧನಾ ಕ್ರಿಯೆಯಲ್ಲಿ ಯಜ್ ಎನ್ನುವ ಅರ್ಥದಲ್ಲಿ ಬಳಕೆಯಲ್ಲಿ ಇದ್ದು ಅದನ್ನು “ಯಜ್” ಪ್ರತಿನಿಧಿಸುತ್ತಿತ್ತು. ಇವೆಲ್ಲ ಹಿನ್ನಲೆಯಲ್ಲಿ “ಕೊಡುವ”, “ದತ್ತವಾಗಿಸುವ”, “ಸಮರ್ಪಿಸುವ” ಎನ್ನುವ ಅರ್ಥಗಳಿವೆ.

ಈ ಎಲ್ಲ ವಿಶ್ಲೇಷಣೆಗಳ ಹಿನ್ನಲೆಯಲ್ಲಿ, ವಿಷ್ಣು ಪದವನ್ನು ಗಮನಿಸಿದರೆ, ಇದು ಸರ್ವಕ್ಕೂ ಆಧಾರಭೂತವಾಗಿ, ಸರ್ವಸ್ವವನ್ನೂ ನಿರ್ದೇಶಿಸುವ, ಕ್ರೋಢೀಕರಿಸುವ, ಮತ್ತು ಪ್ರಶಾಸನಗೊಳಿಸುವವ ಎಂದರ್ಥವಿದೆ. ಆದರೆ ಪ್ರೀತಿಸುವ ಅಥವಾ ಪ್ರೀತಿಸಲ್ಪಡುವ, ಕೊಡುವವನೂ ಅವನೇ ಜೊತೆಗೆ ಎಲ್ಲ ಕರ್ಮಗಳ ಮೂಲ ಉದ್ದೇಶವೂ ಅವನೇ ಆಗಿರುವದರಿಂದ ಪದ್ಧತಿಗಳ ಮತ್ತು ಆರಾಧನೆಯ ಮೂಲಕ ಎಲ್ಲ ಕರ್ಮಗಳೂ ಸಹಿತ ಆರಾಧಿಸುವವನ ಜೊತೆಜೊತೆಗೆ ಸೇರಿಕೊಳ್ಳುತ್ತ ಮತ್ತೆ ಕೆಲವೇ ಅವಧಿಯಲ್ಲಿ ಅವೇ ಪ್ರಧಾನಾಂಶವಾಗಿ ಮುಂದುವರೆದ ವಾತಾವರಣ ನಿರ್ಮಾಣಗೊಂಡಿತು. **ವಿಷ್ಣು ಪುರಾಣ**ದ ಪ್ರಕಾರ, ಸತ್ಯಯುಗದಲ್ಲಿ ವಿಷ್ಣುವು “ಯಜ್ಞ”ವಾಗಿ ಅವತರಿಸಿದ್ದಾನೆ; ತ್ರೇತಾ ಯುಗದಲ್ಲಿ ವಿಜಯಶಾಲಿಯಾದ ಸಾಮ್ರಾಟನಂತೆ ಅವತರಿಸಿದ್ದಾನೆ; ದ್ವಾಪರ ಯುಗದಲ್ಲಿ ವೈಶ್ಯನಾಗಿ – ಸಂಗ್ರಹಕಾರನಾಗಿ, ಸರ್ವಸ್ವವನ್ನೂ ಸಂಹಿತಾಕ್ರಮಕ್ಕೆ ಒಳಪಡಿಸಿ (Codification) ವಿಧಿಗಳನ್ನು ರೂಪಿಸಿದ್ದಾನೆ. ಹೀಗೆಂದು ಇವನೇ ಬಲಿ/ಸಮರ್ಪಣೆಯ ಮೂಲಕ ಅವತರಿಸುತ್ತಾನೆ ಎಂದರ್ಥವಲ್ಲ.

ಸತ್ಯಯುಗವೆನ್ನುವದು ಪರಿಪೂರ್ಣತೆಯ ಯುಗವಾಗಿದ್ದು, ಅದೂ ಪ್ರಕೃತಿಸಹಜ ಸೌಷಮ್ಯದಲ್ಲಿಯೇ ನಿಯತಿಯ ಆಣತಿಯಂತೆಯೇ ಸಹಜವಾಗಿ ರೂಪಿತಗೊಂಡು ಸ್ಥಾಪಿಸಲ್ಪಟ್ಟಿತ್ತು. ಈ ಪರಿಪೂರ್ಣತೆಯನ್ನು “ಚತುಷ್ಪಾದ ಧರ್ಮ” ಎಂದು ಕರೆಯುತ್ತಾರೆ. ಇದು ಯೋಗದ ಮೂಲಕ ಲಭ್ಯವಾಗುವ

ವಿಶ್ವಾತ್ಮಕ ಅಂಶಗಳ ಅಧಿಪತ್ಯದಲ್ಲಿಯೇ ಅಥವಾ ನೇರಾನೇರ ದೇವತೆಯೊಂದಿಗೆ ನೇರ ಸಂಪರ್ಕ ಹೊಂದಿ ರೂಪಿತಗೊಂಡಿತ್ತು. ಜೊತೆಗೆ ಈ ಅವತಾರತ್ವವು ನಿರಂತರವಾಗಿ ಜರುಗುತ್ತಿರುವ ವ್ಯಾಪ್ತಿಯಲ್ಲಿ ವಿಷ್ಣುವು ಆರಾಧಿಸಲ್ಪಡುತ್ತಿದ್ದನು. ಹೀಗಾಗಿಯೇ ವಿಷ್ಣುವಿಗೆ ಜಗತ್ತಿನ ಒಡೆಯ, ಧರ್ಮದ ಮತ್ತು ಯೋಗದ ಪ್ರಭು ಎಂದು ಕರೆಯಲಾಗುತ್ತಿದೆ. ಈ ಚತುಷ್ಪಾದ ಧರ್ಮವು **ಬ್ರಾಹ್ಮಣ್ಯಂ, ಕ್ಷಾತ್ರಂ, ವೈಶ್ಯಂ ಮತ್ತು ಶೂದ್ರಂ** ತತ್ವಗಳ ಸೌಷಮ್ಯಸಹಿತವಾದ ಪರಿಪಕ್ವ ಸಂಯೋಜಿತ ಅವಸ್ಥೆ/ ವ್ಯವಸ್ಥೆಯಾಗಿದೆ. ಹೀಗಾಗಿಯೇ ಸತ್ಯಯುಗದಲ್ಲಿ ಯಾವುದೇ **"**ಜಾತಿ ವ್ಯವಸ್ಥೆ**"** ಇರಲೇ ಇಲ್ಲ!. ತ್ರೇತಾದಲ್ಲಿ ಬ್ರಾಹ್ಮಣ್ಯವು ಶಿಥಿಲಗೊಳ್ಳಲು ಪ್ರಾರಂಭಿಸಿತು. ಆದರೆ ಕ್ಷತ್ರಿಯ ವ್ಯವಸ್ಥೆಗೆ ಪೂರಕವಾಗಿ ಕಾರ್ಯದಲ್ಲಿ ತೊಡಗಿ – ಮಾನವ ಧರ್ಮವನ್ನು ರಕ್ಷಿಸುವ – ಕ್ಷತ್ರಿಯರಿಗೆ ಸಹಾಯ ಮಾಡತೊಡಗಿದರು. ಕೇವಲ ಪರಂಪರಾಗತವಾಗಿ ರೂಪುಗೊಂಡ ಬ್ರಹ್ಮಜ್ಞಾನವು ಕೇವಲ ತಪಸ್ಸು ಅಥವಾ ವೀರ್ಯಂದಿಂದಲೇ ಮಾನವನ ಕುಲವನ್ನು ರಕ್ಷಿಸಲು ಸಾಧ್ಯವಾಗುವದಿಲ್ಲ. ಆದರೆ ಅದೇ ತಪಸ್ಸಿನ ಸಹಾಯದಿಂದ ಬ್ರಹ್ಮಜ್ಞಾನದ ಕುಸಿತವನ್ನು ತಡೆಯಬಹುದು. ಅದಕ್ಕೆ ಬರುವ ಅಡೆ–ತಡೆಗಳನ್ನು ಎದುರಿಸಬಹುದು ಎಂದಾಯಿತು.. ಇದಕ್ಕಾಗಿಯೇ ವಿಷ್ಣುವು(ಯಜ್ಞವು) ತ್ರೇತಾಯುಗದಲ್ಲಿ ಕ್ಷತ್ರಿಯನಾಗಿ ಅವತರಿಸುವಂತಾಯಿತು. ವೀರ್ಯತ್ವ ಮತ್ತು ತಪಸ್ಸು ಎರಡನ್ನೂ ಮೇಳೈಸಿದ ವ್ಯಕ್ತಿತ್ವವಾಗಿ ತ್ರೇತಾಯುಗದಲ್ಲಿ ಅವತರಿಸಿದ ಯಜ್ಞವು ವಿಷ್ಣುವಾಗಿ ಮುಂದುವರೆಯಿತು.

ದ್ವಾಪರ ಯುಗದ ಅವಧಿಯಲ್ಲಿಯೂ ಬ್ರಾಹ್ಮಣ್ಯ ಮತ್ತೂ ಕುಸಿಯುತ್ತ ಬಂದಿತು. ಇದ ಕೇವಲ ಜ್ಞಾನ ಅಥವಾ ಪ್ರತಿಭೆಯ ಹಂತಕ್ಕೆ ಮಾತ್ರ ಸೀಮಿತಗೊಂಡಿತು. ಈ ಅವಧಿಯಲ್ಲಿ ಕ್ಷತ್ರಿಯ ವ್ಯವಸ್ಥೆಯೂ ಸಹಿತ ಕ್ಷೀಣಗೊಂಡು, ವೈಶ್ಯ ವ್ಯವಸ್ಥೆಯ ಸ್ಥಿತಿಗೆ ಪೂರಕವಾಗಿ ಕಾರ್ಯಗಳನ್ನು ನಿರ್ವಹಿಸುವಂತಾಯಿತು. (ಶ್ರೀ ಕೃಷ್ಣನನ್ನು ಈ ಹಂತದಲ್ಲಿ ಗಮನಿಸಬೇಕಿದೆ). ಹೀಗಾಗಿ ಈ ಅವಧಿಯಲ್ಲಿ, ವೈಶ್ಯ ವ್ಯವಸ್ಥೆಯೇ ಮುಂಚೂಣಿಗೆ ಬಂದಿತು. ಈ ವೈಶ್ಯ ವ್ಯವಸ್ಥೆಯ ಮುಖ್ಯ ಲಕ್ಷಣಗಳೆಂದರೆ – ಕೌಶಲ್ಯ, ನಿಯಮಿತತನ ಮತ್ತು ಅನುಕ್ರಮಣಿಕೆಯಾಗಿತ್ತು. ಹೀಗಾಗಿ, ದ್ವಾಪರ ಎನ್ನುವದು ಸಂಹಿತಾಕರಣ (Codification), ಆರಾಧನಾ ಪದ್ಧತಿಗಳು, ಶಾಸ್ತ್ರಗಳು, ಅಂತರಂಗಿಕವಾಗಿ ದೈವೀ ಚಿಂತನಕ್ಕೆ ಬಾಹ್ಯ ರೂಪದಲ್ಲಿ ರಕ್ಷಣಾ ವ್ಯವಸ್ಥೆಯ ವಿಧಿ–ವಿಧಾನಗಳು, ಕ್ರಿಯೆಗಳು ರೂಪುಗೊಂಡವು. ದಾನದ ಕಲ್ಪನೆ ರೂಪುಗೊಂಡದ್ದೇ ದ್ವಾಪರ ಯುಗದ ಅವಧಿಯಲ್ಲಿ ಎನ್ನುವದು

ಮುಖ್ಯವಾದ ಸಂಗತಿಯಾಗಿದೆ. ಅದೆ ತೆರನಾಗಿ ಆತಿಥ್ಯ, ಮುಕ್ತತೆ, ಸಮರ್ಪಣೆ, ದಕ್ಷಿಣೆಗಳು ರೂಪು ತಳೆದವು. ಇವುಗಳು ರೂಪುಗೊಂಡಿದ್ದಷ್ಟೇ ಅಲ್ಲದೇ, ಇತರ ಧರ್ಮಗಳನ್ನು (ನಿಯತಿ, ವಿಶ್ವ ನಿಯಮಗಳನ್ನು) ನುಂಗಿ, ಮತ್ತೆ ಮೇಲಾಗಿ ಹೀಗಿರುವದೇ ಯಜ್ಞ, ಹೀಗಿರುವದೇ ಯೋಗ ಎಂದು ಸಾರಿ, ಬಲಿ ಅಥವಾ ಸಮರ್ಪಣೆಯ ಯುಗವನ್ನಾಗಿಸಲಾಯಿತು. ಹೀಗಾಗಿ ಭೋಗ ಎನ್ನುವ ವೇದದ ಶಬ್ದವನ್ನು, ಇಹದಲ್ಲಿ ಸುಖ–ರಂಜನೆ ಮತ್ತು ಪರದಲ್ಲಿಯೂ ಸುಖವೆಂದು ರೂಪಾಂತರಿಸಲಾಯಿತು. ಇದನ್ನೇ "ಭೋಗೈಶ್ವರ್ಯಗತಿಂಪ್ರತಿ" ಎನ್ನುವದು.

ಆದರೆ ಇದೇ ಅವಧಿಯಲ್ಲಿ ವಿಷ್ಣುವು ವಿಶ್ವ ನಿಯಾಮಕನಾಗಿ, ವಿಶ್ವ ನಿಯಮಗಳ ಕರ್ತೃವಾಗಿ, ವೈದಿಕ ವಿಧಿ–ವಿಧಾನಗಳ ರೂಪಣೆ ಕಾರನಾಗಿ–ಶಾಸ್ತ್ರಕಾರನಾಗಿ, ಅಭ್ಯಾಸ ಮತ್ತು ಪ್ರಜ್ಞಾಪೂರ್ಣವಾದ ಅನುಷ್ಠಾನಗಳ ಮೂಲಕ ಜ್ಞಾನವನ್ನು ಮತ್ತು ಧರ್ಮದ ಅನುಷ್ಠಾನವನ್ನು ರಕ್ಷಿಸಲು ಯತ್ನಿಸಿದನು. ಪರಂಪರಾಗತವಾಗಿ ಆಚರಿಸಲ್ಪಡುವ ವಿಧಾನಗಳು ಸಹಿತ ಪ್ರಜ್ಞಾಪರಿಧಿಯಲ್ಲಿ ರೂಪಿತಗೊಂಡ ನೀತಿಗಳ ಪ್ರಕಾರವೇ ಅನುಷ್ಠಾನಗೊಳ್ಳುವಂತೆ ರೂಪಿಸಿದನು.

**ಕಲಿಯುಗದ ಅವಧಿಯಲ್ಲಿ "ಪ್ರೇಮ" ಮತ್ತು "ಸೇವೆ" ಎಂದರೆ ಯಜ್ಞ:**

ಇನ್ನು ಕಲಿಯುಗದಲ್ಲಿ, ಪ್ರೇಮ ಮತ್ತು ಸೇವೆಗಳನ್ನು ಹೊರತುಪಡಿಸಿ ಉಳಿದುದೆಲ್ಲವೂ ನಷ್ಟಗೊಂಡವು. ಶೂದ್ರತ್ವದ ವ್ಯವಸ್ಥೆಯಲ್ಲಿ ಮಾನವೀಯತೆಯ ರಕ್ಷಣೆಯ ಕ್ರಿಯೆಗಳಲ್ಲಿ ರೂಪಾಂತರ ಹೊಂದಿತು. ಇದೇ ವರ್ಗದಿಂದಲೇ ಆಗಾಗ ಪರಿಷ್ಕರಣೆಗೂ ಒಳಪಟ್ಟಿತು. ಜ್ಞಾನವೆನ್ನುವದು ಆತ್ಮಗತದ ಹಂತದಿಂದ ಇಳಿದು ಕೇವಲ ಶಬ್ದಜ್ಞಾನದ ಹಂತಕ್ಕೆ ತಲುಪಿತು. ಜ್ವಲಂತ ಜೀವನದ ಪದ್ಧತಿಯಿಂದಾಗಲೀ, ಅನುಷ್ಠಾನಗೊಳ್ಳುತ್ತಿರುವ ಪದ್ಧತಿಗಳಿಂದಾಗಲೀ ವೀರ್ಯಂ ಅಥವಾ ತಪಸ್ಸು ಅಥವಾ ಸಾಧನೆಯೆನ್ನುವದು ವ್ಯಕ್ತಿಯ ನೆಲೆಯಿಂದ ಬದಲಾಗಿ, ಜಡಸ್ವಭಾವದ ಯಾಂತ್ರಿಕ – ಉಪಕರಣಗಳ ಅನ್ವಯಿಕೆ ಪ್ರಾರಂಭವಾಯಿತು (ದೇವಸ್ಥಾನಗಳಲ್ಲಿ ಯಂತ್ರದಿಂದ ಭಜನಾ/ವಾದ್ಯ–ಸಂಗೀತ ಸೇವೆ). ಒಟ್ಟಿನಲ್ಲಿ ಯಂತ್ರಗಳ ಉಪಯೋಗದಿಂದ ಕಡಿಮೆ ಶ್ರಮದಲ್ಲಿ ಬದುಕು ರೂಪಿಸಿಕೊಳ್ಳ–ಬಹುದೆನ್ನುವ ಮನೋಭಾವ ರೂಪುಗೊಂಡಿತು. ಇವೆಲ್ಲವೂ ನಿರ್ಜೀವ ಕ್ರಿಯೆಗಳಾಗಿದ್ದರೂ ಸಹಿತ, ಇದೇ ಆಧುನಿಕತೆ ಎನ್ನುವ ರೀತಿಯಲ್ಲಿ ಸಾರ್ವತ್ರೀಕರಣಗೊಳಿಸಲಾಯಿತು. ದಾನ, ಯಜ್ಞ ಮತ್ತು ಶಾಸ್ತ್ರಗಳು ಸಂಪೂರ್ಣ ಮೂಲೆಗುಂಪಾಗಿ,

ಪೂರ್ವನಿಯೋಜಿತದಲ್ಲಿ ಸಂಯೋಜಿಸಲ್ಪಟ್ಟ ನಿಯಮಿತ ಸ್ವಾತಂತ್ರ್ಯದ ಮೂಲಕ ಬದುಕಿನ ನಿಯಮಗಳನ್ನು ರೂಪುಗೊಳಿಸಲಾಯಿತು. ಹೀಗಾಗಿ ಇಂದು, ಖಾಲಿಖಾಲಿತನದಲ್ಲಿ ಆಚರಿಸಲ್ಪಡುತ್ತಿರುವ ಆರಾಧನಾ ವಿಧಾನಗಳು ಮತ್ತು ತಾಮಸವೇ ಅಧಿಕಾಧಿಕವಾಗಿರುವ ಸಾಮಾಜಿಕ ಮನೋರಂಜನಾ ಶ್ರೇಣಿಗಳು ಮತ್ತು ಶಿಷ್ಟಾಚಾರಗಳಲ್ಲಿಯೂ ಸಹಿತ ಇವುಗಳನ್ನು ರೂಪುಗೊಳಿಸಲಾಯಿತು.

ಇಂತಹ ಅವಧಿಯಲ್ಲಿ "ಪ್ರೇಮ"ದ ಸ್ವರೂಪದಲ್ಲಿ ಅವತಾರ ರೂಪಣೆಗೊಂಡಿತು. ವಿಚಲನೆಗೊಂಡು ಅಧಃಪತನಗೊಳ್ಳುತ್ತಿದ್ದ ಜ್ಞಾನದ ಗತಿಯನ್ನು ಮೃತಸದೃಶ ಸಂಗತಿಗಳನ್ನು ತಡೆದು ಪುನರ್–ರೂಪಿಸಲು ಯತ್ನಿಸಲಾಯಿತು. ಇದರ ಮೂಲಕವೇ ಜಗತ್ತು ಮತ್ತೆ ಬಲಯುತವಾಗಿ, ಸತ್ವಯುತವಾಗಿ ಪರಿವರ್ತನೆಗೊಂಡು, ನವೀನ ಮಾದರಿಯಲ್ಲಿ ಅಸ್ತಿತ್ವ ಪಡೆದು, ನೂತನ ನಿಯಮಗಳಲ್ಲಿ ಸಾಕಾರಗೊಂಡು, ಮತ್ತೊಂದು "ಸತ್ಯಯುಗ"ದ ಆಗಮನಕ್ಕಾಗಿ ಈ ಪ್ರೇಮದ ರೂಪದಲ್ಲಿ ದೇವತೆಯಾಗಿ ಅವತರಿಸುತ್ತಿರುವದೇ ಈಗಿನ ಯಜ್ಞವಾಗಿದೆ. ಇದು ಯಜ್ಞದ ಇಂದಿನ ಅರ್ಥವಾಗಿದೆ. ಹೀಗಾಗಿ ವಿಷ್ಣು(ಯಜ್ಞ) ಎನ್ನುವದು ಚತುಷ್ಪಾದದ ಪರಿಪೂರ್ಣ ರೂಪಾಂತರದ ಹಂತ ಇದಾಗಿದ್ದು – ಇದೇ ಜ್ಞಾನ, ಶಕ್ತಿ, ತೋಷ ಮತ್ತು ಪ್ರೇಮಗಳ ಸಂಗಮವಾಗಿ ಮಾನವನ ಬದುಕು ರೂಪುಗೊಂಡಿದೆ.

ಪ್ರಸ್ತುತದ ವಿಕಸನದ ಅವಧಿಯಲ್ಲಿ ವಿಷ್ಣುವು ಪೂರ್ವಾಧಾರಿತವಾಗಿರುವ ಆನಂದ ದೇವತೆಯಾಗಿದ್ದಾನೆ. ಆದರೆ, ಈಗಿರುವ ವಿಷ್ಣುತ್ವದ ಸ್ವರೂಪವು ಸತ್–ಮಯ(ಸನ್ಮಯ) ಬ್ರಹ್ಮನ್ ಮತ್ತು ತಪೋಮಯತೆಯ ಸ್ವರೂಪದಲ್ಲಿ ರೂಪುಗೊಂಡಿದೆ. ಸನ್ಮಯದ ರೀತಿಯಲ್ಲಿ ಅವನು ಯಜ್ಞವಾಗಿದ್ದಾನೆ. ಏಕೆಂದರೆ ಸತ್ ಎನ್ನುವದು ಚಿತ್ ಅಥವಾ ತಪಸ್ಸಿನಲ್ಲಿಯೇ ಮತ್ತು ಆನಂದದಲ್ಲಿಯೇ ಒಳಗೊಂಡಿರುತ್ತದೆ. ಆದರೆ ಇಲ್ಲಿ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿ ಎಂದರೆ, ಅಪರಾರ್ಧದ ಹಂತದಲ್ಲಿ ಇರುವಾಗ, ನಾವು ಚಿಂತನದ ಮೂಲಕ, ಕರ್ಮದ ಮೂಲಕವಾಗಿ ವಿಮೃಶತ್ವಗೊಳಿಸಿಕೊಂಡು (Envisage) ಅಥವಾ ಧ್ಯಾನಿಸಿಕೊಂಡು ಅನುಭಾವದ ಮೂಲಕ, ಕರ್ಮದ ಮೂಲಕ ಬ್ರಹ್ಮನನ್ನು ಅರ್ಥೈಸಿಕೊಳ್ಳುತ್ತೇವೆ. ಇನ್ನು ಪರಾರ್ಧದಲ್ಲಿ ಚಿಂತನಕ್ಕೂ ಅತೀತನಾದ ಮೂಲತತ್ತ್ವದ ಸಾಕ್ಷಾತ್ಕಾರದೊಡನೆ, ಅನುಭವದೊಡನೆ ಮತ್ತು ಕರ್ಮದೊಡನೆ ಸಾಕ್ಷಾತ್ಕರಿಸಿಕೊಳ್ಳುತ್ತೇವೆ.

ಆನಂದದಲ್ಲಿ ನಾವು ಸಾರಭೂತವಾದ (ಮೂಲಭೂತವಾದ) ಅನುಭೂತಿಯ ಹಂತವನ್ನು ಕಾಣುತ್ತೇವೆ. ಇನ್ನು ಚಿತ್ ಹಂತದಲ್ಲಿ ಮೂಲಭೂತ ಶಕ್ತಿ, ಜಾಣತನ ಮತ್ತು ಕೃತುಶಕ್ತಿಯನ್ನು ಪಡೆಯುತ್ತೇವೆ. ಸತ್ ಹಂತದಲ್ಲಿ ಮೂಲಭೂತ ಋತವನ್ನು ಅಥವಾ ಬದುಕಿನಲ್ಲಿ ಕಾಣುವಂತೆ ಇರುವ ಸಂತ್ಯವನ್ನು ಮತ್ತು ಅಸ್ತಿತ್ವವನ್ನು (be-ness) ಕಾಣುತ್ತೇವೆ. ಹೀಗಾಗಿ ಈ ಸತ್ ಅನ್ನು ಮಹಾಸತ್ಯ ಅಥವಾ ಪರಬ್ರಹ್ಮನ್ ಎಂದು ಪರಿಗಣಿಸುತ್ತೇವೆ. ಇದು ಸತ್ಯದ ರೂಪಾಂತರಗಳಲ್ಲಿ ತುರೀಯಾವಸ್ಥೇಯ ಹಂತವಾಗಿರುತ್ತದೆ. ಇದರಲ್ಲಿಯೇ ಸರ್ವಲೋಕವೂ ವಿಕಸನಗೊಳ್ಳುತ್ತವೆ.

ಈ ಮಹಾಸತ್ಯವೇ(ಸಂತ್ಯವೆ) ವಾಸ್ತವದ ಸತ್ಯಕ್ಕಿಂತ, ಕಾರಣಕ್ಕಿಂತ ಭಿನ್ನ ಸ್ವರೂಪವಾಗಿದ್ದು, ಇದನ್ನು ಪರಿದೃಶ್ಯಮಾನವಾಗಿ (Objectively) ಮಹತ್ ಎಂದೂ, ವಸ್ತುನಿಷ್ಠವಾಗಿ (Subjectively) ವಿಜ್ಞಾನವೆಂದೂ ಕರೆಯಲಾಗಿದೆ. ಇದು ಸಪ್ತ ಸ್ತರಗಳಲ್ಲಿ ನಾಲ್ಕನೇ ಹಂತದಲ್ಲಿ ಕಾಣುತ್ತೇವೆ. (ವಿವರಗಳಿಗೆ; "ತಮಸಪ್ತಕದಿಂದ ಜ್ಞಾನ–ಸಪ್ತಕದೆಡೆಗೆ" ನೋಡಿ). ಇದೇ ವಿಷ್ಣುತತ್ತ್ವವು ಯಜ್ಞ ಸ್ವರೂಪದಲ್ಲಿ ಧರ್ಮಕ್ಕೆ ಮತ್ತು ಯೋಗಕ್ಕೆ ಸತ್ಯಯುಗದಲ್ಲಿ ಸಹಕಾರಿಯಾಗಿತ್ತು. ಬರಲಿರುವ ಸತ್ಯಯುಗದಲ್ಲಿಯೂ ಸಹಕಾರಿಯಾಗಿರುತ್ತದೆ. ಈ ಅಂಶವೇ ರೂಪಾಂತರದಲ್ಲಿ ಸದ್–ಬ್ರಹ್ಮನ್ ಆಗಿದ್ದಾನೆ. ಹೀಗಾಗಿ ಋಕ್ಕಿನಲ್ಲಿ ಬರುವ "ಋತ್ವಿಜಮ್" ಶಬ್ದವು, ಈ ಎಲ್ಲ ಅರ್ಥಗಳ ಹಿನ್ನೆಲೆಯಲ್ಲಿ ಅಗ್ನಿಯಾಗಿ ವಿಶ್ವದೇವನ ಸಮಕ್ಷಮದಲ್ಲಿ ನೆಲೆಸಿದೆ.

**ದೇವಮ್:**

ದೇವ, ದಿವ್ಯ ಎನ್ನುವ ಮೂಲದಿಂದ ವ್ಯುತ್ಪತ್ತಿಯಾಗಿದ್ದು, ಇದು ಸ್ಫುರಣ, ದೀಪ್ತ, ಉಜ್ವಲ, ಆಂದೋಲಿತ, ಲೀಲೆ–ಆಟ ಎನ್ನುವ ಅರ್ಥವ್ಯಾಪ್ತಿಯಲ್ಲಿ ಬಳಕೆಯಲ್ಲಿ ಇದೆ. "ದ್" ವ್ಯಂಜನವು ಮತ್ತು ಇದು ರೂಪುಗೊಂಡ ಆಧಾರದಲ್ಲಿ ಇದರ ಅರ್ಥವು – ಬಲ(Force), ಗುರುತರ, ದೀರ್ಘವಾಗಿ, ಕತ್ತರಿಸು(ಭೇದಿಸು), "ದಿ" ಎಂದರೆ ಡೋಲಾಯಮಾನ, "ದು" ಎನ್ನುವಲ್ಲಿ ತೊಂದರೆ ಕೊಡುವ ಅರ್ಥಗಳನ್ನು ಪಡೆಯುತ್ತ ಬೆಳೆಯಿತು. "ದಿ"ದ ಸಹಕಾರದಿಂದ "ದ್ಯು" ಮತ್ತು "ದಿವ" ಅಥವಾ "ದಿವ್" ವ್ಯುತ್ಪತ್ತಿಗೊಂಡಿವೆ. ದೀವ್ ಅಥವಾ ದಿವ್ ಎಂದರೆ – ಮಿಂಚು ಕಾಂತಿಯಿಂದ ಡೋಲಾಯಮಾನವಾದ, ಸಂಚಲನೆಯಲ್ಲಿರುವ,

ಹೊಳೆಯುವ, ಮಿನುಗುವ, ಸ್ಫುಲಿಂಗತ್ವದ(scientilallate), ಅಥವಾ ಕ್ರೀಡಾಯುಕ್ತ ಎನ್ನುವ ಅರ್ಥಗಳಿವೆ. ಜವತ್ವ(Heavy velocity), ಸಾಂದ್ರತೆ, ನಿಗೂಢ ವ್ಯಾಪ್ತಿತ್ವದ, ನಿರಂತರ ಚಲನೆಯ ಎನ್ನುವ ಗುಣಸಮೂಹಗಳಿವೆ. ಇದೇ "ದಾ"ದಲ್ಲಿ ದೀ–ದೇವತೆಗಳು ಎಂದರೆ ಪ್ರಕಾಶದಲ್ಲಿ ಲೀಲೆಯಲ್ಲಿ ಇರುವವರು ಎಂದರ್ಥವಿದೆ. ಇವರ ಮೂಲ ನೆಲೆಯೇ ವಿಜ್ಞಾನವಾಗಿದೆ, ಇದನ್ನೇ ಮಹರ್–ಲೋಕ ಎನ್ನುತ್ತಾರೆ. ಇದೇ ಕಾರಣ – ಜಗತ್ ಕೂಡಾ ಆಗಿದೆ. ಇಲ್ಲಿನ ದ್ರವ್ಯ(ಸ್ಥೂಲ ದ್ರವ್ಯ/ಭೌತಿಕ ವಸ್ತು)ಗಳೆಲ್ಲ ಜ್ಯೋತಿರ್ಮಯ ಸ್ವರೂಪದಲ್ಲಿ ಇದ್ದು, ಸರ್ವ ವಸ್ತುಗಳೆಲ್ಲವೂ ಕಾಂತಿಮಯತೆಯಿಂದ (ಸ್ವೇ ಧಾಮ್ನಾ), ತಮ್ಮದೇ ಅಸ್ಮಿತೆಯ(ಅಂತರ್ಜಾತ ಸ್ವಭಾವ) ಗುಣದಿಂದಾಗಿ ಸದಾ ದ್ಯುತಿಮಯವಾಗಿರುತ್ತವೆ (ದೀಪ್ತಿಮಯವಾಗಿರುತ್ತವೆ). ಈ ಮೂಲಕವೇ ಜೀವ(ನ)ವು ಒಂದು ನಿಯತಿಗನುಗುಣವಾಗಿ ರೂಪಿತಗೊಂಡಿರುವ ಲೀಲೆಯಂತೆ ರೂಪುಗೊಳ್ಳುತ್ತದೆ. ಆದ್ದರಿಂದ, ಸ್ವರ್ಗದಲ್ಲಿರುವ ದೇವತೆಗಳ ಜೀವನವನ್ನು ಅವರ ಶಕ್ತಿಯನ್ನು (ದೇವಕ್ರೀಡಾದರ್ಶನಮ್) ನಿರ್ದಿಷ್ಟ ಪಡಿಸಿದ ಸಿದ್ಧಿಯ ಮೂಲಕ ಪ್ರಚುರಗೊಳಿಸುತ್ತದೆ. ಈ ಎಲ್ಲ ಲೀಲೆಗಳೂ, ಜೊತೆಗೆ ಜೀವನವೂ ಸಹಿತ ಆ ದೇವನ ಲೀಲೆಗಳೇ ಆಗಿವೆ. ಆದಾಗ್ಯೂ, ಎಲ್ಲ ದೇವತೆಗಳೂ, ನಮ್ಮ ಸಲುವಾಗಿ 'ಅವತರಣಗೊಂಡು' ನಮ್ಮ ಲೋಕಕ್ಕೆ (ಮೃಣ್ಮಯದ ಲೋಕಕ್ಕೆ) ಅಂದರೆ ಸ್ವರ್ಲೋಕದ ಕೆಳಗಿನ ಸ್ತರಕ್ಕೆ ಬರುತ್ತಾರೆ. ಈ ಹಂತವನ್ನೆ "ಚಂದ್ರಲೋಕ" ಎನ್ನುತ್ತಾರೆ. ಈ ಚಂದ್ರಲೋಕದ ಮೇರುಸ್ಥಾನ ಕೈಲಾಸ. ಇದು ಸ್ವರ್ಗದ ಆಧಾರ ಭೂಮಿಯೂ ಹೌದು. ಈ ಸ್ವರ್ಗವೂ ಸಹಿತ ಪಿತೃಲೋಕಕ್ಕೆ ಸಮೀಪದಲ್ಲಿಯೇ ಎತ್ತರದಲ್ಲಿದೆ. ಆದಾಗ್ಯೂ ಸಹಿತ, ಅವರು(ದೇವತೆಗಳು) ತಮ್ಮ ಜ್ಯೋತಿರ್ಮಯತ್ವವನ್ನೂ ಮತ್ತು ಕಾಂತಿಪೂರ್ಣ ದೇಹಗಳನ್ನು ಮತ್ತು ಸಾವು–ನೋವುಗಳಿಲ್ಲದ ಜೊತೆಗೆ ಮುಕ್ತವಾಗಿರುವ ಸ್ವಯಂಸೃಷ್ಟಿಗೊಂಡು ಅಸ್ತಿತ್ವದಲ್ಲಿರುವ ಲೋಕಗಳಲ್ಲಿ ನೆಲೆಸುತ್ತಾರೆ.

(ಸಶೇಷ)

## ಶ್ರೀ ಅರವಿಂದರ ಕವನ

# ಯಾರು

ನೀಲಿಮದ ಗಗನದಲಿ ಪಚ್ಚೆಕಾನನದಲ್ಲಿ ಕಾಂತಿಯನು ಚಿತ್ರಿಸಿದೆ ಯಾರ ಹಸ್ತ?
ತಾರೆಯೊಡಲೊಳಗೆ ಸುಪ್ತಿಯಲಿ ಪವನವಿರೆ ಸ್ಫೋಟದಲಿ ಪುಟಗೊಳಿಸಿತಾವ
ಹಸ್ತ?

ಹೃದ್ಗುಹೆಯಲವ ಗೂಢ, ಪ್ರಕೃತಿಯಾ ಗುಹ್ಯದಲಿ, ಬುದ್ಧಿಯಲಿ ದರ್ಶಿತನು, ಚಿಂತನವ
ಬೆಳೆಸಿ
ಪುಷ್ಪಗಳ ಸರಣಿಯಲಿ ವಿಕಸನದ ನೇಯ್ಗೆಯಲಿ ತೇಜ–ತಾರಾ–ಗಡಣ–ಗೂಡಿನಲಿ
ನೆಲೆಸಿ

ಪುರುಷ ಪೌರುಷದೊಳಗೆ, ಲಲನೆ ಲಾವಣ್ಯದಲಿ, ಬಾಲ ಮುದ–ಹಸಿತ, ತರುಣಿಯಾ
ಲಜ್ಜೆಯಲಿ;
ಗುರುಘನದ–ಹಸ್ತದಾ– ನೇಯ್ಗೆ ತಾ ದಿವದಿಂದ, ಚಾತುರ್ಯ ಸರ್ವ ವ್ಯಯ,
ವಿನ್ಯಾಸ ಸುರುಳಿ

ಅವನ ಕರ್ಮವಿವು ಕವಚಗಳು ಜೊತೆ ಛಾಯೆಗಳಿವು; ಆದರೆಲ್ಲಿರುವನವ ನಾಮ
ಇದೆಯೇನೊ?
ಬ್ರಹ್ಮನೋ ವಿಷ್ಣುವೋ ಪುರುಷನೋ ಪ್ರಕೃತಿಯೋ ದೇಹಿಯೋ ನಿರ್ದೇಹಿಯೊ
ಯುಗ್ಮನೇಕನೋ?

ದೇದೀಪ್ಯಮಾನ ಬಾಲ ಶ್ಯಾಮನೆಮಗೆ ಪ್ರಿಯನು, ಉಗ್ರಳಿದೊ ದಿಗಂಬರೆ, ದೇವಿ
ಸಾಮ್ರಾಜ್ಞಿ
ಹಿಮಶಿಖರಗಳ ಮೇಲೆ ನಾವಿದೊ ಸು–ನಾದ ಕಂಡು ಹೃದ್ವಲಯಗಳಲವನ ಕಾರ್ಯ
ಕಂಡು

ನಮ್ಮೆದೆಯ ದುಃಖದಲಿ ಅವನೀಗ ನಗುತಿಹನು ರೋದಿಸಲು ಪ್ರೇರಣೆಯ ನಮಗೆ
ನೀಡಿ
ಅವನದೇ ನಾದ–ಲಯ ತೋಷದಲಿ ತೇಲಲೆನೆ ಅವನ ಸೌಂದರ್ಯ ಸೆಳೆತವನು
ನೀಡಿ

(ಶ್ರೀ ಅರವಿಂದರು ೧೨ ವರ್ಷದವರಿದ್ದಾಗ ಬರೆದ ಕವನದ ಆಯ್ದ ಸಾಲುಗಳು ಇವು)

ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

## "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

10

ಶ್ರೀ ಅರವಿಂದ ಯೋಗಿಗಳು ಪಾಂಡಿಚೇರರಿಗೆ ಬಂದು 4–5 ವರ್ಷಗಳಾದ ಬಳಿಕ ಫ್ರೆಂಚ್ ಮಿತ್ರರಾದ ಎಮ್. ರಿಚರ್ಡರ ಬಿನ್ನಹದ ಮೇರೆಗೆ **"ಆರ್ಯ"** ಎನ್ನುವ ಪತ್ರಿಕೆಯನ್ನು ಪ್ರಕಟಿಸಹತ್ತಿದರು. ಇದು ಇಂಗ್ಲೀಷ ಮತ್ತು ಫ್ರೆಂಚ್ ಭಾಷೆಯಲ್ಲಿ ಹೊರಡುತ್ತದೆ. ಇದು ಶುದ್ಧ ತತ್ತ್ವಜ್ಞಾನ ವಿಷಯಕ ಚರ್ಚೆಯನ್ನಷ್ಟೇ ಮಾಡುತ್ತಿದೆ. ಜಗತ್ತಿನ ವ್ಯವಹಾರಗಳು ಒಂದು ತತ್ವಜ್ಞಾನವನ್ನು ಅವಲಂಬಿಸಿ ನಡೆಯುತ್ತವೆ. ಆ ತತ್ತ್ವಜ್ಞಾನವು ಶುದ್ಧಾತಿಶುದ್ಧವಾಗಿರುವಂತೆ ಅದನ್ನು ಅವಲಂಬಿಸಿ ನಡೆಯುವ ವ್ಯವಹಾರಗಳೂ ಉಚ್ಚ ಅಥವಾ ನೀಚತನದಿಂದ ಕೂಡಿರುತ್ತವೆ, ದೇಶದ ಅವನತಿ ಸ್ಥಿತಿಯ ಕಾಲದಲ್ಲಿ ತತ್ತ್ವಜ್ಞಾನವು ಮಲಿನವಾಗಿರುತ್ತದೆ. ಅದನ್ನು ಶುದ್ಧೀಕರಿಸಿ ಅದಕ್ಕೆ ದಿವ್ಯಸ್ವರೂಪವನ್ನು ಕೊಡುವದು ಮಹತ್ವವಾಗಿರುತ್ತದೆ. ಇಂಥ ಪವಿತ್ರವಾದ ಹಾಗೂ ಮಹತ್ವದ ಕಾರ್ಯವನ್ನು ಮಹರ್ಷಿ ಅರವಿಂದರು "ಆರ್ಯ" ಮಾಸಿಕ ಪುಸ್ತಕದ ದ್ವಾರಾ ಮಾಡುತ್ತಲಿದ್ದಾರೆ. ಈ ಮಾಸಪತ್ರಿಕೆಯು ಅತಿ ಉದಾತ್ತ ವಿಚಾರದ ಲೇಖಗಳನ್ನು ಒಳಗೊಂಡಿರುವದರಿಂದ ಅದು ಒಳ್ಳೊಳ್ಳೆ ಪಂಡಿತರಿಗೆ ಸಹ ಎಷ್ಟರಮಟ್ಟಿಗೆ ತಿಳಿಯುವದೋ ಎಂಬುದು ಪ್ರಶ್ನವಿದೆ. ಇಂಥ ಏಕಾಂತಪ್ರಿಯರೂ ವೇದಾಭ್ಯಾಸಜಡರೂ ಆದ ಶ್ರೀ ಅರವಿಂದ ಯೋಗಿಗಳು ರಸಿಕ ಕವಿಗಳಿರಬಹುದೆಂಬ ಕಲ್ಪನೆಯೂ ಸಹ ಆಗುವದಿಲ್ಲ. ಮಹಾತ್ಮರ ಚರಿತ್ರವು ವಿಚಿತ್ರವಾಗಿರುತ್ತದೆ ಎನ್ನುವದು ಇದಕ್ಕಾಗಿಯೇ. ಮಹಾತ್ಮರ ಅಂತಃಕರಣವು ಕುಸುಮಗಳಿಂದ ಕೋಮಲವೂ ವಜ್ರದಿಂದ ಕಠೋರವೂ ಇರುತ್ತದೆ ಎನ್ನುವ ಮಾತು ಸುಳ್ಳಲ್ಲ. ಶ್ರೀ ಅರವಿಂದ ಯೋಗಿಗಳು ಗೂಢ ವೇದಾಂತ ವಿವೇಚನೆಯಲ್ಲಿ ನಿಷ್ಣಾತರಿದ್ದಂತೆ ಮಾರ್ಮಿಕ ಕಾವ್ಯರಚನೆಯಲ್ಲಿ ಸಹ ಪ್ರವೀಣರಿರುತ್ತಾರೆ. "Ahana"ದಂತಹ ಸುಂದರ ಕಾವ್ಯವು ಮಹರ್ಷಿಗಳ ಲೆಕ್ಕಣಿಕೆಯಿಂದಲೇ ಹೊರಬಿದ್ದಿರುತ್ತದೆ ಎಂದು ಹೇಳಿದರೆ ಯಾರಿಗಾದರೂ ಸುಳ್ಳು ಕಾಣಬಹುದು; ಆದರೆ ಇದು ಸತ್ಯವಿರುತ್ತದೆ. ಶ್ರೀ ಅರವಿಂದ ಯೋಗಿಗಳ ನವ ಜೀವನದಾಯಿಯಾದ ಲೇಖಗಳ ಪರಿಚಯವು ಕನ್ನಡಿಗರಿಗೆ ಎಂದು ಆಗುವದೋ ಅದು ಸುದಿನವಾಗುವದು.

ಮಹರ್ಷಿಗಳ ಕೆಲವು ಬಂಗಾಲಿ ಶಿಷ್ಯರು ಚಂದ್ರನಗರದಲ್ಲಿ ನಿಂತು **"ಪ್ರವರ್ತಕ ಸಂಸ್ಥೆ"** ಯನ್ನು ಸ್ಥಾಪಿಸಿ, ತದ್ವಾರಾ ಶ್ರೀ ಅರವಿಂದ ಯೋಗಿಗಳ ಮತಗಳ ಪ್ರಸಾರವನ್ನು ನಡೆಸಿದ್ದಾರೆ. ಇಂಗ್ಲೀಶ ಭಾಷೆಯಲ್ಲಿ **"Standard Bearer"** ಎನ್ನುವದು, ಬಂಗಾಲಿಯಲ್ಲಿ "ಪ್ರವರ್ತಕ", "ನಭಾ", "ಬಿಜಲೀ" ಎನ್ನುವ ಪತ್ರಿಕೆಗಳೂ ಸಹಿತ ಶ್ರೀಮದ್ಯೋಗಿಗಳ (ಶ್ರೀ ಅರವಿಂದ ಯೋಗಿಗಳ) ಮತಗಳನ್ನು ಪ್ರಸಾರ ಮಾಡುವ ಸಾಧನಗಳೇ ಆಗಿವೆ. ಶ್ರೀ ಅರವಿಂದ ಯೋಗಿಗಳ ಫ್ರೆಂಚ್ ಬಂಧುಗಳಾದ ಗೃಹಸ್ಥರು ತಮ್ಮ ಧ್ಯೇಯವಾದ ಮಾನವ ಕುಟುಂಬದ ಕಲ್ಯಾಣವನ್ನು ಸಾಧಿಸಲಿಕ್ಕೆ ಜಪಾನದಲ್ಲಿ ಒಂದು ಸಂಸ್ಥೆಯನ್ನು 1918ರಲ್ಲಿ ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಉದ್ದೇಶವು ಭಾವೀ ಕಾಯ್ದ ಆರಂಭವೆಂದು ಏಶಿಯಾ ಖಂಡದಲ್ಲಿ ಒಕ್ಕಟ್ಟನ್ನು ಉಂಟು ಮಾಡುವದಿರುತ್ತದೆ. ಏಶಿಯವು ಎಚ್ಚೆತ್ತು ತನ್ನ ನಿಜ ಸ್ವರೂಪದ ಜ್ಞಾನವನ್ನು ಮಾಡಿಕೊಂಡು, ಸ್ವತಂತ್ರವಾದ ಬಳಿಕ ಜಗತ್ತಿಗೆ ತನ್ನ ಸಂಸ್ಕೃತಿಯನ್ನು ಕೊಡುವ ದಿವ್ಯ ಕಾರ್ಯವನ್ನುಮಾಡತಕ್ಕದ್ದಿರುತ್ತದೆ. ಇದರ ಕಾರ್ಯ ಪದ್ಧತಿಯನ್ನು ಕುರಿತು ಒಂದು ಪುಟ್ಟ ಪುಸ್ತಕವೂ ಬರೆಯಲ್ಪಟ್ಟಿದೆ. ಶ್ರೀಅರವಿಂದ ಯೋಗಿಗಳ ಸಹಕಾರಿ ಮಿತ್ರರಾದ ಎಮ್.ರಿಚರ್ಡರು ಈ ಧ್ಯೇಯವನ್ನು ಈಡೇರಿಸುವದರ ಸಲುವಾಗಿ ಜಗತ್ತಿನ ಪ್ರವಾಸಕ್ಕೆ ಹೊರಡತಕ್ಕವರಿರುತ್ತಾರೆ! ಜಪಾನದಲ್ಲಿ ಹೊರಡುವ "ಏಶಿಯನ್ ರಿವ್ಯೂ" ಎನ್ನುವ ಮಾಸ ಪತ್ರಿಕೆಯಲ್ಲಿ ಏಶಿಯಾ ಖಂಡದ ಪ್ರಾಚೀನ ವೈಭವವನ್ನೂ, ಅದರ ಭಾವೀಕಾರ್ಯವನ್ನೂ ಕುರಿತು ಹಲವು ಬಗೆಯ ಉದ್ಬೋಧಕ ಲೇಖಗಳು ಬರುತ್ತಿರುತ್ತವೆ.* ಶ್ರೀ ಅರವಿಂದ ಯೋಗಿಗಳ ತಪಶ್ಚರ್ಯವು ಮುಗಿಯುತ್ತ ಬಂದಿದ್ದು, ಅನುಯಾಯಿ ವರ್ಗದಿಂದ ಈ ರೀತಿಯಲ್ಲಿ ಭಾವೀ ಕಾರ್ಯಕ್ಕೆ ಆರಂಭವೂ ಆಗಿದೆ.

ಭರತ ಖಂಡದ ಪ್ರಸ್ತುತ ಪರಿಸ್ಥಿತಿಯು 1907–08ರಗಿಂತ ತೀರ ಭಿನ್ನವಾಗಿದ್ದು, ಮಹರ್ಷಿಗಳ ಆಗಮನವು ಬ್ರಿಟಿಶ ಹಿಂದೂಸ್ಥಾನಕ್ಕೆ ಎಂದು ಆಗುವದೋ ಎಂದು ಎಲ್ಲರೂ ತೀರ ಆತುರರಾಗಿದ್ದಾರೆ. ನಾಗಪೂರದ 1920ರ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಲಿಕ್ಕೆ ಸಮ್ಮತಿಯನ್ನು ಕೇಳಿದ್ದರು. ಆದರೆ ಮಹರ್ಷಿಗಳು 12 ವರುಷಗಳವರೆಗೆ ಪೂರ್ಣ ತಪಶ್ಚರ್ಯದ ವಿನಾ ಹೊರಬೀಳಲಿಕ್ಕೆ ಬರುವದಿಲ್ಲವೆಂದು ಹೇಳಿ ಔತಣವನ್ನು ಸ್ವೀಕರಿಸಲಿಲ್ಲ.

ಕೆಲವರಿಗೆ ಮಹರ್ಷಿ ಅರವಿಂದರ ಮತಗಳು ಸೇರಲಿಕಿಲ್ಲ: ಅಥವಾ ಅವು ಬೇರೆ ಕೆಲವು ಮಹಾಪುರುಷರ ಮತಗಳಂತೆ ಇರಲಿಕ್ಕಿಲ್ಲ, ಆದ್ದರಿಂದ

ಶ್ರೀ ಅರವಿಂದ ಯೋಗಿಗಳ ಯೋಗ್ಯತೆಯು ಕಡಿಮೆಯೆಂದು ಅಥವಾ ಆ ಎರಡನೇ ಮಹಾಪುರುಷರು ಕ್ಷುಲ್ಲಕರೆಂದು ಯಾರೂ ತಿಳಿಯುವ ಕಾರಣವಿಲ್ಲ. ಪ್ರಾಚೀನ ಕಾಲದಲ್ಲಿ ಸಹ ಸಮಾನ ಯೋಗ್ಯತೆಯ ಮಹಾಪುರುಷರಲ್ಲಿ ಮತಭೇದವು ಕಂಡು ಬರುತ್ತಿತ್ತು. ಭಿನ್ನ ಭಿನ್ನ ಸ್ಮೃತಿ ಗ್ರಂಥಗಳು ಈ ಮಾತಿಗೆ ಸಾಕ್ಷಿಯಾಗಿವೆ. ಮನು ಮತ್ತು ಯಾಜ್ಞವಲ್ಕ್ಯರಲ್ಲಿ ಯಾರು ಶ್ರೇಷ್ಠರು? ಮಹಾತ್ಮಾ ಗಾಂಧಿ ಹಾಗೂ ಲೋಕಮಾನ್ಯರಲ್ಲಿ ಕೆಲವು ಮತಭೇದವಿದ್ದ ಮಾತ್ರಕ್ಕೆ ಅವರಲ್ಲಿ ಒಬ್ಬರು ಮತ್ತೊಬ್ಬರಿಗಿಂತ ಕಡಿಮೆಯೆಂದು ತಿಳಿಯುವದು ತಪ್ಪು. ಹಿಮಾಲಯದ ಶಿಖರಗಳು ಎತ್ತರವಾದಷ್ಟೇ ಫ್ಯಾಸಿಫಿಕ್ ಮಹಾಸಾಗರವು ಆಳವಾಗಿದೆ. ಇವುಗಳಲ್ಲಿ ಯಾವುದು ಶ್ರೇಷ್ಠ ಮತ್ತು ಸುಂದರವೆಂದು ವಾದಿಸುತ್ತ ಕೂಡ್ರುವದು ಮೂರ್ಖತನವಾಗುತ್ತದೆ. ಬಾಳೆಯ ಸವಿ ಬಾಳೆಗೆ; ಮಾವಿನ ಸವಿ ಮಾವಿಗೆ. ಮಹರ್ಷಿ ಅರವಿಂದರು ತಮ್ಮ ತೀಕ್ಷ್ಣ ಬುದ್ಧಿಕೌಶಲ್ಯದಿಂದ ಜಗತ್ತಿನ ವಿಚಾರಕ್ಕೆ ಒಂದು ತರದ ಸ್ವರೂಪ ಕೊಡುತ್ತಲಿದ್ದಾರೆ. ಅದರಲ್ಲಿ ಮತಭೇದ–ಗಳಾಗುತ್ತಿರಬಹುದು. ಅದರಿಂದ ಅವರ ವಿದ್ವತ್ತೆಗೆ ಅಥವಾ ಯೋಗ್ಯತೆಗೆ ಏನೂ ಬಾಧೆ ಬರುವದಿಲ್ಲ. ಇರಲಿ, ಮಹರ್ಷಿ ಅರವಿಂದರು ತಮ್ಮ ದೀರ್ಘ ತಪಶ್ಚರ್ಯದಲ್ಲಿ ಶಾಂತ ಚಿತ್ತದಿಂದ ಕಂಡುಹಿಡಿದ, ಪರಮೇಶ್ವರೀ ಆದೇಶವನ್ನು ಭಾರತೀಯರಲ್ಲಿ ಪ್ರಸಾರ ಮಾಡಲಿಕ್ಕೆ ಮತ್ತೆ ಬರಲೆಂದೂ, ಈ ಕಾರ್ಯವನ್ನು ಮಾಡಲಿಕ್ಕೆ ಪರಮೇಶನು ಅವರಿಗೆ ದೀರ್ಘಾಯುಷ್ಯವನ್ನು ದಯಪಾಲಿಸಲೆಂದು ಅನನ್ಯ ಭಾವದಿಂದ ಪ್ರತಿಯೊಬ್ಬರೂ ಬೇಡಿಕೊಳ್ಳೋಣ.

******

## ಅಧ್ಯಾಯ 7

## **ಮತಗಳು**

**ಸ್ಥಿತಪ್ರಜ್ಞಸ್ಯ ಕಾ ಭಾಷಾಸಮಾಧಿಸ್ಥಸ್ಯ ಕೇಶವ ।**

**– ಶ್ರೀಮದ್ಭಗವದ್ಗೀತಾ**

ಮಹರ್ಷಿ ಅರವಿಂದ ಘೋಷರು ಇಂಥ ಯಾವ ಮತಗಳನ್ನು ಬೋಧಿಸಿದರೆಂದು ಸರಕಾರದವರು ಅವರಿಗೆ ಕೈತೊಳಕೊಂಡು ಬೆನ್ನು ಹತ್ತಿದರು; ಇಂಥ ಯಾವ ತತ್ವಜ್ಞಾನದ ವಿವರಣವನ್ನು ಮಾಡಿದರೆಂದು ವಿದ್ವಜ್ಜನರು ಅವರಿಗೆ ಮನ್ನಿಸುವರು; ಇಂಥ ಅದಾವ ಸಂದೇಶವನ್ನು ಹೇಳಿದರೆಂದು ಭಾರತೀಯರು

ಸ್ಫೂರ್ತಿಗೊಂಡು ಅವರಿಂದ ಯೋಗಿಗಳನ್ನು ತಮ್ಮ ಹೃದಯ ಮಂದಿರಗಳಲ್ಲಿ ಪೂಜಿಸುತ್ತಿರುವರು; ಹೇಗೆ ಏನನ್ನು ಮಾಡಿರುವರೆಂದು ಲಾಲಾ ಲಜಪತರಾಯ–ರಂತಹವರು ಅರವಿಂದ ಯೋಗಿಗಳ ಮುಂದೆ ಭಕ್ತಿಯಿಂದ ತಲೆಬಾಗುವರು, ಅಥವಾ ಜಗತ್ಕವಿಕುಲಲಾಮರಾದ ರವೀಂದ್ರನಾಥರು ಶ್ರೀ ಅರವಿಂದರಿಗೆ **ಇವರು ಋತವನ್ನು ದರ್ಶಿಸಿದ ಋಷಿ** (**"**ಹೀ ಈಜ್ ಟ್ರೂ ಋಷಿ**"**) ಎಂದೆನ್ನುವರು ಎನ್ನುವದನ್ನು ತಿಳಿಯಲಿಕ್ಕೆ ವಾಚಕರು ಉತ್ಸುಕರಾಗಿರಬಹುದು. ಆದರೆ ಅವರ ಮತಗಳನ್ನು ನಿರ್ದೋಷವಾಗಿ ವಾಚಕರ ಮುದೆ ಇಡಲಿಕ್ಕೆ ಈ ಪಾಮರ ಲೇಖಕನು ಸಮರ್ಥನಲ್ಲ. ಒಬ್ಬ ಕವಿಯು ಅಂದಂತೆ **"**ಕನ್ನಡಿಯೊಳಗೆಷ್ಟು ತೋರ್ಪುದು ಕಾಂಚನಾದ್ರಿ**"** ಎಂದು ಈ ಲೇಖಕನೂ ಅನ್ನುತ್ತಾನೆ. ಮಹರ್ಷಿಗಳ ಆ ಉದಾತ್ತ ವಿಚಾರಗಳನ್ನು ಆಕಲನ ಮಾಡುವ ಸಾಮರ್ಥ್ಯವಿಲ್ಲವೆಂದು ಒಳ್ಳೊಳ್ಳೆ ಪಂಡಿತರು ಕೈಯ್ಯೂರಿರುವಾಗ ಈ ಲೇಖಕನ ಪಾಡು ಎತ್ತ**?** ಅರವಿಂದ ಯೋಗಿಗಳ ಗುಣಗಳ ಸರಿಯಾದ ವರ್ಣನೆ ಮತ್ತು ಮತಗಳ ಪ್ರತಿಪಾದನೆಯಾಗಬೇಕಾದರೆ ಅದಕ್ಕೆ ಅಂಥ ಯೋಗ್ಯತೆಯವನೇ ಬೇಕು. ಮಹಾಸಾಗರದಲ್ಲಿ ಗುಬ್ಬಿಯು ತನ್ನ ಪುಟ್ಟ ಚುಂಚುವಿನಿಂದ ನಾಲ್ಕು ಹನಿಗಳನ್ನು ತಕ್ಕೊಂಡು ತೃಪ್ತಿಪಡುವಂತೆ ಈ ಲೇಖಕನ ಸ್ಥಿತಿಯಿದೆ. ಮಹರ್ಷಿಗಳ ಅಗಾಧ ಚರಿತ್ರದ ವಾಚನದಿಂದ ಸ್ಫೂರ್ತಿಗೊಂಡು ಅವರ ಮೇಲಿನ ಭಕ್ತಿಯಿಂದ ಇದೊಂದು ಅಲ್ಪ ಸೇವೆಯೆಂದು ಈತನು ಈ ಕೆಲಸವನ್ನು ಮಾಡಿದ್ದಾನೆ. ಆದುದರಿಂದ ವಾಚನಾಂತ್ಯದಲ್ಲಿ ವಾಚಕರಿಗೆ ನಿರಾಶೆಯಾದರೆ ಅವರು ಈತನನ್ನು ಕ್ಷಮಿಸಬೇಕೆಂದು ನಮ್ರತನದಿಂದ ಭಿನ್ನವಿಸುತ್ತಾನೆ.

ಶ್ರೀ ಅರವಿಂದರ ಸಾಧಕಾವಸ್ಥೆಯು 1905ನೆ ಇಸವಿಗೆ ಮುಗಿಯಿತೆಂದು ಹೇಳಬಹುದು. 1905 ರಿಂದ 1908ರವರೆಗೆ ಪತ್ನಿಗೆ ಬರೆದ ಪತ್ರಗಳಲ್ಲಿ ಅರವಿಂದ ಯೋಗಿಗಳ ದೇವ ಸಂದರ್ಶನದ ವಿಷಯಕ್ಕಿರುವ ವ್ಯಾಕುಲತೆಯು ಕಂಡುಬರುವಂತಿದೆ. ಶಾಸ್ತ್ರೋಕ್ತ ಮಾರ್ಗದಿಂದ ಕರ್ಮ ಮಾಡಿ 1909ರಲ್ಲಿ ಸಿದ್ಧಿಯನ್ನು ಪಡೆದರು. ಅಲಿಪುರದ ತುರಂಗದಲ್ಲಿ ಶ್ರೀ ಭಗವಾವ್ ವಾಸುದೇವನ ದರ್ಶನವಾಗಿ ಆದೇಶವು ಸಿಕ್ಕ ನಂತರ ಶ್ರೀ ಅರವಿಂದರು ಸಿದ್ಧಯೋಗಿಗಳಾದರು. 1907ರ ಚಳವಳಿಯು ಧಾರ್ಮಿಕ ಅಧಿಷ್ಠಾನದ ಮೇಲೆ ಆರಂಭಿಸಲ್ಪಡದ್ದರಿಂದ ಅದು ನಷ್ಟವಾಯಿತು ಎಂದು ಇವರ ಮತವಿದೆ. ಕೇವಲ ರಾಜಕಾರಣದಿಂದಲೇ ಯಾವ ದೇಶವೂ ಮುಂದೆ ಬರಲಾರದು. ರಾಜಕೀಯ ಮುತ್ಸದ್ದಿತನವು ಬಹು ದಿವಸ ತಡೆಯುವದಿಲ್ಲ. ಯಾಕೆಂದರೆ ಅದರ ಬುಡಕ್ಕೆ ಧಾರ್ಮಿಕ

ಭಾವನೆಯಿರುವದಿಲ್ಲ. ಒಂದು ಪಕ್ಷವು ಮತ್ತೊಂದು ಪಕ್ಷವನ್ನು ಬೌದ್ಧಿಕ ಯುಕ್ತಿ–ಪ್ರಯುಕ್ತಿಗಳಿಂದ ಪೇಚಿನಲ್ಲಿ ತರಲಿಕ್ಕೆ ಹವಣಿಸುವಾಗ ಧಾರ್ಮಿಕ ಬಂಧನವಿಲ್ಲದಿದ್ದರೆ ತೀರ ಅನರ್ಥಗಳಾಗುತ್ತವೆ. ಪ್ರತಿಪಕ್ಷಿಗಳಿಗೆ ತಮ್ಮ ಶತ್ರುಗಳ ಸೇಡು ತೀರಿಸುವ ರೀತಿಯಲ್ಲಿ ನೀತಿ ನಿರ್ಬಂಧಗಳು ಉಳಿಯದ್ದರಿಂದ ಅನೀತಿಗೆ ಆಸ್ಪದ ಸಿಗುವ ಸಂಭವವು ಬಹಳವಿರುತ್ತದೆ. 1905ರ ಸುಮಾರಿಗೆ ದೇಶದಲ್ಲಿ ಎದ್ದ ರಾಜಕೀಯ ಬಿರುಗಾಳಿಯ ಕೆಲವು ಪರಿಣಾಮವೂ, ಅಂತಃಕರಣದಲ್ಲಿ ಜಾಗೃತವಾದ ಧರ್ಮಜಿಜ್ಞಾಸೆಯ ಕೆಲವು ಪರಿಣಾಮವೂ ಒಟ್ಟುಗೂಡಿ ಶ್ರೀ ಅರವಿಂದರನ್ನು ರಾಜಕೀಯ ರಣಾಂಗಣಕ್ಕೆ ತಂದಿದ್ದವು. ಆದರೆ ಆ ಕಾಲಕ್ಕೆ ಬಂದ ವಿವಿಧ ಅನುಭವಗಳಿಂದ ಧಾರ್ಮಿಕ ಸುಧಾರಣೆಯ ಅವಶ್ಯಕತೆಯು ತೀರ ಅವಶ್ಯವೆಂದು ಅವರು ಮನಗಂಡರು. ಹಾಗೂ ತಮಗೆ ಪ್ರಾಪ್ತವಾದ ಸಿದ್ಧಸ್ಥಿತಿಯನ್ನು ಸ್ಥಿರಗೊಳಿಸಲಿಕ್ಕೆ ಕೆಲವು ದಿನ ಏಕಾಂತವು ಅವಶ್ಯವೆಂದೂ, ಈ ತೆರನಾಗಿ ಮಾಡಿದರೆ ಆಗುವ ಕಾರ್ಯವೇ ಹಿಂದೂಸ್ಥಾನದ ಚಿರಕಾಲಿಕ ಹಿತದ ಕೆಲಸವಾಗುವದೆಂದೂ ತಪಶ್ಚರ್ಯಕ್ಕಾಗಿ ಅವರು ಪಾಂಡಿಚೇರಿಗೆ ಹೋದರೆಂದೂ ಹಿಂದಿನ ಪ್ರಕರಣಗಳಲ್ಲಿ ಹೇಳಿದೆ.

ಮಹರ್ಷಿಗಳ ದೃಷ್ಟಿಯಿಂದ ಮನುಷ್ಯನ ಆದ್ಯಕರ್ತವ್ಯವೆಂದರೆ ಆತ್ಮೋನ್ನತಿಯನ್ನು ಮಾಡಿಕೊಳ್ಳುವದು, ಯೋಗಿಯಾಗುವದು. ಯೋಗಿಯಾಗಲು ಅಪೇಕ್ಷೆಯುಳ್ಳವನು ಮೊದಲು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು: ಆತ್ಮಶುದ್ಧಿಯ ಮಾರ್ಗಗಳನ್ನು ಕುರಿತು ಅವರು **"ಯೋಗ ಸಮನ್ವಯ"** ಎನ್ನುವ ಸುಂದರವಾದ ನಿಬಂಧವನ್ನು ಬರೆದಿದ್ದಾರೆ. ಮಹರ್ಷಿಗಳ ಕಟಾಕ್ಷವು ಅಂತರ್ಜ್ಞಾನದ ಮೇಲೆ ಬಹಳವಿದೆ. ವಿವಾದ ಕುಶಲವಾದ ಬುದ್ಧಿಯನ್ನು ಅವರು ತಿರಸ್ಕರಿಸಿದ್ದಾರೆ.*

ಅಂತರ್ಜ್ಞಾನವು ಪ್ರಾಪ್ತವಾಗಲಿಕ್ಕೆ ಆತ್ಮಶುದ್ಧಿಯಾಗಲಿಕ್ಕೇ ಬೇಕು ಆತ್ಮಶುದ್ಧಿಯ ಸಲುವಾಗಿ ಪ್ರಾಚೀನ ಋಷಿಗಳು ಹಲವು ಮಾರ್ಗಗಳನ್ನು ಕಂಡುಹಿಡಿದಿದ್ದಾರೆ. ಅವುಗಳ ನಿಸ್ಸಂದಿಗ್ಧವಾದ ವರ್ಣನವು ಮೇಲೆ ಹೇಳಿದ ನಿಬಂಧದಲ್ಲಿ ಅರವಿಂದ ಯೋಗಿಗಳು ಮಾಡಿಟ್ಟಿದ್ದಾರೆ. ಹಠಯೋಗವು ಆತ್ಮಜ್ಞಾನಿಗೆ ಅಷ್ಟೊಂದು ಉಪಯುಕ್ತವಲ್ಲವೆಂದು ಅವರ ಮತವಿದೆ. ಯಾಕೆಂದರೆ ಅದರ ಸಾಧನೆಯು ಮಾನಸಿಕ ಶುದ್ಧೀಕರಣಕ್ಕಿಂತಲೂ ದೇಹಶುದ್ಧೀಕರಣದ ಕಡೆಗೆ ಹೆಚ್ಚು ಸಹಾಯಕವಾಗಿದೆ, ರಾಜಯೋಗವು ಮಾತ್ರ ಆತ್ಮಸಾಧನೆಯ ಕೆಲಸದಲ್ಲಿ ಸಾಧಕನಿಗೆ ಉಪಯುಕ್ತವಿದೆ. ಇದರಂತೆಯೇ ಭಕ್ತಿ, ಜ್ಞಾನ, ಮತ್ತು ಕರ್ಮ

ಮಾರ್ಗಗಳೂ ಇವೆ. ಇವುಗಳನ್ನು ಆಚರಿಸುವಾತನು ನಾಲ್ಕು ಸಾಧನಗಳ ಉಪಯೋಗವನ್ನು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ; **ಶಾಸ್ತ್ರ, ಉತ್ಸಾಹ, ಗುರು ಮತ್ತು ಕಾಲ** ಇವೇ ಆ ನಾಲ್ಕು ಸಾಧನಗಳು. ಇನ್ನು **ಶಾಸ್ತ್ರವೆಂದರೆ** ಶಬ್ದಪ್ರಮಾಣ. ಈ ಶಬ್ದಪ್ರಮಾಣವು ವೇದ ಮತ್ತು ಉಪನಿಷತ್ತುಗಳಂಥ ಲಿಖಿತ ಗ್ರಂಥಗಳಲ್ಲಿ ಸಿಕ್ಕಬಹುದು. ಇಲ್ಲವೇ ಅಂತರಂಗದಲ್ಲಿ ಹೊಳೆಯಬಹುದು. ಪೂರ್ಣ ಶುದ್ಧಾವಸ್ಥೆಯು ಪ್ರಾಪ್ತವಾಗದೇ ಇದ್ದುದರಿಂದ ಅಂತಸ್ಥ ಆದೇಶವು ಶುದ್ಧವಿರುವ ಸಂಭವವು ಕಡಿಮೆ ಇರುವದರಿಂದ ವೇದಾದಿ ಅನುಭವಿಕ ಗ್ರಂಥಗಳನ್ನು ಅವಲಂಬಿಸಿ ನಡೆಯತಕ್ಕದ್ದು. ಯಾಕೆಂದರೆ ಇವು ಋಷಿ–ಮುನಿಗಳಿಂದ ಆಚರಿಸಲ್ಪಟ್ಟು ಬಂದ ಅನುಭವಗಳಾಗಿವೆ.

ಎರಡನೆಯ ಸಾಧನವು **ಉತ್ಸಾಹವು**. ಸಾಧಕನಲ್ಲಿ ಸಾಧ್ಯದ ವಿಷಯದಲ್ಲಿ ಉತ್ಕಂಠೆಯು ಬೆಳೆದಂತೆ ಫಲವು ಬೇಗ ಸಿಗುವದು. ಒಂದೇ ಒಂದು ಧ್ಯೇಯದ ಹುಚ್ಚು ಹಿಡಿದು ಎರಡನೆಯ ಯಾವ ಕಲ್ಪನೆ, ವಿಚಾರಗಳ ಸಂಪರ್ಕವೂ ಸಹ ಆಗದ ಹಾಗಾಗಹತ್ತುತ್ತಲೇ ಸಿದ್ಧಿಯು ಸಮೀಪಿಸಿತು ಎಂದು ತಿಳಿಯಬೇಕು. ಸರ್ವಶಕ್ತಿವಂತನ ದರ್ಶನದ ಉತ್ಸುಕತೆಯಲ್ಲಿ ತನ್ನ ಅಹಂಕಾರಾದಿಗಳನ್ನು ಮರೆತುಹೋದಂತೆ ಸಾಧಕನು ಸಿದ್ಧಿಯ ಸಮೀಪಕ್ಕೆ ಸಾಗುತ್ತಾನೆ.

ಮಹತ್ವದ ಮೂರನೇಯ ಸಾಧನವೆಂದರೆ **'ಗುರು'**. ಜಗತ್ತಿಗೇ ಗುರುವಾದ ಪರಮೇಶನೇ ಮನುಷ್ಯನ ಅಂತರಂಗದಲ್ಲಿ ವಾಸವಾಗಿರುದರಿಂದ ಅವನಿಗೆ ಸಾಕ್ಷಿಯಾಗಿ ತನ್ನ ಯೋಗವನ್ನು ಸಾಗಿಸುತ್ತಿರಬೇಕು. ಆತನ ಧ್ಯೇಯ ವಿಷಯಕ್ಕೆ ಪೂರ್ಣ ನಂಬುಗೆಯನ್ನಿಟ್ಟು ಕಾರ್ಯ ಮಾಡಿದರೆ ಸಿದ್ಧಿಯು ಸಿಗಲೇಬೇಕು. ಆದರೆ ಇದಕ್ಕೆ ಬಹಳ ಧೈರ್ಯವು ಬೇಕು. ಸಾಮಾನ್ಯ ವಿಚಾರದವರಿಗೆ ಇದು ಅಸಾಧ್ಯದ ಕೆಲಸವಾಗಿದೆ. ಹಲವು ತರದ ಮಾನವೀ ವೃತ್ತಿಗಳು ಆಗಾಗ್ಗೆ ಮಧ್ಯದಲ್ಲಿ ಬಂದು ಸಾಧಕನನ್ನು ಕಾರ್ಯಚ್ಯುತನನ್ನಾಗಿಸಿಲು ಯತ್ನಿಸುವವು. ಆಗ ಸಾಧಕನಿಗೆ ಆ ಸ್ಥಿತಿಯಲ್ಲಿ ಕಲ್ಪನಾಗಮ್ಯನಾದ ಸರ್ವೇಶನ ವಿಷಯಕ್ಕೆ ಅಷ್ಟೊಂದು ವಿಶ್ವಾಸವುಂಟಾಗುವದಿಲ್ಲ. ಆದುದರಿಂದ ಇಂಥ ಸಮಯದಲ್ಲಿ ಆತನು ಸಾಕಾರ ಹಾಗೂ ಸಗುಣನಾದ ಗುರುವನ್ನು ಎಲ್ಲಿಯಾದರೂ ಗೊತ್ತು ಮಾಡಿಕೊಳ್ಳಬೇಕು. ಭಗವಾನ್ ಶ್ರೀ ಕೃಷ್ಣ, ರಾಮಕೃಷ್ಣ ಪರಮಹಂಸರಂತಹ ಭೂತಕಾಲೀನ ಯೋಗಿಗಳ ಉಜ್ವಲ ಚರಿತ್ರಗಳನ್ನು ಲಕ್ಷಿಸಿ ಆಚರಿಸಬೇಕು.

(ಸಶೇಷ)




ಮಿನುಮಿನುಗು ತಾರೆಗಳ ವಿಶ್ವಗೀತೆಯಾ ಗಾನ ಆಲಿಸುತ್ತ
ತಮವದುವು ಈಗ, ಅರಳಲೆನೆ ಬೇಗ ಜಾಗರಿಸಿಕೊಂಡಿತಿತ್ತ
ಸುಪ್ರಭೆಯ ಪಥದಿ ಸುಮನಸದ ಯಾತ್ರೆ ಸರಣಿಯೊಲು ಮೇಳವಾಗಿ
ಬೆಳ್ದಿನದ ಮಾಲೆ ಮಹಾಬೆಳಕಾಗಿ ಹೊಳೆಹೊಳೆದು ಕಾಂತಿಯಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 55)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಆ ದಿವ್ಯ–ಭೂಮ–ಚಿನ್ಮಯದ ಜನ್ಮ ಉದ್ಭವಿಸಿ ಅರಳಿತಿಲ್ಲಿ
ಸಂಹತದಿ ಸ್ಥಿತದ ಚಿತ್–ಶಕ್ತಿ–ಬೀಜ ಸ್ಫುರಣೆಯಲಿ ಪ್ರಕಟವಿಲ್ಲಿ
ಅನಂತಾನಂತದತ್ತ ವಿಕಸನದಿ ಪರಿಪೂರ್ಣ ಹಂತವಿಂದು
ಆ ಸಾಂತಕಿದ್ದ ಮಂದ–ತೆವಳುವಿಕೆ ತಾನಿಲ್ಲಿ ಅಂತ್ಯಗೊಂಡು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 1 ಪುಟ 298)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.